ಸಂಪುಟ: 13 Volume | ಸಂಚಿಕೆ: 317 Issue | ಪುಟಗಳು 08 Pages | ಶುಕ್ರವಾರ 06 ಫೆಬ್ರವರಿ 2026 | ₹6 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

ಸಂಪಾದಕರು: ರಮೇಶ ರೆಡ್ಡಿ

Mallammanudi Regional News Paper

ಪ್ರಾದೇಶಿಕ ಕನ್ನಡ ದೈನಿಕ

**ಬೆಳಗು**

ಹೆಚ್ಚು ಕಷ್ಟ ಪಟ್ಟು ದುಡಿದಷ್ಟೂ ಅದೃಷ್ಟ ಹೆಚ್ಚಾಗಿ ನಿಮ್ಮನ್ನು ಒಲಿಯುತ್ತದೆ.

–ಥಾಮಸ್ ಜಫರ್ಸನ್

ಲಾಡ್ ಸಾರ್ವಜನಿಕ ಕ್ಷಮೆ ಯಾಚಿಸಬೇಕು 6

ಲಕ್ಷ್ಮೀದೇವಿ ಪಲ್ಲಕ್ಕಿ ಮೆರವಣಿಗೆ 7

ಕಲಿಕೇರಿಯವರ ಅನುಭವದ ರಸಧಾರೆ..! 8



ಸಂಸದ ಭವನದಲ್ಲಿ ನಮ್ಮ AICC ಪ್ರಧಾನ ಕಾರ್ಯದರ್ಶಿ K. C. Venugopal ಅವರ ಜನ್ಮದಿನವನ್ನು ಇಂದು ಸಂಭ್ರಮದಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ Rahul Gandhi, Priyanka Gandhi ಬೀದರ ಸಂಸದರಾದ ಶ್ರೀ ಸಾಗರ ಖಂಡ್ರೆ ಹಾಗೂ ಹಲವು ಸಂಸದರು ಉಪಸ್ಥಿತರಿದ್ದರು.

## ಪಾಪನಾಶ:ಅಭಿವೃದ್ಧಿ ಕಾಮಗಾರಿಗೆ ಚಾಲನೆ

ಬೀದರ: ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದ ವತಿಯಿಂದ "ಪ್ರಸಾದ" ಯೋಜನೆಯಡಿ ಬೀದರ ಜಿಲ್ಲೆಯ ಬೀದರ ನಗರದ ಪಾಪನಾಶ ದೇವಸ್ಥಾನ ಅಭಿವೃದ್ಧಿ ಕಾಮಗಾರಿ ಆಯ್ಕೆಯಾಗಿದ್ದು, ದಿನಾಂಕ:07–03–2024 ರಂದು ಬೀದರ ನಗರದ ಪಾಪನಾಶ ದೇವಸ್ಥಾನದ ಆವರಣದಲ್ಲಿ ಗೌರವಾನ್ವಿತ ಪ್ರಧಾನ ಮಂತ್ರಿಗಳು, ಭಾರತ ಸರ್ಕಾರ, ನವದೆಹಲಿ ಅವರು ವರ್ಚುವಲ್ ಮೂಲಕ ಶಂಕುಸ್ಥಾಪನೆ ಕಾರ್ಯಕ್ರಮ ಉದ್ಘಾಟಿಸಿರುತ್ತಾರೆ. ಪ್ರಯುಕ್ತ ಬೀದರ ಜಿಲ್ಲೆಯ ಬೀದರ ನಗರದ ಪಾಪನಾಶ ದೇವಸ್ಥಾನ ಅಭಿವೃದ್ಧಿ ಕಾಮಗಾರಿಗೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ.ಖಂಡ್ರೆ ಅವರು ದಿನಾಂಕ:07–02–2026 ರಂದು ಚಾಲನೆ ನೀಡಲಿದ್ದಾರೆಂದು ಜಿಲ್ಲಾಧಿಕಾರಿ ಹಾಗೂ ಬೀದರ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯ ಅಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಸಚಿವ ಜಮೀರ್ ಅಹಮದ್ ಖಾನ್ ಅವರು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ವತಿಯಿಂದ ಹಜ್ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮ ದಲ್ಲಿ ಪಾಲ್ಗೊಂಡು ಸವಲತ್ತು ವಿತರಿಸಿದರು. ಮೌಲಾನಾ ಮಕ್ಸುದ್ ಇಮ್ರಾನ್, ಮುಖ್ಯಮಂತ್ರಿ ಯವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಪರಿಷತ್ ಸದಸ್ಯೆ ಬಲ್ಕಿಸ್ ಬಾನು, ಕೆ ಎಂಡಿಸಿ ಅಧ್ಯಕ್ಷ ಬಿಕೆ ಅಲ್ತಾಫ್ ಖಾನ್, ಹಜ್ ಸಮಿತಿ ಅಧ್ಯಕ್ಷ ಟಿಪ್ಪು, ವಖ್ಫ್ ಬೋರ್ಡ್ ಮಾಜಿ ಅಧ್ಯಕ್ಷ ಅನ್ವರ್ ಬಾಷಾ, ಮುಜಾಯಿದ್ ಉಪಸ್ಥಿತರಿದ್ದರು.




ಬಿಜೆಪಿ ರಾಜ್ಯ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಅವರನ್ನು ದೆಹಲಿಯಲ್ಲಿ ಭೇಟಿಯಾಗಿದ್ದಾರೆ. ರಾಜ್ಯ ರಾಜಕಾರಣ ಕುರಿತ ಬೆಳವಣಿಗೆ ಬಗ್ಗೆ ಚರ್ಚೆ ನಡೆಸಿರುವುದಾಗಿ ಮೂಲಗಳು ಖಚಿತ ಪಡಿಸಿವೆ.

## ಹೈ–ಸ್ಪೀಡ್ ರೈಲು ಬೀದರ್‌ಗೆ ವಿಸ್ತರಿಸಬೇಕು

• ಮಲ್ಲಮ್ಮ ನುಡಿ ವಾರ್ತೆ ನವದೆಹಲಿ

ರಾಷ್ಟ್ರದ ಅಗತ್ಯಗಳಿಗೆ ಮೀರಿ ಕೇಂದ್ರ ಬಜೆಟ್ ನಲ್ಲಿ ರೈಲ್ವೆ ವಲಯಕ್ಕೆ ಹೆಚ್ಚು ಅನುದಾನ, ಯೋಜನೆಗಳನ್ನು ನೀಡಿರುವ ಬಗ್ಗೆ ಮಾಜಿ ಪ್ರಧಾನಿಗಳಾದ ಹೆಚ್.ಡಿ. ದೇವೇಗೌಡರು ಕೇಂದ್ರದ ರೈಲ್ವೆ ಸಚಿವ ಅಶ್ವಿನಿ ವೈಷ್ಣವ ಅವರನ್ನು ಅಭಿನಂದಿಸಿದ್ದಾರೆ.

ಈ ಬಗ್ಗೆ ರೈಲ್ವೆ ಸಚಿವರಿಗೆ ಪತ್ರ ಬರೆದಿರುವ ಮಾಜಿ ಪ್ರಧಾನಿ, ಬೆಂಗಳೂರು–ಹೈದರಾಬಾದ್ ಹೈ–ಸ್ಪೀಡ್ ರೈಲ್ವೆ ಕಾರಿಡಾರ್ ಅನ್ನು ಬೀದರ್ ವರೆಗೆ ವಿಸ್ತರಿಸಬೇಕು. ಇದು ಉತ್ತರ ಕರ್ನಾಟಕ ಮತ್ತು ತೆಲಂಗಾಣ ಪ್ರದೇಶಗಳಿಗೆ ಹೆಚ್ಚು ಅನುಕೂಲ ಆಗುತ್ತದೆ ಎಂದು ಮನವಿ ಮಾಡಿರುವ ಮಾಜಿ ಪ್ರಧಾನಿಗಳು; ಈ ಮೂಲಕ ಬೀದರ್ ಭಾಗದ ಅಗತ್ಯಗಳಿಗೆ ಅನುಕೂಲ ಆಗುತ್ತದೆ ಎಂದಿದ್ದಾರೆ. ಸಾಮಾನ್ಯವಾಗಿ ರಸ್ತೆ



ಅಥವಾ ರೈಲು ಮೂಲಕ 8–10 ಗಂಟೆಗಳು ಆಗುತ್ತದೆ. ಈ ದೀರ್ಘ ಪ್ರಯಾಣವು ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಪ್ರದೇಶಗಳಿಗೆ ಪ್ರಗತಿಗೆ ತೀವ್ರವಾಗಿ ಅಡ್ಡಿಯಾಗುತ್ತದೆ ಎಂದು ಹೇಳಿದ್ದಾರೆ.

## ಜೋಶಿ, ಎಚ್‌ಡಿಕೆ ಸ್ಪಂದನೆ ಸ್ವಾಗತ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ಬೆಂಗಳೂರು– ಪುಣೆ– ಮುಂಬೈ ನಡುವೆ ಹೈಸ್ಪೀಡ್ ರೈಲು ಕಾರಿಡಾರ್ ಅಗತ್ಯವಾಗಿದೆ ಎಂದು ಹೇಳಿದ್ದೆ. ಇದಕ್ಕೆ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಮತ್ತು ಎಚ್ ಡಿ ಕುಮಾರಸ್ವಾಮಿ ಈ ಬಗ್ಗೆ ರೈಲ್ವೆ ಸಚಿವ ಅಶ್ವಿನ್ ವೈಷ್ಣವ್ ಅವರೊಂದಿಗೆ ಚರ್ಚಿಸಿರುವುದಕ್ಕೆ ಧನ್ಯವಾದ ಹೇಳುತ್ತೇನೆ ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ ಬಿ ಪಾಟೀಲ ಹೇಳಿದ್ದಾರೆ.

ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗಳಿಗೆ ಉತ್ತರಿಸಿ, ಇದರಲ್ಲಿ ರಾಜಕೀಯವೇನೂ ಇಲ್ಲ. ಇದು ಕೇವಲ ಭೇಟಿಗೆ ಮಾತ್ರ ನಿಲ್ಲದೆ, ತಾರ್ಕಿಕ ಅಂತ್ಯ ಕಾಣುವಂತೆ ಮಾಡಬೇಕು ಎಂದು ನಾನು ಮನವಿ ಮಾಡಿಕೊಳ್ಳುತ್ತೇನೆ ಎಂದಿದ್ದಾರೆ.

ಲಿಂಗಾಯತ ಶಾಸಕರ ಸಭೆ ತಪ್ಪಲ್ಲ: ನಾಲ್ಕು ದಿನಗಳ ಹಿಂದೆ ಕಾಂಗ್ರೆಸ್ ಪಕ್ಷದಲ್ಲಿರುವ ಲಿಂಗಾಯತ ಶಾಸಕರ ಸಭೆ ನಡೆದಿದ್ದು ಇದು ಶಕ್ತಿ ಪ್ರದರ್ಶನವೇನೂ ಅಲ್ಲ. ಅಶೋಕ ಪಟ್ಟಣ ಮತ್ತು ಬಿ ಆರ್ ಪಾಟೀಲ ಈ ಸಭೆ ಕರೆದಿದ್ದರು. ಸಮುದಾಯದ ಹಿತಾಸಕ್ತಿ ಕುರಿತು ಅಲ್ಲಿ ಚರ್ಚೆ ನಡೆಯಿತಷ್ಟೆ ಎಂದು ಪಾಟೀಲ ಮತ್ತೊಂದು ಪ್ರಶ್ನೆಗೆ ಉತ್ತರಿಸಿದ್ದಾರೆ.

# ಕೋಪ ತಾಪದ ಕೋಲಾಹಲ

### ರಣರಂಗವಾದ ಸದನ | ಪ್ರತಿಪಕ್ಷದವರಿಂದ ಭಜನೆ, ಗದ್ದಲ ಕೂಟ | ಕಾಂಗ್ರೆಸ್‌ನಾಯಕರ ವಾಕ್ಸಮರ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಮನ್ರೇಗಾ ರದ್ದುಗೊಳಿಸಿ ವಿಬಿ ಜಿ ರಾಮ್ ಜಿ ಕಾಯ್ದೆಯೊಂದಿಗೆ ಬದಲಾಯಿಸುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಚರ್ಚಿಸಲು ಕರೆದಿದ್ದ ಶಾಸಕಾಂಗದ ವಿಶೇಷ ಅಧಿವೇಶನದ ಕೊನೆಯ ದಿನದ ವಿಧಾನಸಭೆ ಕೋಲಾಹಲಕ್ಕೆ ಕಾರಣವಾಗಿತ್ತು.

ಪ್ರತಿ ಪಕ್ಷ ಬಿಜೆಪಿ–ಜೆಡಿಎಸ್ ಶಾಸಕರ ಪ್ರತಿಭಟನೆಯ ನಡುವೆಯೂ ಕೇಂದ್ರ ಸರ್ಕಾರವು VB-G RAM G ಕಾಯ್ದೆಯನ್ನು ರದ್ದುಗೊಳಿಸಿ MGNREGA ಮರುಸ್ಥಾಪಿಸುವಂತೆ ಸಿಎಂ ಸಿದ್ದರಾಮಯ್ಯ ಮಂಡಿಸಿದ ನಿರ್ಣಯದ ಮೇಲಿನ ಚರ್ಚೆ ನಡೆಯಿತು.

**ರಾತ್ರಿ ಇಡೀ ಧರಣಿ:** ಬಹುಕೋಟಿ ಮದ್ಯ ಹಗರಣದ ಆರೋಪದ ಮೇಲೆ ಅಬಕಾರಿ ಸಚಿವ ತಿಮ್ಮಾಪುರ ಅವರ ರಾಜೀನಾಮೆಗೆ ಒತ್ತಾಯಿಸಿ ಪ್ರತಿ ಪಕ್ಷದ ಸದಸ್ಯರು ರಾತ್ರಿಯಿಡೀ ಪ್ರತಿಭಟನೆ ಮುಂದುವರೆಸಿದ್ದರು.

**ಭಜನೆ,ಹಾಡು ನೃತ್ಯ:** ಸಚಿವರ ರಾಜೀನಾಮೆಗೆ ಒತ್ತಾಯಿಸಿ ಪ್ರತಿಭಟನೆ ನಡೆಸುವಾಗ ಪ್ರತಿ ಪಕ್ಷದ ಸದಸ್ಯರು ಹಾಡುತ್ತ, ನೃತ್ಯ ಮಾಡುತ್ತಾ ಅನುಕರಣೆ ಮಾಡುತ್ತಾ ಕುಳಿತಿದ್ದರೆ, ಇತ್ತ ಆಡಳಿತ ಪಕ್ಷ ಕಾಂಗ್ರೆಸ್ ಶಾಸಕರು ವಿಬಿ ಜಿ ರಾಮ್ ಜಿ ಕಾಯ್ದೆ ಮತ್ತು ಕೇಂದ್ರ ಸರ್ಕಾರದ ಹಲವಾರು ಇತರ ನೀತಿಗಳನ್ನು ಟೀಕಿಸುತ್ತಿದ್ದರು.



### ಕಲಾಪಕ್ಕೆ ಅಡ್ಡಿಪಡಿಸಲು ಯತ್ನ

ಸ್ಪೀಕರ್ ಯು.ಟಿ. ಖಾದರ್ ಅವರು ಕಾಂಗ್ರೆಸ್ ಶಾಸಕರಿಗೆ ನರೇಗಾ ನಿರ್ಣಯದ ಕುರಿತು ಮಾತನಾಡಲು ಅವಕಾಶ ನೀಡಿದಾಗ, ಪ್ರತಿಭಟನಾ ನಿರತ ಸದಸ್ಯರು ಭಜನೆಗಳನ್ನು ಹಾಡುವ ಮೂಲಕ ಕಲಾಪಕ್ಕೆ ಅಡ್ಡಿಪಡಿಸಲು ಯತ್ನಿಸಿದರು. ಚಪ್ಪಾಳೆ ತಟ್ಟುತ್ತಾ ನೃತ್ಯ ಮಾಡುತ್ತಿರುವುದು ಕಂಡುಬಂದಿತು. ಕೆಲವು ಸದಸ್ಯರು ಮೈಕ್ರೊಫೋನ್ ತೆಗೆದುಕೊಂಡು ಕಾಂಗ್ರೆಸ್ ಶಾಸಕರು ಮಾತನಾಡದಂತೆ ತಡೆಯುವ ಪ್ರಯತ್ನದಲ್ಲಿ ಸ್ಪೀಕರ್ ಖಾದರ್ ಅವರನ್ನು ಅನುಕರಿಸಿದ್ದಾರೆ.

### ಬಿಕ್ಕಟ್ಟು ತಡೆಯಲಿಲ್ಲ

ಆಡಳಿತ ಪಕ್ಷದ ಸದಸ್ಯರು ಮಾಡಿದ ಭಾಷಣಗಳಿಗೆ ಅಡ್ಡಿಯಾಗದಂತೆ ತಡೆಯಲು ಸ್ಪೀಕರ್ ಪ್ರತಿ ಪಕ್ಷದವರ ಗದ್ದಲ ತಡೆಯಲು ಪ್ರಯತ್ನಿಸಿದರು. ಹೊಸ ಕಾಯ್ದೆಯನ್ನು ಸಮರ್ಥಿಸಿಕೊಳ್ಳಲು ಸಾಧ್ಯವಾಗದಿದ್ದರಿಂದ ಪ್ರತಿ ಪಕ್ಷವು ಕಲಾಪಕ್ಕೆ ಅಡ್ಡಿಪಡಿಸುತ್ತಿದೆ ಎಂದು ಕಾಂಗ್ರೆಸ್ ಆರೋಪಿಸಿದರೆ, ಬಿಕ್ಕಟ್ಟನ್ನು ಪರಿಹರಿಸಲು ನಡೆದ ಧರಣಿಯನ್ನು ತಡೆಯಲು ಸ್ಪೀಕರ್ ಪ್ರಯತ್ನ ಮಾಡಲಿಲ್ಲ ಎಂದು ಬಿಜೆಪಿ ಆರೋಪಿಸಿದೆ.

### ಅಶೋಕ್‌ಗೆ ತಿರುಗೇಟು

ಅಶೋಕ್‌ಗೆ ಪ್ರತಿಕ್ರಿಯಿಸಿದ ಸಚಿವ ಶಿವರಾಜ ತಂಗಡಗಿ, ನಾವು ಐದು ಜನ ಬಂದಿದ್ದರಿಂದ ನೀವು ಸರ್ಕಾರ ಮಾಡಿದ್ದು. ಅಷ್ಟಿದ್ದಿದ್ದರೆ ನನ್ನ ಮನೆ ಮುಂದೆ ಬಂದು ಜೀ ಹುಜೂರ್ ಅಂದಿದ್ದೇಕೆ? ನಿಮ್ಮಿಂದ ನಾವಲ್ಲ. ನಮ್ಮಿಂದ ನೀವು...ನಾವೇ ಇಲ್ಲ ಎಂದಿದ್ದರೆ ನೀವು ಎಲ್ಲಿರುತ್ತಿದ್ದೀರಿ. ಕಚೇರಿ ಕಟ್ಟಲು ತಾಕತ್ತಿರಲಿಲ್ಲ. ನಿಮಗೆ ನಾಚಿಕೆ ಆಗಬೇಕು ಎಂದು ತಿರುಗುಬಾಣ ಬಿಟ್ಟಿದ್ದಾರೆ.

### ತಂಗಡಗಿ ವಿರುದ್ಧ ಕಿಡಿ

ನಿನ್ನಂತಹ ನೂರು ಜನ ಬರುತ್ತಾರೆ, ಹೋಗುತ್ತಾರೆ. ಪಕ್ಷ ಬಿಟ್ಟು ಪಕ್ಷ–ಕ್ಕೆ ಹೋಗಿದ್ದೀಯಾ, ನಿನಗೆ ನಾಚಿಕೆ ಆಗಲ್ಲವಾ ಎಂದು ವಿಪಕ್ಷ ನಾಯಕ ಆರ್. ಅಶೋಕ್ ಶಿವರಾಜ ತಂಗಡಗಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಪಕ್ಷಾಂತರ ವಿಷಯವಾಗಿ ಆರ್. ಅಶೋಕ್, ಶಿವರಾಜ್ ತಂಗಡಗಿ ಮತ್ತು ಎಂಪಿ ನರೇಂದ್ರಸ್ವಾಮಿ ನಡುವೆ ವಿಧಾನಸಭೆಯಲ್ಲಿ ತೀವ್ರ ವಾಗ್ವಾದ ನಡೆದಿದೆ.

### ಶಿವಲಿಂಗೇಗೌಡ ಕೆಂಡ

ಶಾಸಕ ಶಿವಲಿಂಗೇಗೌಡರು ಸದನದಲ್ಲಿ ನಡೆಯುತ್ತಿರುವ ಕಲಹಕ್ಕೆ ಅಕ್ಷರಶಃ ಕೆಂಡಾಮಂಡಲರಾಗಿದ್ದರು. ಸ್ಪೀಕರ್ ಗದ್ದಲದ ನಡುವೆ ಮಾತನಾಡಲು ಅವಕಾಶ ಕೊಟ್ಟಕೂಡಲೇ, ಆಯ್ದಾಯ್ದ ಪದಗಳಿಂದ ಪ್ರತಿಪಕ್ಷದವರನ್ನು ನಿಂದಿಸಿದರು. ಮರ್ಯಾದೆ ಇದೆಯೇನ್ರಿ ನಿಮಗೆ ಎಂದು ತರಾಟೆಗೆ ತೆಗೆದು–ಕೊಂಡರು. ಒಂದು ಹಂತದಲ್ಲಿ ಸಂಯಮ ಕಳೆದುಕೊಂಡವರಂತೆ ಕಂಡುಬಂದರು.

## ಶಾಸಕನ ಗೆಲುವು ಘೋಷಿಸಿದ ಸುಪ್ರೀಂ

• ಮಲ್ಲಮ್ಮ ನುಡಿ ವಾರ್ತೆ ನವದೆಹಲಿ

ತೀವ್ರ ಕುತೂಹಲ ಕೆರಳಿಸಿದ ಕೋಲಾರ ಜಿಲ್ಲೆ ಮಾಲೂರು ವಿಧಾನಸಭಾ ಕ್ಷೇತ್ರದ ಮರು ಮತ ಎಣಿಕೆ ಪ್ರಕ್ರಿಯೆಯಲ್ಲಿ ಹಾಲಿ ಕಾಂಗ್ರೆಸ್ ಶಾಸಕ ಕೆ.ವೈ. ನಂಜೇಗೌಡ ಅವರೇ ಗೆಲುವು ಸಾಧಿಸಿದ್ದಾರೆ.

ಕರ್ನಾಟಕ ಹೈಕೋರ್ಟ್ ಆದೇಶ ಪ್ರಶ್ನಿಸಿ ನಂಜೇಗೌಡ ಸಲ್ಲಿಸಿದ್ದ ಮೇಲ್ಮನವಿಯನ್ನು ಸುಪ್ರೀಂಕೋರ್ಟ್ ಎತ್ತಿ ಹಿಡಿದಿದೆ. ಬಿಜೆಪಿಯ ಪ್ರತಿಸ್ಪರ್ಧಿ ಅಭ್ಯರ್ಥಿ ಕೆ.ಎಸ್. ಮಂಜುನಾಥ ಗೌಡ ಅವರಿಗಿಂತ 250 ಹೆಚ್ಚಿನ ಮತಗಳನ್ನು ಪಡೆದಿರುವುದಾಗಿ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿ ಜಾಯ್ಮಲ್ಯ ಬಾಗ್ಚಿ ಅವರನ್ನೊಳಗೊಂಡ ನ್ಯಾಯಪೀಠ ಹೇಳಿದ್ದು, ಹೈಕೋರ್ಟ್ ಆದೇಶವನ್ನು ವಜಾಗೊಳಿಸಿದೆ. 2023ರ ವಿಧಾನಸಭಾ ಚುನಾವಣೆಯಲ್ಲಿ ನಂಜೇಗೌಡ ಕೇವಲ 248 ಮತಗಳಿಂದ ಗೆಲುವು ಸಾಧಿಸಿದ್ದರು. ನಂತರ ಮಂಜುನಾಥ ಗೌಡ ನ್ಯಾಯಾಲಯದಲ್ಲಿ ತಕಾರರು ಅರ್ಜಿ ಸಲ್ಲಿಸಿದ್ದರು. ಮತಗಳ ಮರು ಎಣಿಕೆ ಹೊಸದಾಗಿ ಘೋಷಿಸಲು ಹೈಕೋರ್ಟ್ ಆದೇಶಿಸಿದೆ.

## ವಂದನಾ ನಿರ್ಣಯ: ಪ್ರತಿಪಕ್ಷ ಗದ್ದಲ

• ಮಲ್ಲಮ್ಮ ನುಡಿ ವಾರ್ತೆ ನವದೆಹಲಿ

ರಾಷ್ಟ್ರಪತಿ ಭಾಷಣದ ಮೇಲೆ ಮಂಡಿಸಲಾಗಿದ್ದ ವಂದನಾ ನಿರ್ಣಯವನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಪ್ರತಿಕ್ರಿಯೆ ಇಲ್ಲದೆಯೇ ಲೋಕಸಭೆ ಅಂಗೀಕರಿಸಿದೆ. ಇದಕ್ಕೆ ವಿಪಕ್ಷಗಳು ತೀವ್ರ ವಿರೋಧ ವ್ಯಕ್ತಪಡಿಸಿದ್ದು, ತೀವ್ರ ಗದ್ದಲವುಂಟಾದ ಹಿನ್ನೆಲೆಯಲ್ಲಿ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಲೋಕಸಭೆ ಕಲಾಪವನ್ನು ಮಧ್ಯಾಹ್ನ 3 ಗಂಟೆಗೆ ಮುಂದೂಡಿದ್ದಾರೆ. ಕಲಾಪ ಆರಂಭವಾದಾಗಲೇ, ಹಿಂದಿನ ದಿನದ ಘಟನೆಗಳ ಕುರಿತು ಸ್ಪೀಕರ್ ಓಂ ಬಿರ್ಲಾ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಪ್ರಧಾನಿ ಭಾಷಣಕ್ಕೆ ನಿಗದಿಯಾಗಿದ್ದ ಸಂದರ್ಭದಲ್ಲಿ, ವಿಪಕ್ಷ ಸದಸ್ಯರು ಪ್ರತಿಭಟನೆ ನಡೆಸಿದ್ದು, ಸಂಸದೀಯ ಗೌರವ ಮತ್ತು ನಿಯಮಾವಳಿಗಳಿಗೆ ವಿರುದ್ಧವಾಗಿದೆ ಎಂದು ಹೇಳಿದ್ದರು. ಪ್ರತಿಪಕ್ಷಗಳ ಈ ನಡೆ ಸದನದ ಶಿಸ್ತು, ಮತ್ತು ಅಧ್ಯಕ್ಷೀಯ ಸ್ಥಾನಕ್ಕೆ ಅಗೌರವ ತೋರಿದಂತಾಗಿದೆ ಎಂದು ಸ್ಪೀಕರ್ ಆಕ್ಷೇಪ ವ್ಯಕ್ತಪಡಿಸಿದರು. ಈ ಮಾತಿನ ನಂತರ ಸದನವನ್ನು ಮುಂದೂಡಲಾಯಿತು.

## ಕಾರ್ಮಿಕ ಸ್ತ್ರೀಯರ ರಕ್ಷಣೆಗೆ ಮನವಿ



• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ನಗರಕ್ಕೆ ಸಮೀಪದಲ್ಲಿಯೇ ಇರುವ ಬಲ್ಡೋಟ ಕಾರ್ಖಾನೆ ವಿಸ್ತರಣೆಯಿಂದ ಉಂಟಾಗುವ ಭಯಾನಕ ಸಮಸ್ಯೆಗಳು ಉಂಟಾಗಿವೆ. ಈಗಾಗಲೇ ಇರುವ ಕಿರ್ಲೋಸ್ಕರ್, ಕಲ್ಯಾಣಿ, ಮುಕುಂದಸುಮಿ, ವನ್ಯಾ, ಭದ್ರಾ ಮುಂತಾದ ಕಾರ್ಖಾನೆಗಳ ಬಾಧಿತ ಪ್ರದೇಶದ ಮಹಿಳೆಯರ ಮತ್ತು ಯುವತಿಯರ ಆರೋಗ್ಯ ಮತ್ತು ಜೀವ ರಕ್ಷಣೆಗೆ ಮುಂದಾಗಬೇಕೆಂದು ಮಹಿಳಾ ಆಯೋಗದ ಅಧ್ಯಕ್ಷರಿಗೆ ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷೆ ಜ್ಯೋತಿ ಎಂ. ಗೊಂಡಬಾಳ ಮನವಿ ಮಾಡಿದ್ದಾರೆ. ಜಿಲ್ಲೆಯ ಮೂರು ದಿನಗಳ ಪ್ರವಾಸ ಹಮ್ಮಿಕೊಂಡಿರುವ ಕರ್ನಾಟಕ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧ್ರಿ ಅವರನ್ನು ಭೇಟಿಯಾಗಿ, ನಗರದಲ್ಲಿರುವ ಹಕ್ಕಿಪಿಕ್ಕಿ ಸಮುದಾಯ ಹಾಗೂ ಕುಂಚಿ ಕೊರವರ ಸಮುದಾಯಗಳಿಗೆ ಮೂಲಭೂತ ಸೌಕರ್ಯವನ್ನು ಒದಗಿಸಿ ಸಹಜ ಜೀವನಕ್ಕೆ ನೆರವಾಗುವಂತೆ ಕೋರಿದ್ದಾರೆ. ಜಿಲ್ಲೆಯ ಸರಕಾರಿ ಅರೆ ಸರಕಾರಿ ನೌಕರರು ಉತ್ತಮವಾದ ಕೆಲಸದ ಪರಿಸರ ಖಾತ್ರಿಪಡಿಸುವಂತೆ

## ಗಡಿ ಉರ್ದು ಶಾಲೆಗಳ ಸ್ಥಿತಿ ಅವನತಿ

• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್



ಗಡಿ ಭಾಗದ ಕುಮಾರ್ ಚಿಂಚೋಳಿ ಗ್ರಾಮದ ಸರಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಯು ಕೆಲವೇ ದಿನಗಳಲ್ಲಿ ಅಧೋಗತಿಗೆ ತಲುಪುವ ತಯಾರಿಯಲ್ಲಿದೆ. ಮುಸ್ಲಿಂ ಜನ ಸಂಖ್ಯೆಯನ್ನು ಹೆಚ್ಚಾಗಿ ಹೊಂದಿರುವ ಈ ಗ್ರಾಮದಲ್ಲಿ ಉರ್ದು ಶಾಲೆಯ ಈಗಿನ ಪರಿಸ್ಥಿತಿಯು ಹಳ್ಳ ಹಿಡಿಯುತ್ತಿದೆ ಎಂದು ಗ್ರಾಮಸ್ಥರು ದೂರುತ್ತಿದ್ದಾರೆ. ಶಾಲೆಯಲ್ಲಿ ಮೂವರು ಶಾಶ್ವತ ಶಿಕ್ಷಕರಿದ್ದು, ಇನ್ನು ಇಬ್ಬರು ತಾತ್ಕಾಲಿಕ ಅತಿಥಿ ಶಿಕ್ಷಕರನ್ನು ಇಲಾಖೆಯವರು ನೇಮಿಸಿಕೊಳ್ಳಲು ಅನುಮತಿ ನೀಡಿದ್ದಾರೆ. ತಾತ್ಕಾಲಿಕ ಅತಿಥಿ ಶಿಕ್ಷಕರನ್ನು ನೇಮಿಸಬೇಕಾದರೆ ಕೆಲವು ನಿಯಮಗಳು ಪಾಲಿಸಬೇಕು. ಆದರೇ ಇಲ್ಲಿನ ಪರಿಸ್ಥಿತಿಯೇ ಬೇರೆಯಾಗಿದೆ. ಇಬ್ಬರು ತಾತ್ಕಾಲಿಕ ಅತಿಥಿ ಶಿಕ್ಷಕರ ನೇಮಕದಲ್ಲಿ ಒಬ್ಬರನ್ನು ಕಾನೂನುಬಾಹಿರವಾಗಿ ನೇಮಿಸಿರುವುದು ಬೆಳಕಿಗೆ ಬಂದಿದೆ. ಸರ್ಕಾರದ ಎಲ್ಲ ನೀತಿ ನಿಯಮಗಳನ್ನು ಗಾಳಿಗೆ ತೂರಿರುವುದು ಚರ್ಚೆಗೆ ಗ್ರಾಸವೊದಗಿಸಿದೆ. ಬಿ.ಇಡಿ, ಡಿ.ಇಡಿ ಪದವಿಯನ್ನೇ ಹೊಂದಿರದ, ಮತ್ತೊಬ್ಬರ ಶೈಕ್ಷಣಿಕ ದಾಖಲೆಗಳನ್ನು ಸಲ್ಲಿಸಿದಂತಹ ಒಬ್ಬ ನಕಲಿ ಕಾಲೇಜು ವಿದ್ಯಾರ್ಥಿನಿಯನ್ನು ಪಾಠ ಮಾಡಲು ಹಚ್ಚಿರುವುದು ಜನರ ಅಸಮಾಧಾನಕ್ಕೆ ಕಾರಣವಾಗಿದೆ.

### ದೂರು ನೀಡಿದರೂ ಇದುವರೆಗೆ ಕ್ರಮವಿಲ್ಲ..?

ಇಲಾಖೆಗೆ ದೂರು ನೀಡಿದ್ದರೂ ಇಲ್ಲಿಯವರೆಗೂ ಸಬಂಧಿಸಿದ ಅಧಿಕಾರಿ ವರ್ಗದವರು ಸಮಭಂಧಿತರ ವಿರುದ್ಧ ಯಾವುದೇ ಶಿಸ್ತು ಕ್ರಮ ಕೈಗೊಂಡಿಲ್ಲ. ಶಾಲಾ ಶಿಕ್ಷಣ, ಸಾಕ್ಷರತಾ ಇಲಾಖೆಯ ಅಧಿಕಾರಿಗಳು ಜಾಣ ಮೌನಕ್ಕೆ ಶರಣಾಗಿದ್ದಾರೆ. ಇಲಾಖೆ ಎಚ್ಚೆತ್ತುಕೊಳ್ಳದ್ದಿದ್ದರೆ ತಾಲೂಕು ಕಚೇರಿಯ ಮುಂದೆ ಧರಣಿ ನಡೆಸಲಾಗುವುದು ಎಂದು ಹಿರಿಯರು, ಯುವಕರು, ಗ್ರಾಮದ ಶಿಕ್ಷಣ ಪ್ರೇಮಿಗಳು ಎಚ್ಚರಿಸಿದ್ದಾರೆ.


## ಅವಹೇಳನೆ: ಸಿಟಿ ರವಿ ಸಸ್ಪೆಂಡ್

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ಕಾಂಗ್ರೆಸ್ ಸದಸ್ಯ ನಜೀರ್ ಅಹ್ಮದ್ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ ಆರೋಪದ ಮೇಲೆ ಬಿಜೆಪಿ ಎಂಎಲ್ಸಿ ಸಿಟಿ ರವಿ ಅವರನ್ನು ಕರ್ನಾಟಕ ವಿಧಾನ ಪರಿಷತ್ತಿನ ಅಧಿವೇಶನದ ಕೊನೆಯ ದಿನದಂದು ಅಮಾನತುಗೊಳಿಸಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಬಗ್ಗೆ ಅಹ್ಮದ್ ನೀಡಿದ ಆಕ್ಷೇಪಾರ್ಹ ಹೇಳಿಕೆಗೆ ಸಂಬಂಧಿಸಿದಂತೆ ಸಿಟಿ ರವಿ ಎರಡು ದಿನಗಳ ಹಿಂದೆ ಅವಹೇಳನಕಾರಿ ಹೇಳಿಕೆ ನೀಡಿದ್ದರು. ಈ ಹೇಳಿಕೆಯನ್ನು ಆಕ್ಷೇಪಾರ್ಹ ಎಂದು ಪರಿಗಣಿಸಿದ ಪರಿಷತ್ತಿನ ಕಾಂಗ್ರೆಸ್ ಸದಸ್ಯರು, ಸಿಟಿ ರವಿ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದರು. ಅಧಿವೇಶನವನ್ನು ಅನಿರ್ದಿಷ್ಟಾವಧಿಗೆ ಮುಂದೂಡುವ ಕೇವಲ ಒಂದು ಗಂಟೆಗೂ ಮೊದಲು, ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ಅವರು ಸಿಟಿ ರವಿ ಅವರನ್ನು ದಿನದ ಮಟ್ಟಿಗೆ ಸದನದಿಂದ ಅಮಾನತುಗೊಳಿಸಿರುವುದಾಗಿ ಘೋಷಿಸಿದ್ದಾರೆ.

**ಇದು ಯಾವುದೇ ವಿಶೇಷ ಅಧಿವೇಶನದಿಂದ ಜನರಿಗೆ ಯಾವುದೇ ಉಪಯೋಗವಾಗಲಿಲ್ಲ, ಬದಲಾಗಿ ಜನರ ತೆರಿಗೆ ಹಣ ಪೋಲಾಯಿತು ಅಷ್ಟೆ: ಛಲವಾದಿ.ಟಿ.ನಾರಾಯಣ ಸ್ವಾಮಿ**



ಕಮಲನಗರ:ತಾಲೂಕಿನ ಡಿಗ್ಗಿ ಗ್ರಾಮ ಪಂಚಾಯತನಲ್ಲಿ ಮಲ್ಲಮ್ಮ ನುಡಿ ದಿನ ಪತ್ರಿಕೆ ಹೊರ ತಂದ ವಿಶಿಷ್ಟ ಕ್ಯಾಲೆಂಡರರನ್ನು,

ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿ ಶ್ರೀ ವೆಂಕಟೇಶರಾವ ದೇಶಪಾಂಡೆ, ಕಾರ್ಯದರ್ಶಿ ಶ್ರೀ ಬಂಡೆಯ್ಯ ಸ್ವಾಮಿ, ಡೇಟಾ ಆಪರೇಟರ ಶ್ರೀ ಸಾಗರ ದೇಶಮುಖ ಅವರಿಗೆ, ಕ್ಯಾಲೆಂಡರ್ ನೀಡಿ ಹೊಸ ವರ್ಷ 2026ರ ಶುಭ ಕೋರಲಾಯಿತು. ಈ ಸಂದರ್ಭದಲ್ಲಿ ಕಮಲನಗರ ತಾಲೂಕ ವರದಿಗಾರ ಪರಮೇಶ ರಾಂಪುರೆ ಅವರು ಇದ್ದರು.

## ಮುದಗಲ್ಲನಲ್ಲಿ ಪ್ರಥಮ ಬಾರಿಗೆ ಸಿಬಿಎಸ್ ಶಿಕ್ಷಣ: ಡಾ। ಎಸ್. ಬಿ.ಭಮಸಾಗರ

- **ಮಲ್ಲಮ್ಮ ನುಡಿ ವಾರ್ತೆ ,ಮುದಗಲ್ಲ :**

ಪಟ್ಟಣದ ಡಾ। ಎಸ್.ಬಿ. ಭಮಸಾಗರ ಮೆಮೋರಿಯಲ್ ಟ್ರಸ್ಟ್ ಗೆ 1ನೇ ತರಗತಿಯಿಂದ9ನೇ ತರಗತಿವರೆಗೆ 2025-26 ನೇ ಸಾಲಿನಲ್ಲಿ ಸಿಬಿಎಸ್ ಬೋರ್ಡ್ ಅನುಮತಿ ನೀಡಿದ್ದರಿಂದ ಪಟ್ಟಣದಲ್ಲಿ ಪ್ರಥಮವಾಗಿ ನಮ್ಮ ಸಂಸ್ಥೆಯಿಂದ ಮಕ್ಕಳಿಗೆ ಸಿಬಿಎಸ್ ಶಿಕ್ಷಣ ನೀಡಲಾಗುತ್ತಿದೆಎಂದು ಸ್ಂಸ್ಥೆಯ ಕಾರ್ಯದರ್ಶಿ ಡಾ। ಸಂಜೀವ್ ಬಮಸಾಗರ ಹೇಳಿದರು. ಪಟ್ಟಣದಲ್ಲಿ ಪತ್ರೀಕಾ ಭವನದಲ್ಲಿ ಸೂದ್ದಿಗೋಷ್ಠಿ ನಡೆಯಿಸಿ ಮಾತನಾಡಿದ ಅವರು ನಾವು ಕೇಂದ್ರಿಯ ಬೋರ್ಡಗೆ ಅಭಿನಂದನೆಸಲ್ಲಿಸುತ್ತೆವೆ. ದೂರದ ಪಟ್ಟಣಗಳಿಗೆ ತೆರಳಿ ಸಾಕಷ್ಟು ಹಣ ಖರ್ಚುಮಾಡಿ ಪಟ್ಟಣದ ಮಕ್ಕಳು, ಸೂತ್ತಲಿನ ಹಳ್ಳಿಯ ಬಡ ಮಕ್ಕಳು ಸಿಬಿಎಸ್‌ಸಿ ಶಿಕ್ಷಣಕ್ಕೆ ತೆರಳಬೇಕಿತ್ತು ಆದರೆ ಈಗ ನಮ್ಮ ಶಾಲೆಯಲ್ಲಿಯೇ ಗುಣಮಟ್ಟದ ಮತ್ತು ಮಥಲ್ಯಾಧರಿತ ಸಿಬಿಎಸ್‌ಸಿ ಶಿಕ್ಷಣ ನೀಡುವುದಾಗಿ ಅವರು ಹೇಳಿದರು.



2026-27ನೇಸಾಲಿನಅರೋಮಾ ಪಿಯು ಕಾಲೇಜು ವತಿಯಿಂದ ಅರೋಮಾ ಪ್ರತಿಭಾ ಪರೀಕ್ಷೆ ಇದೇ ಭಾನುವಾರ ದಿನಾಂಕ 08 ಫೇ 2026ರಂದು ನಮ್ಮ ಕಾಲೇಜಿನಲ್ಲಿಹಮ್ಮಿಕೊಳ್ಳಲಾಗಿದೆ. ಈ ಪರೀಕ್ಷೆಯಲ್ಲಿ 8ನೂರಕ್ಕು ಹೆಚ್ಚು 10ನೇ ತರಗತಿ ವಿದ್ಯಾರ್ಥಿಗಳು ಭಾಗವಹಿಸಲಿದ್ದು ಸುಮಾರು

30ಕ್ಕೂ ಹೆಚ್ಚು ಪ್ರೌಢ ಶಾಲೆಗಳಿಗೆ ಭೇಟಿ ನೀಡಿ ಪರೀಕ್ಷೆ ಕುರಿತು ಮಹಾತಿ ನೀಡಲಾಗಿದೆ. ವಿಜ್ಞಾನ, ಗಣಿತ ಮತ್ತು ಇಂಗ್ಲಿಷ್, ಗ್ರಾಮರ್ ವಿಷಯವಾಗಿ ಪರೀಕ್ಷೆಗಳು ಜರುಗುತ್ತವೆ. ಈ ಬೋಧನೆಯಿಂದ ನೀಟ್, ಜೆಇಇ, ಯುಪಿಎಸ್ ಹಾಗೂ ಕೆಪಿಎಸ್ ಸಿ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗೆ ಅನುಕೂಲವಾಗುತ್ತದೆ. ಈಗಾಗಲೇ ನಮ್ಮ ಸುತ್ತಲಿನ ಹೋಬಳಿ ಮಟ್ಟದಲ್ಲಿ 20 ಹೈಸ್ಕೂಲುಗಳಿಗೆ ಭೇಟಿ ನೀಡಿ ಮಾಹಿತಿ ನೀಡಲಾಗಿದೆ. ಪರೀಕ್ಷೆಯಲ್ಲಿ 600ರಿಂದ 800 ವಿದ್ಯಾರ್ಥಿಗಳು ಭಾಗವಹಿಸಬಹುದು. ಒಂದು ಗಂಟೆಯಲ್ಲಿ 60 ಪ್ರಶ್ನೆಗಳಿಗೆ ಉತ್ತರಿಸಬೇಕು. ಪರೀಕ್ಷಾರ್ಥಿಗಳಿಗೆ ಸ್ಥಳದಲ್ಲಿಯೇ ಫಲಿತಾಂಶ ನೀಡಲಾಗುವುದು. ಇದರ ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪ್ರಥಮ ದ್ವಿತೀಯ ತೃತೀಯ ಅಂಕಗಳಿಸಿದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಸ್ಕಾಲರ್ಶಿಪ್ ನೀಡಲಾಗುವುದು. ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಎಂಸಿಕ್ಯೂ ಮೂಲಕ ಪರೀಕ್ಷೆ ನಡೆಸಲಾಗುವುದು. ನಮ್ಮ ಸಂಸ್ಥೆಯಲ್ಲಿ ಅತ್ಯುತ್ತಮ ಅರ್ಹತೆ ಉಳ್ಳ, ಪ್ರತಿಭಾನ್ವಿತ ಹಾಗೂ ಅನುಭವಿ ಉಪನ್ಯಾಸಕರು, ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಎಲ್ಲಾ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಯ ಸದುಪಯೋಗ ಪಡೆಯಬೇಕು ಎಂದು ತಿಳಿಸಿದರು.

ಆರೋಮ ಪಿಯು ಕಾಲೇಜ್ ಉಪನ್ಯಾಸಕ ಮಲಿಕೇಶಿ, ವಾಣಿಜ್ಯ ವಿಭಾಗ ಉಪನ್ಯಾಸಕ ಮಂಜುನಾಥ್ ರೆಡ್ಡಿ, ವಿಜ್ಞಾನ ವಿಭಾಗ ಉಪನ್ಯಾಸಕ ರವಿಕುಮಾರ, ಎಸ್ಬಿ ಭಮಸಾಗರ ಶಾಲೆ ಸಿಬಿಎಸ್ಸಿ ವ್ಯವಸ್ಥಾಪಕ ವಿಶ್ವನಾಥ್ ಗಡೆದ್ ಇದ್ದರು.

## ಬೀರಿ(ಕೆ) ಮಾರ್ಗದ ರಸ್ತೆಯಲ್ಲಿ ಘಟನೆ ॥ ಬೀದರ್ ಬ್ರಿಮ್ಸ್ ಆಸ್ಪತ್ರೆಗೆ ಚಾಲಕ ದಾಖಲು ಬಸ್ ತಡೆದು ಚಾಲಕ, ನಿರ್ವಾಹಕನಿಗೆ ಥಳಿತ

- **ಮಲ್ಲಮ್ಮ ನುಡಿ ವಾರ್ತೆ ,ಭಾಲ್ಕಿ:**



ನಾಲ್ಕೈದು ಯುವಕರು ಸೇರಿ ಭಾಲ್ಕಿ ಬಸ್ ಡಿಪೋಗೆ ಸೇರಿದ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬಸ್ ತಡೆದು ಚಾಲಕ ಮತ್ತು ನಿರ್ವಾಹಕರನ್ನು ಥಳಿಸಿದ ಘಟನೆ ತಾಲೂಕಿನ ಬೀರಿ(ಕೆ) ಮಾರ್ಗದ ರಸ್ತೆಯಲ್ಲಿ ಬುಧವಾರ ನಡೆದಿದೆ. ಸೋನಾಳ ಗ್ರಾಮದ ನಿವಾಸಿ ಆಗಿರುವ ಬಸ್ ಚಾಲಕ ಚಂದ್ರಶೇಖರ ಬಸಯ್ಯ ಸ್ವಾಮಿ ಮತ್ತು ದಾಡಗಿ ಗ್ರಾಮದ ನಿವಾಸಿ ಆಗಿರುವ ನಿರ್ವಾಹಕ ಲಿಂಗರಾಜ ಸಿದ್ರಾಮಪ್ಪ ಎಂಬುವರ ಮೇಲೆ ಬೀರಿ(ಕೆ) ನಿವಾಸಿ ಆಗಿರುವ ವಿಶಾಲ ಸಂಜೀವಕುಮಾರ ಚವ್ಹಾಣ ಸೇರಿ ನಾಲ್ಕೈದು ಯುವಕರು ಹಲ್ಲೆ ನಡಿಸಿದ್ದಾರೆ.

ತೀವ್ರ ಗಾಯಗೊಂಡಿರುವ ಬಸ್ ಚಾಲಕ ಚಂದ್ರಶೇಖರ ಬಸಯ್ಯ ಸ್ವಾಮಿ ಅವರನ್ನು ಭಾಲ್ಕಿಯ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಬೀದರ್ ಬ್ರೀಮ್ಸ್ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಈ ಕುರಿತು ನಿರ್ವಾಹಕ ಲಿಂಗರಾಜ ಸಿದ್ರಾಮಪ್ಪ ನೀಡಿರುವ ದೂರಿನ ಮೇರೆಗೆ ಭಾಲ್ಕಿಯ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ಘಟನೆಯ ವಿವರ :**

ಬಾಳೂರು-ಚಂದಾಪೂರ-ಬೀದರ್ ಮಾರ್ಗಕ್ಕೆ ಸಂಚರಿಸುವ ಕೆ.ಎ.38 ಎಫ್ 0935 ಬಸ್ ಮೇಲೆ ಎಂದಿನಂತೆ ಚಾಲಕ ಚಂದ್ರಶೇಖರ ಬಸಯ್ಯ ಸ್ವಾಮಿ ಮತ್ತು ನಿರ್ವಾಹಕ ಲಿಂಗರಾಜ ಸಿದ್ರಾಮಪ್ಪ ಕರ್ತವ್ಯಕ್ಕೆ ಹಾಜರಾಗಿದ್ದಾರೆ. ಭಾಲ್ಕಿ ಬಸ್ ನಿಲ್ದಾಣದಿಂದ ಬುಧವಾರ ಬೆಳಿಗ್ಗೆ 8.30ಕ್ಕೆ ಹೊರಟ ಈ ಬಸ್ ಕೋಟಗ್ಯಾಳವಾಡಿ, ಅಂಬೆಸಾಂಗವಿ ಕ್ರಾಸ್ ರೋಡ, ವಳಸಂಗ ಮಾರ್ಗದ ಮೂಲಕ 9 ಗಂಟೆ ಸುಮಾರಿಗೆ ಬೀರಿ(ಕೆ) ಗ್ರಾಮ ತಲುಪಿದೆ. ಅಲ್ಲಿಂದ ಪ್ರಯಾಣಿಕರನ್ನು ಹತ್ತಿಸಿಕೊಂಡು ಬಸ್ ಹೊರಟಿದೆ.

ಮಾರ್ಗ ಮಧ್ಯದಲ್ಲಿ ಹಿಂಬದಿಯಿಂದ ಸ್ಕೂಟಿ ಮೇಲೆ ಬಂದ ವಿಶಾಲ ಎಂಬಾತ ಬಸ್‌ನ್ನು ಅಡ್ಡಗಟ್ಟಿ ಮುಂದೆ ಬರಲು ಬಸ್ ಬದಿ ದಾರಿ ನೀಡಲಿಲ್ಲ ಎಂದು ಆರೋಪಿಸಿ ಏಕಾಏಕಿ ಬಸ್ ಚಾಲಕ ಚಂದ್ರಶೇಖರ ಎಂಬುವರ ಶರ್ಟ್ ಹಿಡಿದು ಎಳೆದಾಡಿ ಭುಜ, ಎದೆಯ ಮೇಲೆ ಮುಷ್ಟಿ ಕೈಯಿಂದ ಹೊಡೆದು ಗುಪ್ತ ಗಾಯಗೊಳಿಸಿದ್ದಾನೆ.


ನಂತರ ವಿಶಾಲ ಎಂಬಾತ ಜತೆಗೆ ಗುರುತಿಸಿಕೊಂಡ ನಾಲ್ಕೈದು ಯುವಕರು ಬಸ್‌ನಂದ ಚಾಲಕ ಚಂದ್ರಶೇಖರ, ನಿರ್ವಾಹಕ ಲಿಂಗರಾಜ ಎಂಬುವರನ್ನು ಹೊರತಂದು ಹಲ್ಲೆ ನಡೆಸಿ ಪರಾರಿಯಾಗಿದ್ದಾರೆ.

**ಡಿಪೋ ವ್ಯವಸ್ಥಾಪಕ ಭೇಟಿ :**

ಘಟನೆಯ ವಿಷಯ ತಿಳಿದ ಬಸ್ ಡಿಪೋ ವ್ಯವಸ್ಥಾಪಕ ಭದ್ರಪ್ಪ ಹುಡಗೆ ಅವರು ಗಾಯಳುಗಳಾದ ಚಾಲಕ ಚಂದ್ರಶೇಖರ ಮತ್ತು ನಿರ್ವಾಹಕ ಲಿಂಗರಾಜ ಅವರ ಆರೋಗ್ಯ ವಿಚಾರಿಸಿದರು. ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಿ ಇವರು ಈ ಸಿಬ್ಬಂದಿಗಳ ಯೋಗಕ್ಷೇಮ ವಿಚಾರಿಸಿ, ಘಟನೆಯ ಬಗ್ಗೆ ಮೇಲಧಿಕಾರಿಗಳ ಗಮನಕ್ಕೆ ತಂದು ತೀವ್ರಗಾಯಗೊಂಡಿದ್ದ ಚಾಲಕ ಚಂದ್ರಶೇಖರನ್ನು ಬ್ರೀಮ್ಸ್ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ದಾಖಲಿಸಿದರು.

## ಅರ್ಹರಿಗೆ ಗ್ಯಾರಂಟಿ ಯೋಜನೆ ತಲುಪಿಸಿ

### ಅಮೃತರಾವ ಚಿಮಕೋಡೆ



ಮಲ್ಲಮ್ಮ ನುಡಿ ವಾರ್ತೆ

ಬೀದರ, ಫೆ05:- ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳು ಅರ್ಹರಿಗೆತಲುಪಿಸುವಲ್ಲಿಯಾವುದೇ ವಿಳಂಭವಾಗಬಾರದು.ಪ್ರತಿಹಂತದಲ್ಲೂ ಅಧಿಕಾರಿಗಳು ಗಮನಿಸಿ ಅರ್ಹ ಫಲಾನುಭವಿಗಳಿಗೆಸಮರ್ಥಕವಾಗಿ ಹಾಗೂ ನಿಗಧಿತ ಸಮಯದಲ್ಲಿ ತಲುಪಿಸಬೇಕೆಂದು ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಅಮೃತರಾವ ಚಿಮಕೋಡೆ ಸೂಚಿಸಿದರು.

ಅವರು ಗುರುವಾರ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಬೀದರ ಅವರ ಅಧ್ಯಕ್ಷತೆಯಲ್ಲಿ ಜಿಲ್ಲೆಯ 5 ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಪ್ರಗತಿ ಪರಿಶೀಲನಾ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ರಾಜ್ಯ ಸರ್ಕಾರದ ಪಂಚ ಗ್ಯಾರಂಟಿಗಳಲ್ಲಿ ಗೃಹಲಕ್ಷ್ಮೀ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕು. ಜಿಲ್ಲೆಯಲ್ಲಿ 3,44,896ಗೃಹಲಕ್ಷ್ಮೀಫಲಾನುಭವಿಗಳಿದ್ದು, ಮೃತ ಫಲಾನುಭವಿಗಳ ಕುರಿತು ಪ್ರತಿ ತಿಂಗಳು ನಿರಂತರ ಪರಿಷ್ಕರಣೆ ಮಾಡಬೇಕು. ಅರ್ಹರಿಗೆಗೃಹಲಕ್ಷ್ಮೀ ಯೋಜನೆ ತಲುಪಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಶ್ರಮಿಸಬೇಕೆಂದರು.

ಗೃಹಲಕ್ಷ್ಮೀ ಯೋಜನೆಯು ಮಹಿಳಾ ಸಬಲೀಕರಣ ಹಾಗೂ ಸ್ವಾಭಿಮಾನದ ಗುರುತಾಗಿದ್ದು, ಕುಟುಂಬದ ಯಜಮಾನಿಯು ಆರ್ಥಿಕವಾಗಿ ಸಬಲೀಕರಣಗೊಂಡಲ್ಲಿ ಕುಟುಂಬದ ಸಮಗ್ರ ಅಭಿವೃದ್ಧಿಗೆ ಬುನಾದಿಯಾಗಿದೆ. ಕರ್ನಾಟಕ ರಾಜ್ಯ ಸರ್ಕಾರವು ಬಿ.ಪಿ.ಎಲ್. ಮತ್ತು ಎ.ಪಿ.ಎಲ್.,ಅಂತ್ಯೋದಯ ಕಾರ್ಡನಲ್ಲಿ ನಮೂದಿಸಿರುವಂತೆ ಕುಟುಂಬದ ಯಜಮಾನಿ ಮಹಿಳೆಗೆ ಪ್ರತಿ ತಿಂಗಳು ರೂ.2000 ಗಳ ಸಹಾಯಧನ ನೀಡಲಾಗುತ್ತಿದೆ ಎಂದರು.

ಗೃಹಲಕ್ಷ್ಮೀ ಯೋಜನೆ ಒಟ್ಟು 3,44,896ಫಲಾನುಭವಿಗಳಿದ್ದು,1547.49 ಕೋಟಿ ರೂ. ಸೆಪ್ಟೆಂಬರ್.2025 ರವರೆಗೆ ಸಹಾಯಧನ ಡಿ.ಬಿ.ಟಿ. ಮೂಲಕ ಅವರ ಖಾತೆಗಳಿಗೆ ಜಮಾ ಮಾಡಲಾಗಿದೆ. ಗೃಹಜ್ಯೋತಿ ಯೋಜನೆಯಡಿ 3,56,422 ಅರ್ಹ ಫಲಾನುಭವಿಗಳಿದ್ದು, ಡಿಸೆಂಬರ್.2025 ರವರೆಗೆ 462.46 ಕೋಟಿ ರೂ. ಸಬ್ಸಿಡಿ ನೀಡಲಾಗಿದೆ. ಶಕ್ತಿಯೋಜನೆಯಡಿ 28-01-2026 ರವರೆಗೆ 11.11 ಕೋಟಿ ಮಹಿಳೆಯರು ಪ್ರಯಾಣಿಸಿದ್ದು, 327.66 ಕೋಟಿ ರೂ. ಸಂದಾಯವಾಗಿರುತ್ತದೆ. ಪ್ರತಿನಿತ್ಯ ಸರಾಸರಿ 1 ಲಕ್ಷ 16 ಸಾವಿರ ಮಹಿಳೆಯರು ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದಾರೆಂದರು.

ಅನ್ನಭಾಗ್ಯ ಯೋಜನೆಯಡಿಯಲ್ಲಿ 1313305 ಫಲಾನುಭವಿಗಳಿದ್ದು, 5 ಕೆಜಿ ಅಕ್ಕಿ ಜೊತೆಗೆ ರಾಜ್ಯ ಸರ್ಕಾರದಿಂದ ಹೆಚ್ಚುವರಿ ನೀಡಲಾಗುವ 5 ಕೆಜಿ ಅಕ್ಕಿ ಮೊತ್ತವನ್ನು ಡಿಸೆಂಬರ್.2024ರವರೆಗೆ ಡಿ.ಬಿ.ಟಿ. ಮುಖಾಂತರ ನೇರವಾಗಿ ಫಲಾನುಭವಿಗಳ ಖಾತೆಗೆ 333.28 ಕೋಟಿ ಹಣ ಜಮೆ ಮಾಡಲಾಗಿದೆ. ಜನವರಿ.2025 ರ ಮಾಹೆಯ ಡಿಬಿಟಿ ಮೂಲಕ ವರ್ಗಾವಣೆ ಬಾಕಿ ಇರುತ್ತದೆ. ಫೆಬ್ರುವರಿ.2025 ರ ಮಾಹೆಯಿಂದ ಡಿ.ಬಿ.ಟಿ. ಬದಲಾಗಿ ಪಡಿತರ ಚೀಟಿಯಲ್ಲಿನ ಪ್ರತಿ ಫಲಾನುಭವಿಗಳಿಗೆ 05 ಕೆ.ಜಿ. ಹೆಚ್ಚುವರಿ ಅಕ್ಕಿ ಸೇರಿಸಿ ಒಟ್ಟು 10 ಕೆ.ಜಿ. ಅಕ್ಕಿ ಜೂನ್.2025 ರವರೆಗೆ ವಿತರಿಸಲಾಗಿದೆ. ನಂತರ ಜುಲೈ.2025ರ ಮಾಹೆಯಿಂದ ಆಹಾರಧಾನ್ಯದಲ್ಲಿ ಅಕ್ಕಿ ಜೊತೆ ಜೋಳ ಸೇರಿಸಿ ಒಟ್ಟು 10 ಕೆ.ಜಿ. ಆಹಾರಧಾನ್ಯವನ್ನು ಸೆಪ್ಟೆಂಬರ್.2025ರ ಮಾಹೆಯವರೆಗೆ ನೀಡಲಾಗಿರುತ್ತದೆ. ಅಕ್ಟೋಬರ್.2025ರ ಮಾಹೆಯಿಂದ ಒಟ್ಟು 10 ಕೆ.ಜಿ. ಅಕ್ಕಿಯನ್ನು ಮಾತ್ರ ವಿತರಣೆ ಮಾಡಲಾಗುತ್ತಿದೆಂದರು.

ಯುವನಿಧಿ ಯೋಜನೆಯಡಿಯಲ್ಲಿ ಪದವಿ ಪಡೆದ 15211 ಮತ್ತು ಡಿಪ್ಲೋಮಾ ಪಡೆದ 375 ಒಟ್ಟು 15586 ವಿದ್ಯಾರ್ಥಿಗಳಿಗೆ ಆಗಸ್ಟ್.2025 ರವರೆಗೆ 30.10 ಕೋಟಿ ಹಣ ಡಿಬಿಟಿ ಮೂಲಕ ಪವತಿಸಲಾಗಿದೆ. ಯುವನಿಧಿ ಯೋಜನೆಯಲ್ಲಿ ಜಿಲ್ಲೆಯ ಪದವಿಧರರು ನೋಂದಾಯಿತರಾದವರಿಗೆ ಅವರಿಗೆ ಉದ್ಯೋಗ ಹೊಂದಲು ಸರಿಯಾದ ಕೌಶಲ್ಯ ತರಬೇತಿ, ಮಾರ್ಗದರ್ಶನ ನೀಡಬೇಕು. ಈಗ ಪದವಿ ಹಾಗೂ ಇತರೆ ಪರೀಕ್ಷೆಗಳು ಜರುಗಿದ್ದು ಹೊಸ ಫಲಾನುಭವಿಗಳು ಯುವನಿಧಿ ಯೋಜನೆ ಒಳಪಡಲು ಆಸಕ್ತರಾಗಿದ್ದಾರೆ. ಅಧಿಕಾರಿಗಳು ಜಿಲ್ಲಾ ತಾಲ್ಲೂಕು ಮಟ್ಟದಲ್ಲಿ ಯುವನಿಧಿ ಯೋಜನೆಯ ಕಾಲೇಜುಗಳಲ್ಲಿ ಕ್ಯಾಂಪ್ ಆಯೋಜಿಸಿ ಮಾಹಿತಿ ನೀಡಬೇಕೆಂದರು.

ಜಿಲ್ಲಾ ಪಂಚಾಯತ ಮುಖ್ಯ ಯೋಜನಾಅಧಿಕಾರಿಗಳಾದ ಕಿಶೋರ ದುಬೆ ಅವರು ಮಾತನಾಡಿ, ಗ್ಯಾರಂಟಿ ಯೋಜನೆಗಳು ಸಂಬಂಧಪಟ್ಟ ಸಮಸ್ಯೆಗಳ ಬಗ್ಗೆ ಅಧಿಕಾರಿಗಳು ಲಿಖಿತ ರೂಪದಲ್ಲಿ ದೂರು ಸಲ್ಲಿಸಿದ್ದಲ್ಲಿ ಅವರ ಸಮಸ್ಯೆಗೆ ಸ್ಪಂದಿಸಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಮಟ್ಟದ ಉಪಾಧ್ಯಕ್ಷರು, ತಾಲ್ಲೂಕಾ ಮಟ್ಟದ ಅಧ್ಯಕ್ಷರು, ಸದಸ್ಯರುಗಳು ಅನ್ನಭಾಗ್ಯ ಯೋಜನೆಯಡಿ ಅಕ್ಕಿ ಸಮರ್ಪಕವಾಗಿ ಪಡಿತರ ಅಂಗಡಿಯವರು ನೀಡುತ್ತಿಲ್ಲ ಮತ್ತು ಶಾಲಾ ವಿದ್ಯಾರ್ಥಿಗಳಿಗೆ ಸರಿಯಾಗಿ ಬಸ್ಸು ಓಡಿಸುವ ಬಗ್ಗೆ ಸಭೆಯಲ್ಲಿ ಅಧ್ಯಕ್ಷರ ಗಮನಕ್ಕೆ ತಂದರು.

ಈ ಸಭೆಯಲ್ಲಿ ಜಿಲ್ಲಾ ಗ್ಯಾರಂಟಿ ಯೋಜನಾ ಅನುಷ್ಠಾನ ಸಮಿತಿ ಉಪಾಧ್ಯಕ್ಷರುಗಳಾದ ಲತಾ ಹಾರಕೂಡ, ಮಾರುತಿ ಬಂಗಾರೆ, ಮಹಬೂಬ ಖಾನ್, ಪೂಜಾ ಜಾರ್ಜ, ಉದಯಕುಮಾರ ವಾರದ, ತಾಲ್ಲೂಕು ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರುಗಳು ಸೇರಿದಂತೆ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

## ಸಂಪಾದಕೀಯ



ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕ

### ಕಲ್ಯಾಣ ಕರ್ನಾಟಕ ಮಂಡಳಿಯ ಅನುದಾನ ಸದುಪಯೋಗವಾಗಲಿ

ಕಲ್ಯಾಣ ಕರ್ನಾಟಕ ಪ್ರದೇಶದ ಸಮಗ್ರ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರ ಸ್ಥಾಪಿಸಿರುವ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ ಈ ಭಾಗದ ಜನತೆಗೆ ಆಶಾಕಿರಣವಾಗಿದೆ. ಶೈಕ್ಷಣಿಕ, ಆರೋಗ್ಯ, ಮೂಲಸೌಕರ್ಯ, ಉದ್ಯೋಗ ಹಾಗೂ ಕೃಷಿ ಕ್ಷೇತ್ರಗಳಲ್ಲಿ ಪ್ರಗತಿಗೆ ಅನುದಾನ ಒದಗಿಸುವ ಉದ್ದೇಶದಿಂದ ಮಂಡಳಿ ಕಾರ್ಯನಿರ್ವಹಿಸುತ್ತಿದೆ. ಆದರೆ ಈ ಮಹತ್ವದ ಅನುದಾನ ನಿಜಕ್ಕೂ ಜನರಿಗೆ ತಲುಪುತ್ತಿದೆಯೇ ಎಂಬ ಪ್ರಶ್ನೆ ಇಂದು ಗಂಭೀರ ಚರ್ಚೆಗೆ ಗ್ರಾಸವಾಗಿದೆ.

ಪ್ರತಿ ವರ್ಷ ಕೋಟ್ಯಾಂತರ ರೂಪಾಯಿ ಅನುದಾನ ಮಂಜೂರಾಗುತ್ತಿದರೂ, ಅನೇಕ ಗ್ರಾಮಗಳಲ್ಲಿ ಕುಡಿಯುವ ನೀರಿನ ಕೊರತೆ, ಶಿಥಿಲ ರಸ್ತೆ, ಅಪೂರ್ಣ ಶಾಲಾ ಕಟ್ಟಡಗಳು ಹಾಗೂ ಆರೋಗ್ಯ ಕೇಂದ್ರಗಳ ಅವ್ಯವಸ್ಥೆ ಮುಂದುವರಿದಿವೆ. ಕೆಲವೆಡೆ ಕಾಮಗಾರಿಗಳು ಆರಂಭವಾದರೂ ಮಧ್ಯದಲ್ಲೇ ನಿಂತು ಹೋಗಿವೆ. ಇದಕ್ಕೆ ಕಾರಣ ನಿರ್ಲಕ್ಷ್ಯ, ಭ್ರಷ್ಟಾಚಾರ ಹಾಗೂ ಸರಿಯಾದ ಮೇಲ್ವಿಚಾರಣೆಯ ಕೊರತೆ ಎಂಬುದು ಸಾರ್ವಜನಿಕರ ಅಭಿಪ್ರಾಯವಾಗಿದೆ.

ಅನುದಾನದ ಉದ್ದೇಶ ರಾಜಕೀಯ ಪ್ರದರ್ಶನಕ್ಕೆ ಅಲ್ಲ, ಜನಜೀವನ ಸುಧಾರಣೆಗೆ ಎಂಬುದನ್ನು ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಅರಿಯಬೇಕು. ಪ್ರತಿಯೊಂದು ಯೋಜನೆಯೂ ಕಾಲಮಿತಿಯಲ್ಲಿ ಪೂರ್ಣಗೊಳ್ಳಬೇಕು. ಕಾಮಗಾರಿಗಳ ಗುಣಮಟ್ಟ ಪರಿಶೀಲನೆಗೆ ಕಟ್ಟುನಿಟ್ಟಾದ ವ್ಯವಸ್ಥೆ ಜಾರಿಗೊಳ್ಳಬೇಕು. ಸಾರ್ವಜನಿಕರಿಗೆ ಯೋಜನೆಗಳ ಮಾಹಿತಿ ಪಾರದರ್ಶಕವಾಗಿ ಲಭ್ಯವಾಗುವಂತಾಗಬೇಕು.

ವಿಶೇಷವಾಗಿ ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರದಲ್ಲಿ ಕಲ್ಯಾಣ ಕರ್ನಾಟಕ ಮಂಡಳಿ ಪರಿಣಾಮಕಾರಿ ಯೋಜನೆಗಳನ್ನು ಜಾರಿಗೆ ತರಬೇಕಾಗಿದೆ. ಯುವಕರಿಗೆ ಕೌಶಲ್ಯ ತರಬೇತಿ, ವಿದ್ಯಾರ್ಥಿಗಳಿಗೆ ಉತ್ತಮ ಮೂಲಸೌಕರ್ಯ, ಮಹಿಳೆಯರಿಗೆ ಸ್ವಾವಲಂಬನೆ ಯೋಜನೆಗಳು ಈ ಭಾಗದ ಭವಿಷ್ಯ ರೂಪಿಸಬಲ್ಲವು.

ಈ ಭಾಗವು ದಶಕಗಳಿಂದ ಹಿಂದುಳಿತತೆಯ ಬೇಡಿಯಲ್ಲಿ ಸಿಲುಕಿದೆ. ಈಗ ದೊರೆತಿರುವ ಅನುದಾನ ಅವಕಾಶವನ್ನು ವ್ಯರ್ಥಗೊಳಿಸುವುದು ಭವಿಷ್ಯದ ಪೀಳಿಗೆಗೆ ಮಾಡುವ ದೊಡ್ಡ ಅನ್ಯಾಯವಾಗುತ್ತದೆ. ಸರ್ಕಾರ, ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಒಟ್ಟಾಗಿ ಹೊಣೆಗಾರಿಕೆಯಿಂದ ಕಾರ್ಯನಿರ್ವಹಿಸಿದರೆ ಮಾತ್ರ ಕಲ್ಯಾಣ ಕರ್ನಾಟಕ ನಿಜಾರ್ಥದಲ್ಲಿ ಅಭಿವೃದ್ಧಿಯ ಹಾದಿ ಹಿಡಿಯಲಿದೆ.

ಅನುದಾನ ಕಾಗದದ ಮೇಲಿನ ಸಂಖ್ಯೆಯಾಗದೆ, ಜನರ ಬದುಕಿನಲ್ಲಿ ಬದಲಾವಣೆಯಾಗಬೇಕು. ಅದೇ ಈ ಮಂಡಳಿಯ ನಿಜವಾದ ಯಶಸ್ಸು. ಇಗಿರುವ ಕೆಕೆಆರ್ ಡಿ ಬಿ ಅಧ್ಯಕ್ಷರು ಸಾಕಷ್ಟು ಅನದಾನ ನೀಡುತ್ತಿದ್ದಾರೆ. ಆದರೇ ಆ ಅನುದಾನ ಸದುಪಯೋಗ ಆದಾಗ ಮಾತ್ರ ಕೆಕೆಆರ್ ಡಿ ಬಿ ಸ್ಥಾಪನೆ ಮಾಡಿದ್ದಕ್ಕು ಸಾರ್ಥಕವಾಗುತ್ತದೆ.

## ಉದ್ಯಮಿ ವಿಷ್ಣುದಾಸ ಶಿಂಧೆ ಅವರ ಥೈಲ್ಯಾಂಡ್ ಪ್ರವಾಸ



- **ಮಲ್ಲಮ್ಮ ನುಡಿ ವಾರ್ತೆ,ಕಮಲನಗರ:**

ಕಮಲನಗರ ಪಟ್ಟಣದಲ್ಲಿ ಇರುವ ಭಾರತ ಪೆಟ್ರೋಲಿಯಂ'ನ ಮಾಲೀಕರು ಹಾಗೂ ಸಮಾಜ ಸೇವಕರೂ ಆದ ಶ್ರೀ ವಿಷ್ಣುದಾಸ ಶಿಂಧೆ ಅವರು ವಿದೇಶ ಪ್ರವಾಸ ಕೈಗೊಂಡಿದ್ದು, ಈ ಹಿನ್ನೆಲೆಯಲ್ಲಿ ಅವರಿಗೆ ಆತ್ಮೀಯವಾಗಿ ಬೀಳ್ಕೊಟ್ಟು ಶುಭ ಹಾರೈಸಲಾಯಿತು.ಫೆಬ್ರವರಿ 06 ರಿಂದ ಫೆಬ್ರವರಿ 12 ರವರೆಗೆ ವಿಷ್ಣುದಾಸ ಶಿಂಧೆ ಅವರು ಥೈಲ್ಯಾಂಡ್ ಮತ್ತು ಬ್ಯಾಂಕಾಕ್ ದೇಶಗಳಿಗೆ ಪ್ರವಾಸ ಕೈಗೊಳ್ಳುತ್ತಿದ್ದಾರೆ. ವ್ಯಾಪಾರ ಮತ್ತು ವೈಯಕ್ತಿಕ ಕಾರ್ಯನಿಮಿತ್ತ ಅವರು ಈ ವಿದೇಶಿ ಪ್ರವಾಸ ಕೈಗೊಳ್ಳುತ್ತಿದ್ದು, ಅವರ ಪ್ರಯಾಣ ಸುಖಕರವಾಗಿರಲಿ ಎಂದು ಹಿತೈಷಿಗಳು ಆಶಿಸಿದ್ದಾರೆ.ಈ ವೇಳೆ ವಿಷ್ಣುದಾಸ ಶಿಂಧೆ ಅವರ ಪ್ರವಾಸದ ನಿಮಿತ್ತ, ಆರ್‌ಟಿಒ (ಖಖಿಔ) ಏಜೆಂಟರಾದ ಅನಿಲ ಬೆಲ್ಲೆ ಅವರು ಶಿಂಧೆ ಅವರಿಗೆ ಶ್ಯಾಲು ಹೊದಿಸಿ, ಹಾರ ಹಾಕಿ ಆತ್ಮೀಯವಾಗಿ ಗೌರವಿಸಿ ಶುಭ ಕೋರಿದರು.

## ವಿರಾಟ್ ಹಿಂದೂ ಸಮ್ಮೇಳನ ಸಮಾಜದ ಎಲ್ಲರನ್ನೂ ಒಟ್ಟುಗೂಡಿಸುವ ಕಾರ್ಯವಾಗಲಿ – ಮುಕುಂದ ಜಿ



> ಜಾತೀಯತೆಯ ವ್ಯವಸ್ಥೆ ನಮ್ಮ ದೇಶಕ್ಕೆ ಬಂದ ದೊಡ್ಡ ರೋಗ, ಇದನ್ನು ಹೊಗಲಾಡಿಸಿದಾಗ ಮಾತ್ರ ಸ್ವಚ್ಛ ಸುಂದರ ಭಾರತ ನಿರ್ಮಾಣ ಸಾಧ್ಯ. - ಆರ್ ಎಸ್ ಎಸ್ ವಕ್ತಾರ ಮುಕುಂದ ಜಿ ಬೆಂಗಳೂರು.

- **ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ**

ಸಮಾಜದಲ್ಲಿನ ಎಲ್ಲಾ ಜನರನ್ನು ಒಟ್ಟುಗೂಡಿಸುವ ಕಾರ್ಯವಾದಾಗ ಭಾರತ ಶಕ್ತಿಶಾಲಿ ರಾಷ್ಟ್ರ ವಾಗಲು ಸಾಧ್ಯ ಎಂದು ಆಸ್‌ಎಸ್‌ಎಸ್‌ನ ಸಹ ಕಾರ್ಯವಾಹ್ ಮುಕುಂದ ಜೀ ಹೇಳಿದರು. ಪಟ್ಟಣದ ಚನ್ನಬಸವ ಆಶ್ರಮದಲ್ಲಿ ವಿರಾಟ ಹಿಂದೂ ಸಮ್ಮೇಳನ ಆಯೋಜನ ಸಮಿತಿ ವತಿಯಿಂದ ಬುಧವಾರ ನಡೆದ ವಿರಾಟ್ ಹಿಂದೂ ಸಮ್ಮೇಳನದಲ್ಲಿ ದಿಕ್ಸೂಚಿ ಭಾಷಣ ಮಾಡಿದರು. ಸಮಾಜ ಧರ್ಮ ಮರೆತು ಆತ್ಮ ಕೇಂದ್ರಿತವಾದ ಸಮಾಜ ಸುಧಾರಣೆಗಾಗಿ ಹೆಡಗೆ ವಾರ್ ರವರು ಆರ್ ಎಸ್ ಎಸ್ ಕಟ್ಟಿ ಸಮಾಜದ ಒಳಿತಿಗಾಗಿ ಶ್ರಮ ಪಟ್ಟಿದ್ದಾರೆ. ಸಾಮಾಜಿಕ ಪರಿವರ್ತನೆ ಯಾಗದೆ ವ್ಯವಸ್ಥೆ ಪರಿವರ್ತನೆ ಯಾದರೆ ಸಮಾಜ ಮುನ್ನಡೆಯುವುದಿಲ್ಲ. ಸಮಾಜದಲ್ಲಿ ಪರಿವರ್ತನೆ ತರಬೇಕಾದರೆ ಮನಸ್ಥಿತಿ ಬದಲಾಗಬೇಕು ಎಂದು ಹೇಳಿದರು. ಶ್ರೀ ಗುರುಬಸವ ಪಟ್ಟದ್ದೇವರು, ಶ್ರೀ ರಾಜೇಶ್ವರ ಶಿವಾಚಾರ್ಯ, ಶ್ರೀ ಶಂಕರರಾನಂದ ಸ್ವಾಮೀಜಿ, ಭಂತೇ ಕಶ್ಯಪ್, ಶ್ರೀ ಗೋವಿಂದ ಮಹಾರಾಜ, ಶ್ರೀ ಹಾವಗಿಲಿಂಗೇಶ್ವರ ಶಿವಾಚಾರ್ಯ ಸಾನ್ನಿಧ್ಯ ವಹಿಸಿ ಮಾತನಾಡಿದರು. ವಿರಾಟ ಹಿಂದೂ ಸಮ್ಮೇಳನ ಸಮಿತಿ ಅಧ್ಯಕ್ಷ ರಾಚಪ್ಪ ಪಾಟೀಲ್, ಮಾಜಿ ಶಾಸಕ ಪ್ರಕಾಶ್ ಖಂಡ್ರೆ, ಪ್ರಮುಖರಾದ ಡಿ.ಕೆ.ಸಿದ್ರಾಮ, ದೇವೇಂದ್ರ ಬಿ ಆರ್ ಪಾಟೀಲ್, ಸುಧೀರ್ ನಾಯಿಕ್, ಶಿವರಾಜ್ ಗಂದಗೆ, ಸೂರಜ್ ಸಿಂಗ್ ರಜಪುತ, ಗೋವಿಂದರಾವ್ ಬಿರಾದರ್, ಸೋಮನಾಥಪ್ಪ ಅಷ್ಟೂರೆ, ಹಿರಿಯ ಮುಖಂಡ ಚನ್ನಬಸವಣ್ಣ ಬಳತೆ, ಪ್ರಭುರಾವ ಧೂಪೆ, ಯುವಮುಖಂಡರಾದ ಶಿವು ಲೋಖಂಡೆ, ಪ್ರಸನ್ನ ಪ್ರಕಾಶ್ ಖಂಡ್ರೆ, ಜಯಕಿಶನ ಬಿಯಾನಿ, ವಿಲಾಸ ಬಕ್ಕಾ, ಅಶೋಕ ವಾಲೆ, ಮಹಾಂತೇಶ, ಸತೀಶ್ ಮುದಾಳೆ, ಈಶ್ವರ್ ರುಮ್ಮ, ಚಂದ್ರಕಾಂತ್ ತಳವಾಡೆ, ಜೈಹಿಂದ್ ಕುಂಬಾರ, ಇದ್ದರು. ಪ್ರಕಾಶ್ ಮಾಶೆಟ್ಟೆ ಸ್ವಾಗತಿಸಿದರು, ದೀಪಕ ಥಮಕೆ ನಿರೂಪಿಸಿದರು. ಜಯರಾಜ್ ದಾಬಶೆಟ್ಟಿ ವಂದಿಸಿದರು.

## ಎಸ್ಸೆಸ್ಸೆಲ್ಸಿ ಪರೀಕ್ಷಾ ಫಲಿತಾಂಶ ಸುಧಾರಣಾ ಕಾರ್ಯಾಗಾರ ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಿ

- **ಮಲ್ಲಮ್ಮ ನುಡಿ ವಾರ್ತೆ,ಭಾಲ್ಕಿ:**




ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆ ಆರಂಭಕ್ಕೆ ದಿನಗಣನೆ ಶುರುವಾಗಿದ್ದು, ವಿದ್ಯಾರ್ಥಿಗಳು ಯಾವುದೇ ಒತ್ತಡ, ಗೊಂದಲ, ಆತಂಕಕ್ಕೆ ಒಳಗಾಗದೇ ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಜಿ.ಹಳ್ಳದ ಹೇಳಿದರು. ಪಟ್ಟಣದ ಪುರಭವನ ಸಭಾಂಗಣದಲ್ಲಿ ಜಿಲ್ಲಾ ಪಂಚಾಯಿತಿ ಬೀದರ್, ಶಾಲಾ ಶಿಕ್ಷಣ ಇಲಾಖಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದ ಸಹಯೋಗದಲ್ಲಿ ಬುಧವಾರ ಆಯೋಜಿಸಿದ್ದ 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷಾ ಫಲಿತಾಂಶ ಸುಧಾರಣಾ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ಮುಂದಿನ ಭವಿಷ್ಯವನ್ನು ನಿರ್ಧರಿಸುತ್ತದೆ. ಹಾಗಾಗಿ ವಿದ್ಯಾರ್ಥಿಗಳು ಈಗಿನಿಂದಲೇ ಸಿದ್ಧತೆ ಮಾಡಿಕೊಂಡು ಓದಿನ ಕಡೆಗೆ ಹೆಚ್ಚಿನ ಸಮಯ ನೀಡಬೇಕು. ತಿಳಿಯದ ವಿಷಯಗಳ ಬಗ್ಗೆ ತಮ್ಮ ಶಿಕ್ಷಕರ ಬಳಿ ಕೇಳಿ ಇರುವ ಸಮಸ್ಯೆ, ಗೊಂದಲಗಳನ್ನು ಬಗೆ ಹರಿಸಿಕೊಳ್ಳಬೇಕು. ಶಿಕ್ಷಕರಾದವರೂ ಕೂಡ ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಹೆಚ್ಚು ಒತ್ತು ನೀಡಿ ತಾಲೂಕಿನ ಈ ಬಾರಿಯ ಎಸ್ಸೆಸ್ಸೆಲ್ಸಿ ಫಲಿತಾಂಶ ಜಿಲ್ಲೆಗೆ ಪ್ರಥಮ ಬರುವಂತೆ ಶ್ರಮ ವಹಿಸಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪ್ರೌಢ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ದತ್ತು ಕಾಟಕರ್, ಅಕ್ಷರ ದಾಸೋಹ ಇಲಾಖೆಯ ಸಹಾಯಕ ನಿರ್ದೇಶಕ ಮಲ್ಲಿನಾಥ ಸಜ್ಜನ್, ಶಿಕ್ಷಣ ಸಂಯೋಜಕ ಮಲ್ಲಿಕಾರ್ಜುನ ಕನ್ನಾಳೆ, ವಿಷಯ ಸಂಪನ್ಮೂಲ ವ್ಯಕ್ತಿ ಅವಿನಾಶ, ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳಾದ ಪ್ರಭು ಡಿಗ್ಗೆ, ನೀಲಕಂಠ, ಸಂದೀಪ ವಾಡೀಕರ್ ಸೇರಿದಂತೆ ಹಲವರು ಇದ್ದರು.

### ಪಿ.ಎಂ.ಜೆ.ಜೆ.ಬಿ.ವೈ ಮತ್ತು ಪಿ.ಎಂ.ಎಸ್.ಬಿ.ವೈ ವಿಶೇಷ ನೋಂದಣಿ ಮಹಾ ಮೇಳ

# ಸಾಮಾಜಿಕ ಭದ್ರತೆಗೆ ಒಳಗಾದ 2,112 ಜನ ಸಿಬ್ಬಂದಿ



ಕಲಬುರಗಿ,ಫೆ.4 (ಕರ್ನಾಟಕ ವಾರ್ತೆ) ಕಲಬುರಗಿ ಮತ್ತು ಆಳಂದ ತಾಲೂಕಾ ಪಂಚಾಯತ್ ಕಚೇರಿಯಲ್ಲಿ ಬುಧವಾರ ದಿನಗೂಲಿ, ಹೊರಗುತ್ತಿಗೆ ಹಾಗೂ ಗೌರವಧನದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಆಯೋಜಿಸಿದ ಪ್ರಧಾನಮಂತ್ರಿ ಜೀವನ ಜ್ಯೋತಿ ಬಿಮಾ ಯೋಜನೆ (ಕಿಒಎಎಃಙ) ಮತ್ತು ಪ್ರಧಾನಮಂತ್ರಿ ಸುರಕ್ಷಾ ಬಿಮಾ ಯೋಜನೆ (ಕಿಒಖಃಙ) ವಿಮೆ ನೋಂದಣಿ ಮಹಾ ಮೇಳ ಯಶಸ್ವಿಯಾಗಿ ಜರುಗಿದ್ದು, ಎರಡು ತಾಲೂಕಿನಲ್ಲಿ ಸುಮಾರು 2,112 ಜನ ಸಿಬ್ಬಂದಿ ನೋಂದಣಿ ಮಾಡಿಕೊಳ್ಳುವ ಮೂಲಕ ಸಾಮಾಜಿಕ ಭದ್ರತೆಗೆ ಒಳಪಟ್ಟಿದ್ದಾರೆ.

ಆರ್ಥಿಕ ಮತ್ತು ಸಾಮಾಜಿಕ ಭದ್ರತೆ ನೀಡಲಿದೆ: ಕಲಬುರಗಿಯಲ್ಲಿ ವಿಮೆ ನೋಂದಣಿ ಮೇಳ ಉದ್ಘಾಟಿಸಿದ ಜಿಲ್ಲಾ ಪಂಚಾಯತ್ ಸಿ.ಇ.ಓ ಮಾತನಾಡಿ, ಪ್ರತಿಯೊಬ್ಬರು ಸಾಮಾಜಿಕ ಮತ್ತು ಆರ್ಥಿಕ ಭದ್ರತೆ ಪಡೆಯಬೇಕೆಂಬುವ ಉದೇಶದಿಂದ ಇಂದಿಲ್ಲಿ ವಿಮೆ ನೋಂದಣಿ ಮೇಳ ಆಯೋಜಿಸಿದೆ. ವಾರ್ಷಿಕವಾಗಿ ಕೇವಲ 20 ರೂ. ಪಾವತಿಸಿ ಪಿ.ಎಂ.ಎಸ್.ಬಿ.ವೈ ಮತ್ತು 436 ರೂ. ಪಾವತಿಸಿ ಪಿ.ಎಂ.ಜೆ.ಜೆ.ಬಿ.ವೈ ಯೋಜನೆಯಡಿ ವಿಮೆ ಮಾಡಿಸಿಕೊಂಡಲ್ಲಿ ನಿಮ್ಮ ಕುಟುಂಬಕ್ಕೆ ಭದ್ರತೆ ಸಿಗಲಿದೆ. ಇಂತಹ ಒಂದು ಸಾಮಾಜಿಕ ಮತ್ತು ಆರ್ಥಿಕ ಭದ್ರೆತ ನೀಡುವ ವಿಮೆಯನ್ನು ಎಲ್ಲರು ಮಾಡಿಸಬೇಕೆಂದು ಕರೆ ನೀಡಿದರು.

ಜಿಲ್ಲಾ ಪಂಚಾಯತ್, ತಾಲೂಕಾ ಪಂಚಾಯತ್ ಹಾಗೂ ಲೀಡ್ ಬ್ಯಾಂಕ್ ಸಂಯುಕ್ತಾಶ್ರಯದಲ್ಲಿ ನಡೆದ ಈ ನೋಂದಣಿ ಅಭಿಯಾನದಲ್ಲಿ ಪಿ.ಡಿ.ಓ, ಕಾರ್ಯದರ್ಶಿಗಳು, ದ್ವಿತೀಯ ದರ್ಜೆ ಲೆಕ್ಕ ಸಹಾಯಕರು, ಗ್ರಾಮ ಪಂಚಾಯತಿಯ ಸಿಬ್ಬಂದಿಗಳಾದ ಕರವಸೂಲಿಗಾರರು, ಕ್ಲರ್ಕ-ಕಂ-ಡಾಟಾ ಎಂಟ್ರಿ ಆಪರೇಟರ್, ಪಂಪ್ ಆಪರೇಟರ, ಗ್ರೂಪ್ 'ಡಿ' ಸಿಬ್ಬಂದಿ, ಸ್ವಚ್ಛತಾಗಾರರು, ನರೇಗಾ-ಎನ್.ಆರ್.ಎಲ್.ಎಮ್. ಸಿಬ್ಬಂದಿಗಳು, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಹಾಗೂ ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯ ಅಡುಗೆ ಸಿಬ್ಬಂದಿಗಳು, ಸಹಾಯಕರು ಪಿ.ಎಂ.ಜೆ.ಜೆ.ವೈ ಮತ್ತು ಪಿ.ಎಂ.ಬಿ.ಸ್ಯೆ.ವೈ ವಿಮೆ ನೋಂದಣಿ ಮಾಡಿಕೊಳ್ಳುವ ಮೂಲಕ ಆರ್ಥಿಕ ಒಳಗೊಳ್ಳುವಿಕೆಯಲ್ಲಿ ಸೇರ್ಪಡೆಯಾದರು.

ಇದಕ್ಕಾಗಿ ಬ್ಯಾಂಕಿನಿಂದ ಸ್ಥಳದಲ್ಲಿಯೇ ನೊಂದಣಿಗೆ ವಿಶೇಷ ಕ್ಯಾಂಪ್ ಆಯೋಜಿಸಲಾಗಿತ್ತು. ಕಲಬುರಗಿಯಲ್ಲಿ ಸುಮಾರು 1,500 ಜನ ಸಿಬ್ಬಂದಿ ವಿಮೆ ನೋಂದಣಿ ಮಾಡಿಕೊಂಡರು.

ವಿಮೆ ನೋಂದಣಿ ಹೇಗೆ:? ಪ್ರಧಾನಮಂತ್ರಿ ಜೀವನ ಜ್ಯೋತಿ ಬಿಮಾ ಯೋಜನೆ (ಕಿಒಎಎಙ) ಯೋಜನೆಯಡಿ 18-50 ವಯೋಮಾನದವರು ವಾರ್ಷಿಕ 436 ರೂ. ಹಣ ಪಾವತಿಸಿ ನೋಂದಣಿ ಮಾಡಿಕೊಳ್ಳಬಹುದು. ಸಹಜ ಸಾವನಪ್ಪಿದಲ್ಲಿ 2 ಲಕ್ಷ ರೂ. ಪರಿಹಾರ ಸಿಗಲಿದೆ. ಅದೇ ರೀತಿ ಪ್ರಧಾನಮಂತ್ರಿ ಸುರಕ್ಷಾ ಬಿಮಾ ಯೋಜನೆ (ಕಿಒಖಃಙ) ಯೋಜನೆಯಡಿ 18-70 ವಯೋಮಾನದವರು ವಾರ್ಷಿಕ 20 ರೂ. ಹಣ ಪಾವತಿಸುವ ಮೂಲಕ ಯೋಜನೆಯ ಲಾಭ ಪಡೆದುಕೊಳ್ಳಬಹುದು.

ಅಪಘಾತದಲ್ಲಿ ದುರ್ಮರಣ ಹೊಂದಿಲ್ಲಿ 2 ಲಕ್ಷ ರೂ., ಭಾಗಶ: ಗಾಯಾಳುಗಳಾಗಿದಲ್ಲಿ 1 ಲಕ್ಷ ರೂ. ಮತ್ತು ಅಪಘಾತದದಿಂದ ಸಂಪೂರ್ಣ ಅಂಗವಿಕಲರಾದಲ್ಲಿ ಗರಿಷ್ಠ 2 ಲಕ್ಷ ರೂ. ವರೆಗೆ ಪರಿಹಾರ ಸಿಗಲಿದೆ. ಉಳಿತಾಯ ಖಾತೆ ಹೊಂದಿರುವ ಅಂಚೆ, ಬ್ಯಾಂಕ್‌ಗಳನ್ನು ಸಂಪರ್ಕಿಸಿ ವಿಮೆ ನೋಂದಣಿ ಮಾಡಬಹುದಾಗಿದೆ.

ಕಾರ್ಯಕ್ರಮದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಶರಣಬಸಪ್ಪ ಕ್ಯಾತನಳ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಜಕುಮಾರ ರಾಠೋಡ, ಜಿಲ್ಲಾ ಲೀಡ್ ಬ್ಯಾಂಕ್ ಪ್ರಭಾರಿ ಮುಖ್ಯ ವ್ಯವಸ್ಥಾಪಕ ನಾಗೇಂದ್ರ ಬಾಪೂಗೋಳ, ಜಿಲ್ಲಾ ಅಲ್ಪಸಂಖ್ಯಾತ ಕಲ್ಯಾಣಾಧಿಕಾರಿ ಸಂಗಮೇಶ, ತಾಲೂಕಾ ಪಂಚಾಯತ್ ಇ.ಓ ಸ್ಯೆಯದ್ ಪಟೇಲ್, ತಾಲೂಕಾ ಆರೋಗ್ಯ ಅಧಿಕಾರಿ ಡಾ. ಮಾರುತಿರಾವ ಕಾಂಬಳೆ ಸೇರಿದಂತೆ ಅನೇಕ ಅಧಿಕಾರಿ-ಸಿಬ್ಬಂದಿಗಳು ಭಾಗಿಯಾಗಿದ್ದರು.

ಆಳಂದನಲ್ಲಿಯೂ 612 ಜನರಿಂದ ನೋಂದಣಿ: ಇನ್ನು ಆಳಂದ ತಾಲೂಕ ಪಂಚಾಯತ್ ಕಚೇರಿ ಆವರಣದಲ್ಲಿಯೂ ಜಿಲ್ಲಾ ಪಂಚಾಯತ್ ಮುಖ್ಯ ಲೆಕ್ಕಾಧಿಕಾರಿ ವಿಕಾಸ ಸಜ್ಜನ್ ನೇತೃತ್ವದಲ್ಲಿ ಜರುಗಿದ ವಿಮೆ ನೋಂದಣಿ ಮಹಾಮೇಳ ನಡೆಯಿತು. ಸುಮಾರು 612 ಜನ ಸಿಬ್ಬಂದಿ ಪಿ.ಎಂ.ಜೆ.ಜೆ.ಬಿ.ವೈ ಮತ್ತು ಪಿ.ಎಂ.ಎಸ್.ಬಿ.ವೈ ವಿಮೆ ನೋಂದಣಿ ಮಾಡಿಸಿಕೊಂಡರು. ತಾಲೂಕಾ ಪಂಚಾಯತ್ ಇ.ಓ ಮಾನಪ್ಪ ಕಟ್ಟಿಮನಿ, ಲೆಕ್ಕಾಧಿಕಾರಿ ಪ್ರಕಾಶ ಜಾಧವ ಸೇರಿದಂತೆ ಅನೇಕರು ಇದಕ್ಕೆ ಸಾಕ್ಷಿಯಾದರು.

ಮಹಿಳೆಗೆ ಸಿಕ್ತು 2 ಲಕ್ಷ ರೂ. ಪರಿಹಾರ ಚೆಕ್: ಮಹಾಮೇಳ ಅಂಗವಾಗಿ ಆಳಂದನಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ರಸ್ತೆ ಅಪಘಾತದಲ್ಲಿ 2024ರ ನವೆಂಬರ್ 9 ರಂದು ಪತಿ ದಿ.ಗಣೇಶ ಖಂಡೆಪ್ಪ ಪೂಜಾರಿ (ವಾಹನ ಚಾಲಕ) ಕಳೆದುಕೊಂಡು ವಿಮೆ ಪರಿಹಾರಕ್ಕೆ ವರ್ಷದಿಂದ ಬ್ಯಾಂಕಿಗೆ ಅಲೆದಾಡುತ್ತಿದ್ದ ತಾಲೂಕ ಪಂಚಾಯತ್ ಎನ್.ಆರ್.ಎಲ್.ಎಮ್. ಸಿಬ್ಬಂದಿ ಲಕ್ಷ್ಮೀ ಪೂಜಾರಿ ಅವರಿಗೆ ಕೊನೆಗೆ ಮುಕ್ತಿ ಸಿಕ್ಕಿ, ಸ್ಥಳದಲಿಯೇ 2 ಲಕ್ಷ ರೂ. ಪರಿಹಾರದ ಚೆಕ್ ಪಡೆದರು.

ಲಕ್ಷ್ಮೀ ಪೂಜಾರಿ ಅವರು ಸ್ವತ ಮತ್ತು ಪತಿ ಹೆಸರಿನಲ್ಲಿ ಎರಡು ವಿಮೆ ಯೋಜನೆಯಡಿ ನೋಂದಣಿ ಮಾಡಿಸಿಕೊಂಡಿದ್ದರು. ಪತಿ ನಿಧನ ನಂತರ ಬ್ಯಾಂಕಿಗೆ ಅಲೆದಾಡಿದರು ಪರಿಹಾರ ಸಿಕ್ಕಿಲ್ಲ ಎಂದು ಮೇಳದಲ್ಲಿ ತಮ್ಮ ಅಳಲು ತೋಡಿಕೊಂಡರು. ವಿಷಯ ಅರಿತ ಜಿಲ್ಲಾ ಪಂಚಾಯತ್ ಮುಖ್ಯ ಲೆಕ್ಕಾಧಿಕಾರಿ ವಿಕಾಸ ಸಜ್ಜನ್ ಕೂಡಲೆ ಬ್ಯಾಂಕಿಗೆ ದೌಡಾಯಿಸಿ ವಿಚಾರಿಸಿದಾಗ ಬ್ಯಾಂಕ ಸಿಬ್ಬಂದಿ ಎಚ್ಚೆತ್ತುಕೊಂಡು ಲಕ್ಷ್ಮೀ ಅವರಿಗೆ ಅಪಘಾತ ವಿಮೆಯಡಿ ತಕ್ಷಣವೇ 2 ಲಕ್ಷ ರೂ. ಚೆಕ್ ನೀಡಿದರು. ಇನ್ನುಳಿದಂತೆ ಪಿ.ಎಂ.ಜೆ.ಜೆ.ಬಿ.ವೈ ಯೋಜನೆಯ ಇನ್ನೊಂದು ವಿಮೆಗೂ ಒಂದು ವಾರದಲ್ಲಿ 2 ಲಕ್ಷ ರೂ. ಪರಿಹಾರ ನೀಡಲಾಗುವುದು ಎಂದು ಬ್ಯಾಂಕ್ ಅಧಿಕಾರಿಗಳು ತಿಳಿಸಿದ್ದಾರೆ.

## ಆದರ್ಶ ವೃತ್ತಿ ಜೀವನದ ಸಾಹಿತಿ ಡಾ. ದಯಾಸಾಗರ

### ಸಾಹಿತಿ ಡಾ.ಗವಿಸಿದ್ದಪ್ಪ ಪಾಟೀಲ



ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ:

ಬಂಧಿಖಾನೆಯಲ್ಲಿ ವೃತ್ತಿ ಜೀವನ ಸಾಮಾನ್ಯವಾದುದಲ್ಲ. ಅಂತಹ ಜನ ಮಧ್ಯದಲ್ಲಿ ವೃತ್ತಿಯನ್ನು ಪ್ರಾಮಾಣಿಕವಾಗಿ ನಡೆಸಿ, ಕವಿ, ಲೇಖಕ, ಬರಹಗಾರರಾಗಿ ಹೊರಹೊಮ್ಮಿದ ಸರಳ ಸಾತ್ವಿಕ ವ್ಯಕ್ತಿ. ಮನೆಗೆದ್ದು ಮಾರು ಗೆದ್ದ ಅಪರೂಪದ ಸಾಹಿತಿ ಡಾ.ಬಸವರಾಜ ದಯಾಸಾಗರ

ಎಂದು ಸಾಹಿತಿ ಡಾ.ಗವಿಸಿದ್ಧಪ್ಪ ಪಾಟೀಒ ಅಭಿಮತ ಪಟ್ಟರು. ಮಾಣಿಕನಗರದ ಅಂಧ ವಸತಿ ಶಾಲೆಯಲ್ಲಿ ಕರ್ನಾಟಕ ಜಾನಪದ ಪರಿಷತ್ತು, ಸಾಕ್ಷಿ ಪ್ರತಿಷ್ಠಾನ, ಗೆಲಕೆಯರ ಬಳಗ ಏರ್ಪಡಿಸಿದ ಡಾ.ಬಸವರಾಜ ದಯಾಸಾಗರ ಅವರ ಹುಟ್ಟು ಹಬ್ಬ ಮತ್ತು ಬೀಳ್ಕೊಡುಗೆ ಸಮಾರಂಭ ಉದ್ಘಾಟಿಸಿ ಮಾತನಾಡಿ ಜೇಲರ್ ಆಗಿ ಕುಟುಂಬ, ವೃತ್ತಿಗೂ ಸಮಾಜ, ಸಾಹಿತ್ಯಕ್ಕೂ ಸೇವೆ ಅಮೋಘವೆಂದರು. ಕೆಪಿಸಿಸಿ ರಾಜ್ಯ ಓಬಿಸಿ ಉಪಾಧ್ಯಕ್ಷ ಡಾ.ಸಿದ್ರಾಮ ವಾಘಮಾರೆ ಅವರು ಇರುವಷ್ಟು ದಿನ ಒಳ್ಳೆಯ ಕೆಲಸ ಕಾರ್ಯ ಮಾಡಿದ್ದಾರೆ. ಹೀಗಾಗಿ ಅವರು ಎಲ್ಲಿಯೇ ಹೊಇಗಲಿ ಅಲ್ಲಿ ಕೆಲಸ ನಿರ್ವಹಿಸಿದವರು. ಚಿಂತಕಿ ಡಾ.ಜಯದೇವಿ ಗಾಯಕವಾಡ ಮಾತನಾಡಿ ಉದ್ಯೋಗ ಮಾಡುತ್ತಲೇ, ಸಾಹಿತ್ಯ ಕ್ಷೇತ್ರದಲ್ಲಿ ಅವರ ಸಾಧನೆ ಬಗಷನೀಯವೆಂದರು.

ಅಧ್ಯಕ್ಷತೆ ವಹಿಸಿದ್ದ ಕಜಾಪ ಅಧ್ಯಕ್ಷ ಶರದಕುಮಾರ ನಾರಾಯಣಪೇಟ್ಕರ್ ದಯಾಸಾಗರ ಅವರು ಎಲ್ಲರಂತೆ ಅವರು ಉದ್ಯೋಗ ಮಾಡಿ ಬಿಟ್ಟರೆ ಅವರನ್ನ ಯಾರು ನೆನೆಸುತ್ತಿರಲಿಲ್ಲ. ಎಲ್ಲರ ಜೊತೆಗೆ ಸಾಹಿತ್ಯ ಜೊತೆ ಒಂದಾಗಿ ಇರುವುದರಿಂದ ಜನಪ್ರಿಯರಾದರು. ಅವರ ಕಾರ್ಯ ಹಚ್ಚ ಹಸಿರೆಂದರು.

ಸನ್ಮಾನ ಸ್ವೀಕರಿಸಿದ ಡಾ.ಬಸವರಾಜ ದಯಾಸಾಗರ ನಾನು ಅನೇಕ ಕಡೆ ಕೆಲಸ ಮಾಡಿರುವೆ ಹಾಗೇ ಬೀದರ ಮತ್ತು ಹುಮನಾಬಾದ ಸೇವೆ ನಾನು ಮರೆಯುಂತಿಲ್ಲ. ಸಾಹಿತ್ಯ ಪ್ರಕಟ, ಪ್ರೋತ್ಸಾಹ ಇಲ್ಲಿಂದ ಆಗಿದೆ. ನಾನು ಯಾವತ್ತೂ ಈ ನೆಲ ಮರೆಯುವುದಿಲ್ಲ ಎಂದರು. ಅಂಧ ವಸತಿ ಶಾಲೆಯ ಮಕ್ಕಳು ಪ್ರಾರ್ಥನೆ ಹಾಡಿದರು. ಶಶಿಕಾಂತ ಗಾವಲ್ಕರ ಸ್ವಾಗತಿಸಿದರು ಡಾ.ಸಿದ್ಧಾರ್ಥ ಮಿತ್ರಾ ನಿರೂಪಿಸಿ ವಂದಿಸಿದರು. ಶಶಿಕಾಂತ ಘವಾಳಕಾರ, ಶಿವುಪವಾರ, ಸೂರ್ಯಕಾಂತ ಪಾಟೀಲ, ಸಾಕ್ಷಿ ಪಾಟೀಲ, ದಯಾಸಾಗರ ಸಂಗೀತಾ, ಪ್ರಶಾಂತ ದಯಾಸಾಗರ, ತುಕಾರಾಂ RtdASI ಮೊದಲಾದವರಿದ್ದರು.

## ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಫಲಾನುಭವಿಗೆ ವಾತ್ಸಲಯ ಕಿಟ್ ವಿತರಣೆ

ಮಲ್ಲಮ್ಮ ನುಡಿ ವಾರ್ತೆ



ಕೊಪ್ಪಳ : ತಾಲೂಕಿನ ವಾತ್ಸಲ್ಯ ಫಲಾನುಭವಿ ಕೊಪ್ಪಳದ ಹಮಾಲಾರ ಕಾಲೋನಿ ನಿವಾಸಿಯಾದ ಗಂಗಮ್ಮ ಇವರಿಗೆ ಕಲ್ಯಾಣ ಕರ್ನಾಟಕ ಪ್ರಾದೇಶಿಕ ವಿಭಾಗದ ಪ್ರಾದೇಶಿಕ ನಿರ್ದೇಶಕರಾದ ಚಂದ್ರಶೇಖರ್ ಜೆ. ರವರು ಹಾಗೂ ಕೊಪ್ಪಳ ಜಿಲ್ಲೆಯ ಜಿಲ್ಲಾ ನಿರ್ದೇಶಕರಾದ ಪ್ರಕಾಶ್ ರಾವ್ ರವರು ಮತ್ತು ಕೊಪ್ಪಳ ಪಶ್ಚಿಮ ತಾಲೂಕಿನ ಯೋಜನಾಧಿಕಾರಿಗಳಾದ ಜಗದೀಶ್ ಕೆ ಎಚ್. ರವರ ಉಪಸ್ಥಿತಿಯಲ್ಲಿ ವಾತ್ಸಲ್ಯ ಕಿಟ್ ವಿತರಣೆ ಮಾಡಲಾಯಿತು.

ಪ್ರಾದೇಶಿಕ ನಿರ್ದೇಶಕರು ಫಲಾನುಭವಿಯ ಯೋಗಕ್ಷೇಮ ವಿಚಾರಿಸಿ ಮಾತೃಶ್ರೀ ಅಮ್ಮನವರು ಅಸಹಾಯಕ ಕುಟುಂಬಗಳನ್ನು ಗುರುತಿಸಿ ನೀಡುತ್ತಿರುವ ಸೌಲಭ್ಯದ ಕುರಿತು ತಿಳಿಸಿ ಕಿಟ್ ಅನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳುವಂತೆ ತಿಳಿಸಿದರು.

ಜ್ಞಾನವಿಕಾಸ ಸಮನ್ವಯಧಿಕಾರಿ ಗೀತಾ. ವಲಯದ ಮೇಲ್ವಿಚಾರಕ. ಮಲ್ಲಿಕಾರ್ಜುನ ಸೇವಾಪ್ರತಿನಿಧಿ ಪೂರ್ಣಿಮಾ ಹಾಗೂ ಇತರರು ಉಪಸ್ಥಿತರಿದ್ದರು.

## ಫೆಬ್ರವರಿ 26 ಮತ್ತು 27ಕ್ಕೆ ರಸ್ತೆ ಸಂಚಾರ ಗಣ:ಶರಣಪ್ಪಾ ಸುಲಗಂಟೆ

• ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ:



ಲೋಕೋಪಯೋಗಿ ಇಲಾಖೆಯ ಅಡಿಯಲ್ಲಿ ಬರುವ ರಾಜ್ಯ ಹೆದ್ದಾರಿಗಳ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಮೇಲೆ ಓಡಾಡುವ ವಾಹನಗಳ ಗಣತಿಯನ್ನು ಅರಿಯುವ ಉದ್ದೇಶದಿಂದ 2026ನೇ ಸಾಲಿನ ರಸ್ತೆ ಸಂಚಾರ ಗಣತಿ ಕಾರ್ಯ ಇದೇ ಫೆಬ್ರವರಿ 26ರ ಬೆಳಿಗ್ಗೆ 6 ಗಂಟೆಯಿಂದ ಫೆಬ್ರವರಿ 27ರ ಬೆಳಿಗ್ಗೆ 6 ಗಂಟೆ ವರೆಗೆ ಸತತವಾಗಿ ಎರಡು ದಿನಗಳ ಕಾಲ ನಡೆಸಲಾಗುತ್ತಿದೆ ಎಂದು ಲೋಕೋಪಯೋಗಿ ಇಲಾಖೆಯ ಕಲಬುರಗಿ ವಲಯದ ಸಂಪರ್ಕ ಮತ್ತು ಕಟ್ಟಡಗಳು (ಈಶಾನ್ಯ) ಮುಖ್ಯ ಇಂಜಿನಿಯರ್ ಶರಣಪ್ಪಾ ಸುಲಗಂಟೆ ತಿಳಿಸಿದ್ದಾರೆ.

ಈಶಾನ್ಯ ವಲಯದ ಕಲಬುರಗಿ ವ್ಯಾಪ್ತಿಯಲ್ಲಿ ಬರುವ 7 ಜಿಲ್ಲೆಗಳ ರಾಜ್ಯ ಹೆದ್ದಾರಿ ಮೇಲೆ 370 ಮತ್ತು ಜಿಲ್ಲಾ ಮುಖ್ಯ ರಸ್ತೆ ಮೇಲೆ 692 ಸೇರಿ ಒಟ್ಟಾರೆ 1,064 ರಸ್ತೆ ಸಂಚಾರ ಗಣತಿ ಕೇಂದ್ರಗಳ ಮೂಲಕ ಗಣತಿ ಕಾರ್ಯ ನಡೆಯಲಿದ್ದು, ವಾಹನ ಚಾಲಕರು, ಪ್ರಯಾಣಿಕರು ಮತ್ತು ಸಾರ್ವಜನಿಕರು ಸಹಕರಿಸುವ ಮೂಲಕ ಗಣತಿ ಕಾರ್ಯ ಯಶಸ್ವಿಗೊಳಿಸಬೇಕೆಂದು ಅವರು ಮನವಿ ಮಾಡಿದ್ದಾರೆ.

ರಸ್ತೆಯ ಸಂಚಾರದ ಬೆಳವಣೆಗೆಯ ತೀವ್ರತೆಯನ್ನು ಗಮನಿಸಿ ರಸ್ತೆಯ ಅಗಲಿಕರಣ ಗೂಳಿಸುವುದು, ರಸ್ತೆಗಳನ್ನು ಮೇಲ್ದರ್ಜೇಗೆರಿಸುವುದು, ಇರುವ ರಸ್ತೆಗಳನ್ನು ದುರಸ್ತಿ ಪಡಿಸುವಲ್ಲಿ ಹಾಗೂ ರಸ್ತೆಯನ್ನು ಉತ್ತಮ ಪಡಿಸಲು ಈ ಗಣತಿ ಸಹಾಯಕವಾಗಲಿದೆ.

ರಸ್ತೆ ಮೇಲೆ ಯಾವ ರೀತಿ ವಾಹನ ಸಂಚಾರ ಅಧಿಕವಾಗುತ್ತಿದೆ ಎನ್ನುವದನ್ನು ಅರಿತು ರಾಜ್ಯ ಮಟ್ಟದಲ್ಲಿ ರಸ್ತೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಿ ಕಾರ್ಯರೂಪಕ್ಕೆ ತರುವುದು ಗಣತಿಯ ಮುಖ್ಯ ಉದ್ದೇಶವಾಗಿದೆ. ಇದಲ್ಲದೆ ರಸ್ತೆಯ ಸಂಚಾರ ಗಣತಿಯಿಂದ ವಾಹನ ಅಪಘಾತಗಳನ್ನು ತಡೆಯಲು ಮುಂಜಾಗ್ರತೆ ಕ್ರಮ ತೆಗೆದುಕೂಳ್ಳಲು ಇದು ನೆರವಾಗಲಿದೆ ಎಂದು ಶರಣಪ್ಪಾ ಸುಲಗಂಟೆ ತಿಳಿಸಿದ್ದಾರೆ.

## ಸ್ವಾಮಿ ವಿವೇಕಾನಂದರ ಆದರ್ಶ ಯುವ ಪೀಳಿಗೆಗೆ ಮಾದರಿ



• ಮಲ್ಲಮ್ಮ ನುಡಿ ವಾರ್ತೆ ಕಲಘಟಗಿ:

ತಾಲ್ಲೂಕಿನ ಮುಕ್ಕಲ ಗ್ರಾಮದ ಶ್ರೀ ಅಂಬೇಡ್ಕರ ಪ್ರೌಢಶಾಲೆಯಲ್ಲಿ ಇತ್ತಿಚೆಗೆ ರಾಷ್ಟೀಯ ಯುವ ದಿನಾಚರಣೆ ಹಾಗೂ ಸ್ವಾಮಿ ವಿವೇಕಾನಂದರ 164ನೇ ಜನ್ಮದಿನಾಚರಣೆಯನ್ನು ವಿಶಿಷ್ಟವಾಗಿ ಆಚರಿಸಲಾಯಿತು. ಕಾರ್ಯಕ್ರಮವನ್ನು ಗ್ರಾಮದ ಶ್ರೀ ಜಟಿಂಗೇಶ್ವರ ದೇವಸ್ಥಾನ ಟ್ರಸ್ಟ್ ಕಮಿಟಿಯವರು ಆಯೋಜಿಸಿದ್ದರು. ಶಾಲಾ ಮಕ್ಕಳಿಗಾಗಿ ಶ್ರೀ ಸ್ವಾಮಿ ವಿವೇಕಾನಂದರ ಕುರಿತು ಪ್ರಬಂಧ ಹಾಗೂ ಭಾಷಣ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸ್ಥಾಯಿ ಸಮಿತಿಯ ಅಧ್ಯಕ್ಷ ಲಿಂಗರಡ್ಡಿ ನಡವಿನಮನಿ ಮಾತನಾಡಿ ಸ್ವಾಮಿ ವಿವೇಕಾನಂದರು ಗುರುವಿನ ಹುಡುಕಾಟದಲ್ಲಿ ದೇವರನ್ನು ಕಂಡವರು. ದೇವಸ್ಥಾನ ಟ್ರಸ್ಟ್ ಕಮಿಟಿಯ ಕಾರ್ಯದರ್ಶಿಯಾದ ಸುಬ್ಬಣ್ಣ ಎಚ್. ಸುಬ್ಬಣ್ಣವರ ಅವರು ಕಾರ್ಯಕ್ರಮದ ಉದ್ದೇಶ ಹಾಗೂ ನಿಯೋಜನೆ ಕುರಿತು ಮಾತನಾಡಿದರು. ಶಾಲೆಯ ಮುಖ್ಯೋಪಾಧ್ಯಾಯ ಆರ್.ಹೆಚ್. ಕುಂದರಗಿ , ತಾಲ್ಲೂಕಾ ಮಕ್ಕಳ ಸಾಹಿತ್ಯ ಪರಿಷತ್ ಅಧ್ಯಕ್ಷ ಸೋಮಲಿಂಗ ಒಡೆಯರ ,ಪ್ರಕಾಶ ಕುಂಬಾರ ನಿರೂಪಿಸಿದರು. ಪ್ರಭುಲಿಂಗ ರಂಗಾಪುರ ,ಗ್ರಾಮದ ಹಿರಿಯರು, ಪಾಲಕರು, ಯುವಕರು, ಶಿಕ್ಷಕ, ಶಿಕ್ಷಕಿಯರು ಹಾಗೂ ವಿದ್ಯಾರ್ಥಿಗಳು ಇದ್ದರು. ವಿದ್ಯಾರ್ಥಿಗಳು ಉತ್ಸಾಹದಿಂದ ಪ್ರಬಂಧ ಹಾಗೂ ಭಾಷಣ ಸ್ಪರ್ಧೆಗಳಲ್ಲಿ ಭಾಗವಹಿಸಿದರು. ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಪ್ರಬಂಧ ಸ್ಪರ್ಧೆ ವಿಜೇತರು: ಯಲ್ಲಮ್ಮ ಅವ್ವಣ್ಣವರ್, ಶ್ಯೆಲಾ ಗ್ಯಾಣಪ್ಪನವರ, ಪ್ರತೀಕ್ಷಾ ಗೊವಪ್ಪನವರ ಭಾಷಣ ಸ್ಪರ್ಧೆ ವಿಜೇತರು: ಅಶ್ವಿನಿ ಹೊರಕೇರಿ, ಈಶ್ವರಿ ಬಡಿಗೇರ, ಸೌಜನ್ಯ ಕಮಡೋಲಿ ಬಹುಮಾನ ಪಡೆದರು.

## ಸಾರ್ವಜನಿಕ ಸಕಲ ಮರಾಠಾ ಸಮತಿಯಿಂದ, ಶಿವಜಯಂತಿ ಅದ್ಧೂರಿ ಆಚರಣೆ ನಿರ್ಧಾರ



• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:

ಫೆ.19 ರಂದು ಸಾರ್ವಜನಿಕ ಸಕಲ ಮರಾಠಾ ಸಮಿತಿಯ ವತಿಯಿಂದ ನಡೆಯಲಿರುವ ಶಿವಾಜಿ ಜಯಂತಿಯನ್ನು ಎಲ್ಲಾ ಸಮಾಜದ ಜನರನ್ನು ಆವ್ಹಾನಿಸಿ ಅದ್ಧೂರಿಯಿಂದ ಆಚರಿಸಲಾಗುವುದು ಎಂದು ಸಮಿತಿಯ ಮುಖಂಡ ಅನೀಲಕುಮಾರ.ಬಿ.ಸಿಂಧೆ ಹೇಳಿದರು.

ಪಟ್ಟಣದ ಭಾಲ್ಕೇಶ್ವರ ಮಂದಿರದಲ್ಲಿ ಗುರುವಾರ ಸಾರ್ವಜನಿಕ ಸಕಲ ಮರಾಠಾ ಸಮಿತಿಯ ವತಿಯಿಂದ ಆಯೋಜಿಸಿದ್ದ ಶಿವಜಯಂತಿ ಪೂರ್ವಭಾವಿ ಸಭೆಯಲ್ಲಿ ಪತ್ರಕರ್ತರನ್ನುದ್ದೇಶಿಸಿ ಅವರು ಮಾತನಾಡಿದರು. ಪ್ರಸ್ತುತ ಸಾಲಿನಲ್ಲಿ ಕಳೆದ ಸಾಲಿನ ಜಯಂತಿ ಮಹೋತ್ಸವ ಆಚರಣೆಯ ಕಹಿ ಘಟನೆಗಳನ್ನು ಮರೆತು, ಎಲ್ಲರೂ ಒಟ್ಟಿಗೆ ಸೇರಿ ಸಾರ್ವಜನಿಕ ಶಿವಾಜಿ ಜಯಂತಿ ಆಚರಿಸಲಾಗುವುದು. ಶಿವಾಜಿ ಜಯಂತಿಯಲ್ಲಿ ಎಲ್ಲಾ ಹಿಂದೂ ಸಮಾಜದ ಜನಾಂಗದವರನ್ನು ಆವ್ಹಾನಿಸಿ, ಶಿವಾಜಿ ಜಯಂತಿಯನ್ನು ಅತಿ ವಿಜ್ರಂಭಣೆಯಿಂದ ಆಚರಿಸಲಾಗುವುದು ಎಂದು ಹೇಳಿದರು. ಸಕಲ ಮರಾಠಾ ಸಮಾಜ ಶಿವಜಯಂತಿ ಆಚರಣಾ ಸಮಿತಿಯ ಅಧ್ಯಕ್ಷ ಡಾ।ಗುಂಡೇರಾವ ಶೇಡೋಳೆ ಮಾತನಾಡಿ, ಪ್ರಸ್ತುತ ಸಾಲಿನಲ್ಲಿ ಆಚರಿಸಲಾಗುವ ಶಿವಾಜಿ ಜಯಂತಿಯಲ್ಲಿ ಎಲ್ಲಾ ಧರ್ಮಗುರುಗಳಿಗೆ ಆವ್ಹಾನಿಸಿ, ಪಕ್ಷಾತೀತವಾಗಿ ಎಲ್ಲಾ ರಾಜಕೀಯ ವ್ಯಕ್ತಿಗಳನ್ನೂ ವೇದಿಕೆಗೆ ಆಮಂತ್ರಣ ನೀಡಲಾಗುವುದು ಎಂದು ಹೇಳಿದರು. ಮರಾಠಾ ಸಮಾಜದ ಹಿರಿಯ ಮುಖಂಡ ನಾಮದೇವರಾವ ಪವಾರ ಮಾತನಾಡಿ, ಶಿವಾಜಿ ಎಂದರೆ ಬರೀ ಮರಾಠಾ ಸಮಾಜವಲ್ಲ, ಹಿಂದೂ ಸಮಾಜದ ಎಲ್ಲಾ ಬಹುಜನರನ್ನು ಸೇರಿಸಿಕೊಂಡು ಪ್ರಸ್ತುತ ಸಾಲಿನ ಶಿವಾಜಿ ಜಯಂತಿ ಆಚರಿಸುಲಾಗುವುದು ಎಂದರು. ಮರಾಠಾ ಮುಖಂಡ ಕಿಶನರಾವ ಪಾಟೀಲ ಇಂಚೂರಕರ ಮಾತನಾಡಿ, ಇದುವರೆಗೆ ಮೂರು ಸಭೆಗಳನ್ನು ನಡೆಸಲಾಗಿದ್ದು, ಮರಾಠಾ ಸಮಾಜದ ಎಲ್ಲಾ ಮುಖಂಡರನ್ನು ಗಣನೆಗೆ ತೆಗೆದುಕೊಂಡು ಜಯಂತಿ ಆಚರಿಸುವ ನಿಟ್ಟಿನಲ್ಲಿ ಯುವ ಮುಖಂಡ ಡಾ। ಗುಂಡೇರಾವ ಶೇಡೋಳೆ ಯವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ ಎಂದು ಹೇಳಿದರು. ಮುಖಂಡರಾದ ದಿಗಂಬರಾವ ಮಾನಕಾರಿ, ನ್ಯಾಯವಾದಿ ರಾಹುಲ ಸಾವಳೆ, ರಾಜಕುಮಾರ ಭೋಸಲೆ, ಡಾ। ಉದ್ಧವ ಕನಸೆ, ಪುರಸಭೆ ಸದಸ್ಯ ಪಾಂಡುರಂಗ ಕನಸೆ, ಡಿ.ಜಿ.ಜಗತಾಪ ಮಾತನಾಡಿದರು.

ಈ ಸಂದರ್ಭದಲ್ಲಿ ದಯಾನಂದರಾವ ಸೂರ್ಯವಂಶಿ, ಯಶವಂತ ಭೋಸಲೆ, ಪಂಚಾಕ್ಷರಿ ಪಾಟೀಲ, ಶಾಹುರಾಜ ಪವಾರ, ಪ್ರತಾಪ ಪಾಟೀಲ, ದಿಗಂಬರರಾವ ಜಗತಾಪ, ವೆಂಕಟ ತಗರಖೆಡೆ, ದತ್ತಾ ಸಾವರೆ, ಕೃಷ್ಣಾ ಪಾಟೀಲ, ಆರ್.ಕೆ.ವಿಜಯಕುಮಾರ, ವೆಂಕಟ ಬಿರಾದಾರ, ವೆಂಕಟೇಶ ಶಿಂಧೆ, ಜ್ಞಾನೇಶ್ವರ ಬಿರಾದಾರ, ಅಮರ ಶೇಡೋಳೆ, ಆಶೀಸ ತಗರ-ಖೆಡೆ, ಹಣಮಂತರಾವ ಪವಾರ ಮತ್ತಿತರರು ಇದ್ದರು.

## ಏಪ್ರಿಲ್ 10 ರಂದು ಪ್ರವೇಶ ಪಡೆಯಲು ಕೊನೆಯ ದಿನ

• ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ:

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ 2021-22, 2022-23, 2023-24 ಮತ್ತು 2024-25ನೇ ಸಾಲಿನ ಜನವರಿ ಆವೃತ್ತಿಯ ದ್ವಿತೀಯ ಮತ್ತು ತೃತೀಯ ವರ್ಷದ ಈ ಕೆಳಕಂಡ ವಿವಿಧ ಕೋರ್ಸ್‌ಗಳಿಗೆ ದಂಡ ಶುಲ್ಕವಿಲ್ಲದೇ ಪ್ರವೇಶ ಪಡೆಯಲು 2026ರ ಏಪ್ರಿಲ್ 10 ರಂದು ಕೊನೆಯ ದಿನವಾಗಿದೆ ಎಂದು ಕಲಬುರಗಿ ಪ್ರಾದೇಶಿಕ ಕೇಂದ್ರದ ನಿರ್ದೇಶಕರು ತಿಳಿಸಿದ್ದಾರೆ.

ಜನವರಿ ಆವೃತ್ತಿಯ ದ್ವಿತೀಯ ಮತ್ತು ತೃತೀಯ ಬಿ.ಎ./ಬಿ.ಕಾಂ., ಬಿ.ಎಸ್ಸಿ, ಬಿ.ಬಿ.ಎ., ಬಿ.ಸಿ.ಎ. ಹಾಗೂ ದ್ವಿತೀಯ ಎಂ.ಎ.: (ಕನ್ನಡ, ಇಂಗ್ಲೀಷ, ಹಿಂದಿ, ಉರ್ದು, ಇತಿಹಾಸ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಸಾರ್ವಜನಿಕ ಆಡಳಿತ, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ). ಎಂ.ಕಾಂ., ಎಂ.ಬಿ.ಎ., ಎಂ.ಎಸ್.ಸಿ., ಎಂ.ಎಸ್.ಡಬ್ಲ್ಯೂ, ಬಿ.ಎಸ್.ಡಬ್ಲ್ಯೂ., ಎಂ.ಸಿ.ಎ. ಕೋರ್ಸ್‌ಗಳ ವಿಷಯಗಳಿಗೆ ಪ್ರವೇಶ ಪಡೆಯಲು ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಪ್ರಾದೇಶಿಕ ಕೇಂದ್ರದ ನಿರ್ದೇಶಕರಾದ ಹಣಮಂತ ಆರ್. ಕಾಳನೂರ ಇವರ ಮೊಬೈಲ್ ಸಂಖ್ಯೆ 9880061361 ಹಾಗೂ ವಿಶ್ವವಿದ್ಯಾಲಯದ ತಿತಿತಿ.ಇಂಣಟಥಿಣಡಿಣ.ಚಿಛಿ.ಟಿ ವೆಬ್‌ಸೈಟ್‌ನ್ನು ಸಂಪರ್ಕಿಸಲು ಕೋರಲಾಗಿದೆ.

## ಫೆಬ್ರವರಿ ೯ರಂದು ಗುಂಡುಗುರ್ತಿ ಗ್ರಾಮದ ತಾಂಡಾದ ಮನೆ ನಂ.71ರ ಹರಾಜು ಪ್ರಕ್ರಿಯೆ

ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ: Crl Misc No:1294/2025, ಅಡಿ ಓಔ:36/2024 (ರೈಲ್ವೆ PS V/ಪುರು) ಡಿಜರ ಮಾನ್ಯ ನ್ಯಾಯಾಲಯದ ಆದೇಶದಂತೆ ಬಾಂಡ್ ಮೊತ್ತ ಭರಿಸದೆ ಇರುವ ಹಿನ್ನೆಲೆಯಲ್ಲಿ ಚಿತ್ತಾಪುರ ತಾಲ್ಲೂಕಿನ ಗುಂಡುಗುರ್ತಿ ಗ್ರಾಮದ ತಾಂಡಾದ ಮನೆ ನಂ.71ರ ಹರಾಜು ಪ್ರಕ್ರಿಯೆಯು 2026ರ ಫೆಬ್ರವರಿ 9 ರಂದು ಬೆಳಿಗ್ಗೆ 11 ಗಂಟೆಗೆ ನಡೆಸಲಾಗುತ್ತಿದೆ. ಆಸಕ್ತಿಯುಳ್ಳವರು ಈ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದೆ ಎಂದು ಚಿತ್ತಾಪುರ ತಹಶೀಲ್ದಾರರು ತಿಳಿಸಿದ್ದಾರೆ.

ಮಾನ್ಯ ನ್ಯಾಯಾಲಯದ ಆದೇಶದಂತೆ ಬಾಂಡ್ ಮೊತ್ತ ಭರಿಸುವಂತೆ ನೋಟಿಸ್-37 ಮತ್ತು ನೋಟಿಸ್-38 ನ್ನು ನೀಡಲಾಗಿದ್ದು, ಆದರು ಸಹ ಪಟ್ಟೆದಾರರು ಹಣ ಸಂದಾಯ ಮಾಡಿರುವುದಿಲ್ಲ. ಅದೇ ರೀತಿ ವಿಚಾರಣೆ ದಿನದಂದು ಪಟ್ಟೆದಾರರು ಹಾಜರಾದರೂ ಸಹ ಹಣ ಸಂದಾಯ ಮಾಡದೆ ಇರುವುದರಿಂದ ಮಾನ್ಯ ನ್ಯಾಯಾಲಯವು ನಿಯಮನುಸಾರ ಕ್ರಮ ಜರುಗಿಸಿ ಹಣ ಸಂದಾಯ ಮಾಡಿ ವರದಿ ಸಲ್ಲಿಸುವಂತೆ ಸೂಚಿಸಿದೆ. ಇದರ ಹಿನ್ನೆಲೆಯಲ್ಲಿ ಮೇಲ್ಕಂಡ ದಿನದಂದು ಚಿತ್ತಾಪುರ ತಾಲ್ಲೂಕಿನ ಗುಂಡುಗುರ್ತಿ ಗ್ರಾಮದ ತಾಂಡಾದ ಮನೆ ನಂ.71ರ ಹರಾಜು ಪ್ರಕ್ರಿಯೆ ನಡೆಸಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ.

## ಜೇವರ್ಗಿ ಅಂಗನವಾಡಿ ಸಹಾಯಕಿ ಹುದ್ದೆಯ ಆಕ್ಷೇಪಣೆ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ:

-2024-25 ನೇ ಸಾಲಿನಲ್ಲಿ ಜೇವರ್ಗಿ ಶಿಶು ಅಭಿವೃದ್ಧಿ ಯೋಜನೆಯಲ್ಲಿ ಖಾಲಿಯಿರುವ ಹರನೂರ-03 ನೇ ಅಂಗನವಾಡಿ ಕೇಂದ್ರದ ಸಹಾಯಕಿಯರ ಹುದ್ದೆಗೆ ಕು. ಬಸಮ್ಮ ಸಕ್ರೆಣ್ಣ ಇವರು ತಾತ್ಕಾಲಿಕವಾಗಿ ಆಯ್ಕೆಯಾಗಿದ್ದು, ಇವರ ತಾತ್ಕಾಲಿಕ ಆಯ್ಕೆಗೆ ಸಂಬಂಧಿಸಿದಂತೆ ಆಕ್ಷೇಪಣೆ ಇದ್ದಲ್ಲಿ 2026ರ ಫೆಬ್ರವರಿ 17ರ ಸಂಜೆ 5.30 ಗಂಟೆಯೊಳಗಾಗಿ ಸೂಕ್ತ ದಾಖಲಾತಿಗಳೊಂದಿಗೆ ಜೇವರ್ಗಿ ಶಿಶು ಅಭಿವೃದ್ಧಿ ಯೋಜನಾಕಾರಿಗಳ ಕಚೇರಿಯಲ್ಲಿ ಆಕ್ಷೇಪಣೆ ಸಲ್ಲಿಸಬೇಕೆಂದು ಜೇವರ್ಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ತಿಳಿಸಿದ್ದಾರೆ.

## ಅಂಗನವಾಡಿ ಕಾರ್ಯಕರ್ತೆ ಹುದ್ದೆಯ ತಾತ್ಕಾಲಿಕ ಪಟ್ಟಿ ಪ್ರಕಟ: ಆಕ್ಷೇಪಣೆ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ:

ಅಫಜಲಪುರ ಶಿಶು ಅಭಿವೃದ್ಧಿ ಯೋಜನೆಯಲ್ಲಿ ಖಾಲಿಯಿರುವ 2024-25ನೇ ಸಾಲಿನಲ್ಲಿ ಘೋಳನೂರ ಅಂಗನವಾಡಿ ಕಾರ್ಯಕರ್ತೆ ಹುದ್ದೆಯ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಅಫಜಲಪುರ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯಲ್ಲಿ ಪ್ರಕಟಿಸಲಾಗಿದೆ.

ಈ ತಾತ್ಕಾಲಿಕ ಆಯ್ಕೆಪಟ್ಟಿಗೆ ಆಕ್ಷೇಪಣೆಗಳು ಇದ್ದಲ್ಲಿ 2026ರ ಫೆಬ್ರವರಿ 11ರ ಸಂಜೆ 5.30 ಗಂಟೆಯೊಳಗಾಗಿ ಕಚೇರಿ ಸಮಯದಲ್ಲಿ ಅಫಜಲಪೂರ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಯಲ್ಲಿ ಆಕ್ಷೇಪಣೆ ಸಲ್ಲಿಸಬೇಕೆಂದು ಅಫಜಲಪೂರ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ತಿಳಿಸಿದ್ದಾರೆ.

## ಫೆಬ್ರವರಿ 7 ರಂದು ಜನಸ್ಪಂದನ ಕಾರ್ಯಕ್ರಮ

ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ:

ಕಲಬುರಗಿ ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ 36, 37, 38 ಮತ್ತು 39ಕ್ಕೆ ಸಂಬಂಧಿಸಿದಂತೆ ಕಲಬುರಗಿಯ ಕೀರ್ತಿ ನಗರ ಬಡಾವಣೆಯ ವಡ್ಡರಗಲ್ಲಿ ಹತ್ತಿರದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಇದೇ ಫೆಬ್ರವರಿ 7 ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಸಾರ್ವಜನಿಕ ಕುಂದುಕೊರತೆಗಳನ್ನು ಸ್ಥಳದಲ್ಲಿಯೇ ಪರಿಹರಿಸುವ ಕುರಿತು "ಜನಸ್ಪಂದನಾ" ಎಂಬ ವಿನೂತನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸಂಬಂಧಪಟ್ಟ ವಾರ್ಡ್‌ಗಳ ಸಾರ್ವಜನಿಕರು ಈ ಜನಸ್ಪಂದನ ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮ ಕುಂದುಕೊರತೆಯನ್ನು ಪರಿಹರಿಸಿಕೊಳ್ಳಬಹುದಾಗಿದೆ ಎಂದು ಕಲಬುರಗಿ ಮಹಾನಗರ ಪಾಲಿಕೆ ಆಯುಕ್ತರು ತಿಳಿಸಿದ್ದಾರೆ.

# ತಾಲೂಕ ಕಾರ್ಯನಿರತ ಪತ್ರಕರ್ತರ ಧ್ವನಿ ಪದಾಧಿಕಾರಿಗಳ ಪದಗ್ರಹಣ

## ಪತ್ರಕರ್ತರ ಕಲ್ಯಾಣಕ್ಕಾಗಿ ವಿಧಾನ ಸಭೆಯಲ್ಲಿ ಧ್ವನಿಯಾಗಿರುವೆ : ಕಂದಕೂರು

- **ಮಲ್ಲಮ್ಮ ನುಡಿ ವಾರ್ತೆ: ಗುರುಮಠಕಲ್**



ಗುರುಮಠಕಲ್ : ಪ್ರಜಾಪ್ರಭುತ್ವದ ನಾಲ್ಕನೇ ಆಧಾರ ಸ್ತಂಭವಾಗಿ, ಸಮಾಜದ ಪರಿವರ್ತನೆಯ ರೂವಾರಿಯಾಗಿ ಮಾಧ್ಯಮ ಪ್ರಮುಖ ಪಾತ್ರವಹಿಸುತ್ತಿದ್ದು, ಅವರ ಕಲ್ಯಾಣಕ್ಕಾಗಿ ವಿಧಾನಸಭೆಯಲ್ಲಿ ಧ್ವನಿ ಎತ್ತಿ ಅವರಿಗೆ ಧ್ವನಿಯಾಗಿರುವೆ ಎಂದು ಶಾಸಕ ಶರಣುಗೌಡ ಕಂದಕೂರ್ ಪತ್ರಕರ್ತರಿಗೆ ಭರವಸೆ ನೀಡಿದರು.

ಪಟ್ಟಣದ ಜೆಪಿ ಫಂಕ್ಷನ್ ಹಾಲ್ ನಲ್ಲಿ ಆಯೋಜಿಸಿದ ತಾಲೂಕ ಕಾರ್ಯನಿರತ ಪತ್ರಕರ್ತರ ಧ್ವನಿ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭಕ್ಕೆ ಚಾಲನೆ ನೀಡಿ ಅವರು ಮಾತನಾಡಿ, ಸಮಾಜದ ಕಣ್ಣು ಮತ್ತು ಕಿವಿಯಾಗಿರುವ ಪತ್ರಕರ್ತರ ಬದುಕು ದುಸ್ಥಿರವಾಗಿದೆ, ಸರಕಾರದ ಯೋಜನೆಗಳು ಜನರಿಗೆ ತಲುಪಿಸುವಲ್ಲಿ ಮತ್ತು ಎಡುವಿದಲ್ಲಿ ಎಚ್ಚರಿಕೆ ನೀಡುವ ಪತ್ರಕರ್ತರ ಜೀವನ ಹಸನ ಗೊಳ್ಳಲು ಈ ಸಲ ಶಾಸನ ಸಭೆಯಲ್ಲಿ ಧ್ವನಿ ಎತ್ತಿ ಪತ್ರಕರ್ತರ ಬೆಂಬಲವಾಗಿ ನಿಲ್ಲುವ ಪ್ರಯತ್ನ ಮಾಡುತ್ತೇನೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಲ್ಯಾಣ ಕರ್ನಾಟಕ ಪತ್ರಕರ್ತರ ಅಭಿವೃದ್ಧಿಗಾಗಿ ಕೆಕೆ ಆರ್ ಡಿಬಿ ಇಲಾಖೆ ವತಿಯಿಂದ ಜಾಹೀರಾತು ಎಲ್ಲ ಪತ್ರಿಕೆಗಳಿಗೆ ನೀಡಬೇಕು ಇದರ ಮೂಲಕ ಅವರ ಆರ್ಥಿಕ ನೆರವು ಆಗುತ್ತದೆ ಎಂದು ಈಗಾಗಲೇ ಸಂಬಂಧಿಸಿದ ಇಲಾಖೆಗೆ ಪತ್ರ ಬರೆದಿದ್ದೇನೆ ಎಂದರು.

ಸಮಾಜದ ಕಟ್ಟಕಡೆಯ ವ್ಯಕ್ತಿಯ ಸಮಸ್ಯೆಗಳನ್ನು ಸರಕಾರದ ಗಮನಕ್ಕೆ ತರುವಲ್ಲಿ ಪತ್ರಕರ್ತರ ಪಾತ್ರ ಬಹುಮುಖ್ಯ, ಸತ್ಯನಿಷ್ಠ ಮತ್ತು ಸಮಾಜ ಮುಖಿ ಚಿಂತನೆಗಳೊಂದಿಗೆ ಹೊಸತನ ಮತ್ತು ಕ್ರಿಯಾಶೀಲತೆದೊಂದಿಗೆ ನೂತನ ಪಧಧಿಕಾರಿಗಳ ತಂಡವು ವಸ್ತು ನಿಷ್ಠವಾಗಿ ಕಾರ್ಯ ನಿರ್ವಹಿಸಲು ನನ್ನ ಸಹಕಾರ ಮತ್ತು ಈ ಧ್ವನಿಗೆ ಸದಾ ಬೆನ್ನೆಲುಬು ಆಗಿರುತ್ತೇನೆ ಎಂದು ಶುಭಕೋರಿದರು.

ಧ್ವನಿಯ ಸ್ಥಾಪಕ ಹಾಗು ರಾಜ್ಯಾಧ್ಯಕ್ಷರಾಗಿರುವ ಬಂಗ್ಲೆ ಮಲ್ಲಿಕಾರ್ಜುನ ನೂತನ ಪಧಾಧಿಕಾರಿಗಳಿಗೆ ಪದಗ್ರಹಣ ಭೋದನೆ ಮಾಡಿ, ಸಮಾಜದ ಒಳಿತು ಗಾಗಿ ದುಡಿಯುವ ನಮ್ಮ ಪತ್ರಕರ್ತರ ಬಳಗವು ಬಡವರಾಗಿದ್ದು, ಸರಕಾರವು ಪತ್ರಕರ್ತರ ಕಲ್ಯಾಣಗಾಗಿ ಶಾಸಕ ಶರಣುಗೌಡ ಕಂದಕೂರ್ ಡಿಜೆ ಧ್ವನಿಯಂತೆ ಧ್ವನಿ ಎತ್ತಬೇಕು. ಸರಕಾರ ಎಲ್ಲ ಮಹಿಳೆಯರಿಗೆ ಹಾಗು ಮಂಗಳ ಮುಖಿಯರಿಗೆ ಉಚಿತ ಬಸ್ ವ್ಯವಸ್ಥೆ ಕಲ್ಪಿಸಿದೆ ಅದೇ ರೀತಿ ಪತ್ರಕರ್ತರಿಗೆ ಉಚಿತ ಬಸ್ ವ್ಯವಸ್ಥೆ ಕಲ್ಪಿಸಬೇಕಾಗಿದೆ ಎಂದರು. ಕೆಲವು ಮಾಲೀಕರ ಕುಟುಂಬವು ಮಾತ್ರ ಸರಕಾರದಿಂದ ಮನೆಗಳು ಮತ್ತು ಸರಕಾರದ ಸೌಲಭ್ಯಗಳು ಪಡೆದು ಕೊಳ್ಳುತ್ತಿವೆ, ಅದನ್ನು ತಪ್ಪಿಸಿ, ಎಲ್ಲ ಪತ್ರಕರ್ತರಿಗೆ ಸೌಲಭ್ಯ ಲಭ್ಯ ವಾಗಲು ಶ್ರಮಿಸುತ್ತೇನೆ ಎಂದು ತಿಳಿಸಿದರು. ಖಾಸಮಠ ದ ಪೂಜ್ಯ ಶ್ರೀ ಗುರು ಮುರುಘ ರಾಜೇಂದ್ರ ಮಹಾಸ್ವಾಮಿಗಳು ಸಾನಿಧ್ಯ ವಹಿಸಿ ಆಶೀರ್ವಾಚನ ನೀಡಿದರು. ಹಿರಿಯ ಪತ್ರ ಕರ್ತ ಬಸವ ರಾಜ ಬೂದಿ ಮತ್ತು ನಿವೃತ್ತ ವೈದ್ಯ ಅಧಿಕಾರಿ ಡಾ. ವಿ. ಸಿ. ಮೈತ್ರಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಇದೇ ಸಂದರ್ಭದಲ್ಲಿ ತಹಸೀಲ್ದಾರ್ ರಾದ ಚನ್ನಮಲ್ಲಪ್ಪ ಘಂಟಿ, ನರೇಗಾ ಎಡಿ ರಾಮಚಂದ್ರ ಬಸೂದೆ, ಪುರಸಭೆ ಮುಖ್ಯಾಧಿಕಾರಿ ಶರಣಪ್ಪ ಮಡಿವಾಳ, ಪಿ ಐ ವೀರಣ್ಣ ದೊಡ್ಡಮನಿ, ಜೆಡಿಎಸ್ ಜಿಲ್ಲಾಧ್ಯಕ್ಷ ಸುಭಾಷ್ ಕಟಕಟಿ, ಬ್ಲಾಕ್ ಜೆಡಿಎಸ್ ಅಧ್ಯಕ್ಷ ಪ್ರಕಾಶ್ ನಿರೇಟಿ, ಧ್ವನಿ ಸಂಘಟನೆ ಜಿಲ್ಲಾಧ್ಯಕ್ಷ ರಮೇಶ್ ಸೌಕಾರ, ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಮಾಜಿ ಅಧ್ಯಕ್ಷ ಇಂದೂ ಧರ ಸಿನ್ನೂರ್, ವೇದಿಕೆ ಯಲ್ಲಿ ಉಪಸ್ಥಿತರಿದ್ದರು. ಧ್ವನಿಯ ತಾಲೂಕ ಅಧ್ಯಕ್ಷ ರವಿ ಎಂ ಟಿ ಪಲ್ಲಿ ಕಾರ್ಯಕ್ರಮದ ಅಧ್ಯಕ್ಷ ತೆ ವಹಿಸಿದ್ದರು.

ಧ್ವನಿಯ ಪ್ರಧಾನ ಕಾರ್ಯದರ್ಶಿ ಜಗದೀಶ್ ಕುಮಾರ್ ಭೂಮಾ, ಉಪಾಧ್ಯಕ್ಷ ಸಾಯಿರೆಡ್ಡಿ ಮಲ್ಕಪಲ್ಲಿ, ಕಾರ್ಯದರ್ಶಿ ಫಹದ್, ಸದಸ್ಯರಾದ ಬಸಪ್ಪ ಸಂಜನೋಳ, ಮಲ್ಲಿಕಾರ್ಜುನ ರೆಡ್ಡಿ ಪಾಟೀಲ್ ಚಾಪೆಟ್ಲ, ಸಾಬಪ್ಪ ಚಾಪೆಟ್ಲ, ಜಾವಿದ್, ಅಹ್ಮದ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಇಂದು ಕೋಡಾಲಪುರ ಉತ್ಸವಕ್ಕೆ ದಿಂಗಾಲೇಶ್ವರ ಶ್ರೀಗಳ ಆಗಮನ.

- **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.**



ವಡಗೇರಾ ತಾಲೂಕಿನ ಕೋಡಾಲ ಗ್ರಾಮದಲ್ಲಿನ ಶ್ರೀ ಗಡ್ಡೆ ಬಸ್ವೇಶ್ವರ ದೇವಸ್ಥಾನದ ಶ್ರೀ ಸಿದ್ದಲಿಂಗೇಶ್ವರ ಪಶ್ಚಿಮಾದ್ರಿ ಮಠದ ಮಹಾ ತಪಸ್ವಿ ಶ್ರೀ ಸಿದ್ದಲಿಂಗ ಶಿವಯೋಗಿಗಳ ಜಾತ್ರಾ ಮಹೋತ್ಸವದ ನಿಮಿತ್ಯ ಫೆ.6.ರಂದು ಬೆಳಿಗ್ಗೆ 10:30ಕ್ಕೆ ಹಮ್ಮಿಕೊಂಡಿರುವ ವಚನ ಚಿಂತನೆ ಪ್ರವಚನ ಕಾರ್ಯಕ್ರಮ ಮತ್ತು ನೂತನ ಗುರುಭವನ ಉದ್ಘಾಟನೆ ಕಾರ್ಯಕ್ರಮಕ್ಕೆ ಶಿರಹಟ್ಟಿ ಬಾಳೆಹೊಸೂರು ಭಾವೈಕ್ಯತೆಯ ಫಕೀರೇಶ್ವರ ಸಂಸ್ಥಾನ ಮಠದ ಪರಮಪೂಜ್ಯ ಶ್ರೀಮನ್ ಮಹಾರಾಜ ನಿರಂಜನ್ ಜಗದ್ಗುರು ಫಕೀರ್ ದಿಂಗಾಲೇಶ್ವರ ಮಹಾಸ್ವಾಮಿಗಳು ಆಗಮಿಸಲಿದ್ದಾರೆ ಎಂದು ಜಾತ್ರಾ ಮಹೋತ್ಸವ ಸಮಿತಿ ತಿಳಿಸಿದೆ .ಫೆ.6.ರಿಂದ 13.ರವರೆಗೆ ವಚನ ಚಿಂತನಾ ಪ್ರವಚನ ಹಾಗೂ ಗುರುಭವನ ಉದ್ಘಾಟನೆ ಕಾರ್ಯಕ್ರಮವು ಕೂಡಾಲಪುರದ ಪಶ್ಚಿಮಾದ್ರಿ ಸಂಸ್ಥಾನ ಮಠದ ಪರಮಪೂಜ್ಯ ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳು ಕೋಡಾಲ ನೆರಡಗಂ ಇವರ ಅಧ್ಯಕ್ಷತೆಯಲ್ಲಿ ಜರುಗಲಿದ್ದು ಸುತ್ತಮುತ್ತಲ ಗ್ರಾಮದ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಕೋಡಾಲ ಜಾತ್ರಾ ಮಹೋತ್ಸವ ಸಮಿತಿಯವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅನಧಿಕೃತ, ಅಧಿಕಭಾರದ ಮರಳು ಸಾಗಾಣಿಕೆ ಮಾಡಿರುವ ಟಿಪ್ಪರ್‌ಗಳ ವಿರುದ್ಧ ಕ್ರಮ.



**ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.**

ಯಾದಗಿರಿ ಜಿಲ್ಲೆಯ ಸುರಪುರ, ಶಹಾಪೂರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಅನಧಿಕೃತ, ಅಧಿಕಭಾರದ ಮರಳು ಸಾಗಾಣಿಕೆ ಮಾಡಿರುವ ಟಿಪ್ಪರ್ ವಾಹನಗಳ ವಿರುದ್ಧ ಕ್ರಮ ಕೈಗೊಂಡಿದೆ ಎಂದು ಯಾದಗಿರಿ ಗಣಿ ಮತ್ತು ಭೂವಿಜ್ಞಾನ ಇಲಾಖೆ ಹಿರಿಯ ಭೂವಿಜ್ಞಾನಿ ಅವರು ತಿಳಿಸಿದ್ದಾರೆ. ಯಾದಗಿರಿ ಜಿಲ್ಲಾ ಮರಳು ನಿಯಂತ್ರಣಾ ಸಮಿತಿ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿ ಹರ್ಷಲ್ ಭೋಯರ್ ಅವರ ಸೂಚನೆಯಂತೆ 2026ರ ಫೆಬ್ರವರಿ 3 ರಂದು ಯಾದಗಿರಿ ಜಿಲ್ಲೆಯ ಸುರಪುರ, ಶಹಾಪುರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಅನಧಿಕೃತ, ಅಧಿಕಭಾರದ ಮರಳು ಸಾಗಾಣಿಕೆ ವಾಹನಗಳು ಸಾಗಾಣಿಕೆ ಯಾಗುತ್ತಿರುವ ಕುರಿತು ದೂರಿನ ಮೇರೆಗೆ ಕಂದಾಯ ಇಲಾಖೆ, ಗಣಿ ಮತ್ತು ಭೂವಿಜ್ಞಾನ ಇಲಾಖೆ,ಸಾರಿಗೆ ಇಲಾಖೆ ಹಾಗೂ ಪೊಲೀಸ್ ಇಲಾಖೆ ಏಕ ಕಾಲದಲ್ಲಿ ಜಂಟಿಯಾಗಿ ಜಿಲ್ಲೆಯ ಸುರಪುರ ಮತ್ತು ಶಹಾಪುರ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಅನಧಿಕೃತ, ಅಧಿಕಭಾರದ ಮರಳು ಸಾಗಾಣಿಕೆ ವಾಹನಗಳನ್ನು ಪರಿಶೀಲಿಸಲು ರಾತ್ರಿ ಗಸ್ತು ಕಾರ್ಯ ಕೈಗೊಂಡು 7 ಮರಳು ತುಂಬಿದ ವಾಹನಗಳನ್ನು ವಶಕ್ಕೆ ಪಡೆದು ನಿಯಮಾನುಸಾರ ಸರ್ಕಾರಕ್ಕೆ ದಂಡದ ಮೊತ್ತ 2,78,680ರೂ.ಗಳ ಪಾವತಿಸಿಕೊಳ್ಳಲಾಗಿರುತ್ತದೆ. ಈ ಕೃತ್ಯದಲ್ಲಿ ಭಾಗಿಯಾಗಿರುವ ವಾಹನಗಳ ವಾಹನಗಳ ಸಾರಿಗೆ ಇಲಾಖೆಯ ನೊಂದಣಿಯನ್ನು ರದ್ದು ಪಡಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ. ಜಿಲ್ಲೆಯಲ್ಲಿ ಅನಧಿಕೃತ, ಅಧಿಕಭಾರದ ಮರಳು, ಇತರೆ ಉಪಖನಿಜಗಳ ಸಾಗಾಣಿಕೆಯನ್ನು ತಡೆಗಟ್ಟಿ ಕ್ರಮ ಕೈಗೊಳ್ಳಲು ಜಿಲ್ಲಾ, ತಾಲ್ಲೂಕು ಮಟ್ಟದ ಮರಳು ಸಮಿತಿ ಸದಸ್ಯರನ್ನೊಳಗೊಂಡ ತಂಡಗಳನ್ನು ರಚಿಸಿದ್ದು, ಇನ್ನೂಮುಂದೆ ಜಿಲ್ಲೆಯಲ್ಲಿ ಅನಧಿಕೃತ, ಅಧಿಕಭಾರದ ಮರಳು, ಇತರೆ ಉಪಖನಿಜಗಳ ಸಾಗಾಣಿಕೆಯಾಗುತ್ತಿರುವ ವಾಹನಗಳನ್ನು ಪರಿಶೀಲಿಸಿ ಕಟ್ಟು ನಿಟ್ಟಿನ ಕ್ರಮ ಕೈಗೊಳ್ಳಲು ಜಿಲ್ಲಾಡಳಿತದಿಂದ ಸೂಚಿಸಲಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಾಲ್ಯ ವಿವಾಹ ಮುಕ್ತ ಸಂಚಾರಿ ವಾಹನಕ್ಕೆ ಚಾಲನೆ.

- **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.**

ಯಾದಗಿರಿ ಜಿಲ್ಲೆಯ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿಂದು ಬಾಲ್ಯ ವಿವಾಹ ಮುಕ್ತ ಭಾರತಕ್ಕಾಗಿ ಬಾಲ್ಯ ವಿವಾಹ ನಿಷೇಧ ಕುರಿತು ಅರಿವು ಮೂಡಿಸಲು *ಬಾಲ್ಯ ವಿವಾಹ ಮುಕ್ತ ಸಂಚಾರ ವಾಹನಕ್ಕೆ* ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಗೌರವಾನ್ವಿತ ಶ್ರೀ ಮರುಳಸಿದ್ಧಾರಾಧ್ಯ ಎಚ್. ಜೆ. ರವರು ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಯಾದಗಿರಿಯ ಪ್ರಥಮ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀ ಗೌರವಾನ್ವಿತ ಶ್ರೀ ಎ ಈರಣ್ಣ ಮತ್ತು ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ ಹಾಗೂ ಸಿವಿಲ್ ಮತ್ತು ಜೆಎಂ ಎಫ್ ಸಿ ನ್ಯಾಯಾಧೀಶರಾದ ಗೌರವಾನ್ವಿತ ಶ್ರೀ ಅರುಣ್ ಚೌಗುಲೆ ಮತ್ತು ಹೆಚ್ಚುವರಿ ಸಿವಿಲ್ ಮತ್ತು ಕೆಎಂಎಫ್ ಸಿ ನ್ಯಾಯಾಧೀಶರಾದ ಗೌರವಾನ್ವಿತ ಶ್ರೀ ರಾಹುಲ್ ರಾವ್ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಗೌರವಾನ್ವಿತ ಶ್ರೀ ಮರಿಯಪ್ಪ, ವಕೀಲರ ಸಂಘದ ಅಧ್ಯಕ್ಷರಾದ. ಶ್ರೀ ಆರ್ ಎಸ್ ಪಾಟೀಲ್ , ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು. ಮಾರ್ಗದರ್ಶಿ ಸಂಸ್ಥೆಯ ನಿರ್ದೇಶಕರಾದ ಆನಂದ್ ರಾವ್, ಹಾಗೂ ಮಕ್ಕಳ ರಕ್ಷಣಾ ಇಲಾಖೆ.ಜಿಲ್ಲಾ ಬಾಲ ಕಾರ್ಮಿಕ ಇಲಾಖೆ , ವಕೀಲರ ಸಂಘದ ಪದಾಧಿಕಾರಿಗಳು & ನ್ಯಾಯಾಂಗ ಇಲಾಖೆ ಸಿಬ್ಬಂದಿಗಳು, ಮತ್ತು ಸಾರ್ವಜನಿಕರು ಪಾಲ್ಗೊಂಡಿದ್ದರು.

# ಕೃಷ್ಣಾ ನದಿಯಲ್ಲಿ ಮೊಸಳೆಗಳ ಹಾವಳಿ ನಾಮಫಲಕ ಅಳವಡಿಸಲು ಒತ್ತಾಯ.





**ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.**

ವಡಗೇರಾ ತಾಲೂಕಿನ ಕೊಂಕಲ್ ಗ್ರಾಮ ಸೇರಿದಂತೆ ತುಮಕೂರ ,ಅಬಿಶಾಳ,ಕದರಾಪುರ,ಬೆಂಡೆಬೆಂಬಳಿ ಗೋನಾಲ ಗುಂಡ್ಲೂರ ಗ್ರಾಮಗಳ ಕೃಷ್ಣಾನದಿಯಲ್ಲಿ ಮೊಸಳೆಗಳ ಹಾವಳಿ ಹೆಚ್ಚಾಗಿದ್ದು ಅರಣ್ಯ ಇಲಾಖೆಯ ಅಧಿಕಾರಿಗಳು ಜನರಲ್ಲಿ ಜಾಗೃತಿ ಮೂಡಿಸಿ ಸೂಚನಾ ಫಲಕಗಳನ್ನು ಅಳವಡಿಸುವಂತೆ ರಾಜ್ಯ ರೈತ ಸಂಘ ಹಸಿರು ಸೇನೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಂಜುನಾಥ್ ರೆಡ್ಡಿ ಚೆನ್ನೂರು ಒತ್ತಾಯಿಸಿದ್ದಾರೆ.ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು ಬೇಸಿಗೆ ಆರಂಭಗೊಳ್ಳುತ್ತಿದ್ದು ನೀರಿನ ಪ್ರಮಾಣ ಕಡಿಮೆಯಾಗಿರುವ ಹಿನ್ನೆಲೆಯಲ್ಲಿ ಆಹಾರವನ್ನು ಅರಿಸಿ ಮೊಸಳೆಗಳು ನದಿಯ ದಡದ ಮೇಲೆ ಪ್ರತ್ಯಕ್ಷವಾಗುತ್ತಿವೆ ಇದರಿಂದ ಜನಜಾನುವಾರುಗಳು ಭಯಬಿತರಾಗಿದ್ದಾರೆ ಈ ಹಿಂದೆ ತುಮಕೂರು ಗ್ರಾಮದ ಮರೇಪ್ಪ ಮತ್ತು ಕೊಂಕಲ ಗ್ರಾಮದ ಮರಿಲಿಂಗ ಎಂಬುವರು ಮೊಸಳೆ ದಾಳಿಗೆ ಬಲಿಯಾಗಿದ್ದಾರೆ ಅದೆಷ್ಟು ಆಕಳು ಎತ್ತು ಕುರಿಗಳು ಕೂಡಾ ಬಲಿಯಾಗಿವೆ ಆದರೆ ಅರಣ್ಯ ಇಲಾಖೆ ಮಾತ್ರ ಸಂಪೂರ್ಣವಾಗಿ ನಿರ್ಲಕ್ಷ ವಹಿಸುತ್ತಿದೆ ಸಂಗಮ ಮತ್ತು ಗೂಗಲ್ ಬ್ರಿಜ್ ಕಂ ಬ್ಯಾರೇಜ್ ನಲ್ಲಿ ಹಿನ್ನಿರು ನಿಲ್ಲುವದರಿಂದ ಮೊಸಳೆಗಳು ಹೆಚ್ಚಾಗಿವೆ ಸಾರ್ವಜನಿಕರು ರೈತರು ಕುರಿ ಗಾರರು ನದಿಯ ದಡಕ್ಕೆ ಹೋಗಲು ಭಯಪಡುವಂತ ಸ್ಥಿತಿ ನಿರ್ಮಾಣವಾಗಿದೆ ಆದ್ದರಿಂದ ಕೂಡಲೇ ಸಂಬಂಧಿಸಿದ ಅರಣ್ಯ ಇಲಾಖೆಯವರು ಅತಿ ಹೆಚ್ಚು ಮೊಸಳೆಗಳು ಇರುವ ಸ್ಥಳವನ್ನು ಗುರುತಿಸಿ ನಾಮಫಲಕಗಳನ್ನು ಅಳವಡಿಸಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು ಒಂದು ವೇಳೆ ನಿರ್ಲಕ್ಷ ವಹಿಸಿದ್ದಲ್ಲಿ ರಾಜ್ಯ ರೈತ ಸಂಘ ಹಸಿರು ಸೇನೆ ಜಿಲ್ಲಾ ಘಟಕದ ವತಿಯಿಂದ ಉಗ್ರಹೊರಾಟ ಮಾಡುವುದಾಗಿ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಂಜುನಾಥ್ ರೆಡ್ಡಿ ಚೆನ್ನೂರು ಎಚ್ಚರಿಸಿದ್ದಾರೆ

# ಅಕ್ರಮ ಮರಳು ಗಣಿಗಾರಿಕೆ, ಸಾಗಣೆ: ತಡೆಯಲು ಕರವೇ ಆಗ್ರಹ.

**ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.**



ವಡಗೇರಿ ತಾಲ್ಲೂಕಿನ ಗೋಡಿಹಾಳ ಹಾಗೂ ಕುಮನೂರು ಸೀಮಾಂತರದಲ್ಲಿ ಅಕ್ರಮ ಮರಳು ಸಾಗಣೆ ಎಗ್ಗಿಲ್ಲದೇ ನಡೆಯುತ್ತಿದ್ದು ತಕ್ಷಣ ಒಂದು ವಾರದಲ್ಲಿ ತಡೆಯಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಣ ಜಿಲ್ಲಾದ್ಯಕ್ಷ ಬೀರೇಶ ಚಿರತೆನೋರ್ ಆಗ್ರಹಿಸಿದ್ದಾರೆ.

ಈ ಕುರಿತು ಹೇಳಿಕೆ ನೀಡಿರುವ ಅವರು, ಎರಡು ಗ್ರಾಮಗಳ ಮದ್ಯೆ ಬರುವ ಸರ್ವೇ ನಂ: 39,41, 42, 48 ಗಳಲ್ಲಿ ಅಕ್ರಮ ಮರಳು ಗಣಿಗಾರಿಕೆ ಹಾಗೂ ಅಕ್ರಮ ಸಾಗಾಟ ನಿರಂತರ ಹಗಲು ರಾತ್ರಿ ನಡೆಯುತ್ತಿದ್ದು, ಸರ್ಕಾರದ ಬೊಕ್ಕಸಕ್ಕೆ ಅಪಾರ ನಷ್ಟವುಂಟಾಗುತ್ತಿದೆ.

ಅಕ್ರಮ ಮರಳು ಮಾಫಿಯಾದೊಂದಿಗೆ ಪೊಲೀಸರು ಸಹ ಶಾಮೀಲಾಗಿದ್ದು, ಸಂಬಂಧಿಸಿದ ಕಂದಾಯ, ಭೂ ವಿಜ್ಞಾನ ಇಲಾಖೆ ಅಧಿಕಾರಿಗಳು ಇದಕ್ಕೆ ಪರೋಕ್ಷ ಬೆಂಬಲ ನೀಡಿ ಸಹಕರಿಸುತ್ತಿರುವುದರಿಂದ ನಿರಂತರ ಅಕ್ರಮ ನಡೆಯುತ್ತಿದೆ ಎಂದು ಅವರು ಆರೋಪಿಸಿದ್ದಾರೆ.

ಅಕ್ರಮ ಮರಳು ಸಾಗಣೆಯಿಂದಾಗಿ ವಡಗೇರಿ ತಾಲ್ಲೂಕಿನ ಎಲ್ಲ ರಸ್ತೆಗಳು ಹಾಳಾಗಿದ್ದು, ಜನ ಸಂಚಾರ ನರಕಯಾತನೆಯಾಗಿದೆ ಎಂದು ಅವರು ದೂರಿದ್ದಾರೆ.

ಮೇಲೆ ತೋರಿಸಿದ ಸರ್ವೇ ನಂ. ಗಳ ಸುತ್ತಮುತ್ತಲ ರೈತರ ಜಮೀನಿನಲ್ಲಿ ಬೆಳೆದ ಬೆಳೆಗಳು ಸಹ ಧೂಳಿನಿಂದಾಗಿ ಹಾನಿಯಾಗುತ್ತಿದೆ.

ಅತಿಚಿಕ್ಕದಾದ ಗ್ರಾಮೀಣ ರಸ್ತೆಗಳು ಹಾಗೂ ಹೊಲದ ರಸ್ತೆಗಳು ಬದುವಿನ ಬಂಡಿದಾರಿಗಳು ಸಹಾ ಭಾರಿ ಗ್ರಾತ್ರದ ವಾಹನಗಳ ಸಂಚಾರದಿಂದಾಗಿ ಬೆಳೆ ನಷ್ಟವಾಗುತ್ತಿದೆ ಆದ್ದರಿಂದ ಜಿಲ್ಲಾಡಳಿತ ತಕ್ಷಣ ಇ ಅಕ್ರಮಕ್ಕೆ ಒಂದು ವಾರದಲ್ಲಿ ಕಡಿವಾಣ ಹಾಕಬೇಕು ಇಲ್ಲವಾದಲ್ಲಿ ಉಗ್ರ ಹೋರಾಟ ರೂಪಿಸಿ ಯಾದಗಿರಿ–ವಡಗೇರಿ ರಸ್ತೆ ಬಂದ್ ಮಾಡಲಾಗುವುದು ಎಂದು ಸಿಮೆಯೋನ್ ಅಬ್ಬೆತುಮಕೂರು, ಶಿವಕುಮಾರ ಬೆಂಕಿ, ಶರಣು ದುಗನೂರ, ವಿಜಯಕುಮಾರ ಗುಡೂರ, ಶಿವಕುಮಾರ ಪಾಟೀಲ್, ಕೃಷ್ಣಭಜಂತ್ರಿ, ಪರಮೇಶ ನಾಯಕ ಎಚ್ಚರಿಸಿದ್ದಾರೆ.

# ಈಶ್ವರ ಖಂಡ್ರೆ ಅಭಿವೃದ್ಧಿ ದೃಷ್ಟಿಹೀನ ರಾಜಕಾರಣಿ

**ಮಲ್ಲಮ್ಮ ನುಡಿ ವಾರ್ತೆ**



**ಬೀದರ್:** ಸಚಿವ ಈಶ್ವರ ಖಂಡ್ರೆ ಒಬ್ಬ ಅಭಿವೃದ್ಧಿ ದೃಷ್ಟಿಹೀನ ರಾಜಕಾರಣಿಯಾಗಿದ್ದಾರೆ. ಅವರಲ್ಲಿ ಅಭಿವೃದ್ಧಿ ಕುರಿತು ಯಾವುದೇ ದೂರದೃಷ್ಟಿತನ ಇಲ್ಲ. ಅವರು ನಾಲ್ಕು ಬಾರಿ ಗೆಲುವು ಸಾಧಿಸಿದರೂ ಆಗಬೇಕಾದಷ್ಟು ಯಾವುದೇ ಅಭಿವೃದ್ಧಿ ಕಾರ್ಯಗಳಾಗಿಲ್ಲ ಎಂದು ಮಾಜಿ ಕೇಂದ್ರ ಸಚಿವ ಭಗವಂತ ಖೂಬಾ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ್ ಖಂಡ್ರೆ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಗುರುವಾರ ಕರೆದ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು ಸೆಪ್ಟೆಂಬರ 21, 2022 ರಂದು ಪ್ರಸಾದ ಯೋಜನೆಯಡಿಯಲ್ಲಿ ಬೀದರ ನಗರದ ಸುಕ್ಷೇತ್ರ ಪಾಪನಾಶ ದೇವಸ್ಥಾನವನ್ನು ಗುರುತಿಸಿ ಅಭಿವೃದ್ಧಿ ಕಾರ್ಯಗಳಾಗಬೇಕೆಂದು ಗುರುತಿಸಲು ಕೇಂದ್ರಕ್ಕೆ ಪತ್ರ ಬರೆದವನು ನಾನು. ಹೀಗಾಗಿ ಅ. 25, 2023 ರಂದು ನಾವು ಪ್ರಸಾದ ಯೋಜನೆಯಡಿಯಲ್ಲಿ ಅನುದಾನ ಮಂಜೂರಾತಿ ಮಾಡಿದ್ದೇವೆ ಎಂದು ಕೇಂದ್ರವು ರಾಜ್ಯ ಸರ್ಕಾರಕ್ಕೆ ಪತ್ರ ಕೂಡ ಸಲ್ಲಿಸಿದೆ. ಈ ಎಲ್ಲಾ ಆಧಾರಗಳ ಮೇಲೆ ರಾಜ್ಯ ಸರ್ಕಾರವು ಒಂದು ಮಾನಿಟರಿಂಗ್ ಎಜೆನ್ಸಿಗೆ ಟೆಂಡರ್ ಕೂಡಾ ಕರೆದಿದೆ. ನಂತರ 2024ರ ಮಾರ್ಚ್ 7 ರಂದು ದೇಶದ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ವರ್ಚುವಲ್ ಮುಖಾಂತರ ಶಂಕುಸ್ಥಾಪನೆ ಮಾಡಿದ್ದಾರೆ. ಇಷ್ಟೆಲ್ಲಾ ಆದರೂ ಕೂಡಾ ಸಚಿವ ಖಂಡ್ರೆಯವರು ಪಾಪನಾಶ ದೇವಸ್ಥಾನದ ಕಾಮಗಾರಿ ಆರಂಭಿಸಲು ಗುತ್ತಿಗೆದಾರರಿಗೆ ಬಿಡಲಿಲ್ಲ. ಕೊನೆಗೆ ಕಾಮಗಾರಿ ಬೇಗ ಪ್ರಾರಂಭಿಸಿ ಎಂದು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದಾಗ ಆವಾಗ ಕಾಮಗಾರಿ ಆರಂಭಿಸಿದ್ದಾರೆ. ಈಗಾಗಲೇ ಶಂಕುಸ್ಥಾಪನೆ ಮಾಡಿದರೂ ಕೂಡಾ ತಂದೆ–ಮಕ್ಕಳಾದ ಸಂಸದ ಸಾಗರ ಖಂಡ್ರೆ ಹಾಗೂ ಸಚಿವ ಈಶ್ವರ ಖಂಡ್ರೆ ಮತ್ತು ಜಿಲ್ಲಾಧಿಕಾರಿಗಳು ಕೇಂದ್ರ ಪ್ರವಾಸೋದ್ಯಮ ಸಚಿವ ಗಜೇಂದ್ರಸಿಂಗ್ ಶೇಖಾವತ್ ಅವರ ಅನುಮತಿ ಪಡೆಯದೆ ಆಮಂತ್ರಣ ಪತ್ರಿಕೆಯ ಹೆಸರು ಹಾಕಿದ್ದಾರೆ. ಪುನಃ ಶಂಕುಸ್ಥಾಪನೆ ಮಾಡಲು ಹೊರಟಿರುವುದು ಅಕ್ಷಮ್ಯ ಅಪರಾಧ. ಪ್ರಸಾದ ಯೋಜನೆಯಡಿಯಲ್ಲಿ ಪಾಪನಾಶ ದೇವಸ್ಥಾನಕ್ಕೆ ನಾನೇ ಅನುದಾನ ಕೊಡಿಸಿದ್ದೇನೆ ಎಂದು ಹೇಳಿ ಬೀದರ ನಗರದಾದ್ಯಂತ ಕಟೌಟ್ ಹಾಕಿಕೊಂಡು ಜನರಿಗೆ ದಿಶಾಭೋಲ್ ಮಾಡಲು ಹೊರಟಿದ್ದಾರೆ. ಪಾಪನಾಶ ಅಭಿವೃದ್ಧಿಯಲ್ಲಿ ಸಂಸದ ಸಾಗರ ಖಂಡ್ರೆ ಹಾಗೂ ಸಚಿವ ಈಶ್ವರ ಖಂಡ್ರೆಯವರ ಕೊಡುಗೆ ಶೂನ್ಯವಾಗಿದೆ. ಇದರಲ್ಲಿ ಅವರ ಯಾವುದೇ ರೀತಿಯ ಪಾತ್ರವಿಲ್ಲ. ನಿಮ್ಮ ಈ ರೀತಿಯ ಸುಳ್ಳಿನ ಕಂತೆ ನಡೆಯುವುದಿಲ್ಲ. ಭಾರತೀಯ ಜನತಾ ಪಕ್ಷ ಇದನ್ನು ಸಹಿಸುವುದಿಲ್ಲ. ಮುಂದಿನ ದಿನಗಳಲ್ಲಿ ನಾವು ಹೋರಾಟ ಮಾಡುತ್ತೇವೆ. ಜವಾಬ್ದಾರಿ ಸ್ಥಾನದಲ್ಲಿರುವವರು ಈ ರೀತಿ ಸುಳ್ಳು ಹೇಳಬಾರದು. ದೆಹಲಿಯಲ್ಲಿ ಅರಾಜಕತೆ ಉಂಟು ಮಾಡಬೇಡಿ ಎಂದು ಖೂಬಾ ಕಿಡಿ ಕಾರಿದರು. ಒಂದು ವೇಳೆ ಪಾಪನಾಶ ದೇವಸ್ಥಾನಕ್ಕೆ ತಂದೆ ಮಕ್ಕಳ ಕೊಡುಗೆ ಏನಾದರೂ ಇದ್ದರೆ ದಾಖಲೆಗಳು ತಂದು ಸಾರ್ವಜನಿಕವಾಗಿ ತೋರಿಸಲಿ ಮತ್ತು ಪಾಪನಾಶ ಲಿಂಗದ ಮೇಲೆ ಕೈಯಿಟ್ಟು ಆಣೆ ಮಾಡಲಿ ಎಂದು ಸವಾಲ್ ಎಸೆದ ಖೂಬಾ, ಈಶ್ವರ ಖಂಡ್ರೆಯವರು ದೀಪ ಆರುವಾಗ ಜೋರಾಗಿ ಉರಿದಂತೆ ಕಳೆದೆರಡು ವರ್ಷಗಳಿಂದ ಅವರ ರಾಜಕೀಯ ನಡೆಯುತ್ತಿದೆ.

# ಪುರಸಭೆ ಅಧಿಕಾರಿ ಮೇಲೆ ಶಾಸಕ ಪ್ರಭು ಚವ್ಹಾಣ ಗರಂ

- **ಮಲ್ಲಮ್ಮ ನುಡಿ ವಾರ್ತೆ,ಔರಾದ:**



ಪಟ್ಟಣದಲ್ಲಿ ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಗುರುವಾರ ರಂದು ಔರಾದ(ಬಿ) ಪಟ್ಟಣದಲ್ಲಿ ಸಂಚರಿಸಿ ಸ್ವಚ್ಛತೆ ಹಾಗೂ ಮೂಲಸೌಕರ್ಯಗಳ ಸ್ಥಿತಿಗತಿಗಳನ್ನು ಪರಿಶೀಲಿಸಿದರು.

ಶಾಸಕರ ಕಚೇರಿಯಿಂದ, ಬಸವೇಶ್ವರ ವೃತ್ತ, ಬಸ್ ನಿಲ್ದಾಣ ಸೇರಿದಂತೆ ಪ್ರಮುಖ ಬೀದಿಗಳಲ್ಲಿ ಕಾಲ್ನಡಿಗೆಯಲ್ಲಿ ಸಂಚರಿಸಿದ ಶಾಸಕರು, ಸ್ವಚ್ಛತೆಯನ್ನು ಗಮನಿಸಿದರು. ಮುಖ್ಯ ಚರಂಡಿಯಲ್ಲಿ ಕೊಳಚೆ ನೀರು, ಕಾಗದ, ಪ್ಲಾಸ್ಟಿಕ್ ಹಾಗೂ ಮತ್ತಿತರೆ ತ್ಯಾಜ್ಯ ವಸ್ತುಗಳಿಂದ ತುಂಬಿರುವುದು ಕಾಣಿಸಿತು. ಬಸವೇಶ್ವರ ವೃತ್ತ, ಬಸ್ ನಿಲ್ದಾಣದಂತಹ ಪ್ರಮುಖ ಸ್ಥಳಗಳಲ್ಲಿ ಕಸ–ಕಡ್ಡಿಗಳು ಬಿದ್ದಿರುವುದನ್ನು ಕಂಡು ಪುರಸಭೆ ಮುಖ್ಯಾಧಿಕಾರಿಯ ವಿರುದ್ಧ ಕೆಂಡಾಮಂಡಲರಾದರು. ತಾವು ಬಂದು ಎರಡು ವರ್ಷಗಳಾಗುತ್ತಿವೆ ಆದರೆ ಪರಿಸ್ಥಿತಿ ಸುಧಾರಣೆ ಕಾಣಿಸುತ್ತಿಲ್ಲವೇಕೆ ?, ಮುಖ್ಯ ರಸ್ತೆಯ ಪರಿಸ್ಥಿತಿಯೇ ಹೀಗಾದರೆ ಓಣಿಗಳ ಗತಿಯೇನು ಎಂದು ಬೇಸರ ಹೊರಹಾಕಿದರು.

ಔರಾದ ಕ್ಷೇತ್ರದ ಅತಿ ದೊಡ್ಡ ಜಾತ್ರಾಮಹೋತ್ಸವ ಹತ್ತಿರ ಬಂದಿದೆ. ತೆಲಂಗಾಣಾ, ಮಹಾರಾಷ್ಟ್ರ ಹಾಗೂ ಮತ್ತಿತರೆ ರಾಜ್ಯಗಳಿಂದ, ಜಿಲ್ಲೆಯ ಎಲ್ಲ ತಾಲ್ಲೂಕುಗಳಿಂದ ಭಕ್ತರು ಜಾತ್ರೆಗೆ ಬಂದು ಪುನೀತರಾಗುತ್ತಾರೆ. ಆದರೆ ಪಟ್ಟಣದ ಎಲ್ಲಿಯೂ ಸ್ವಚ್ಛತೆ ಕಾಣಿಸುತ್ತಿಲ್ಲ. ನನ್ನ ಮರ್ಯಾದೆ ತೆಗೆಯಬೇಕು ಅಂದುಕೊಂಡಿದ್ದೀರಾ ? ಪದೇ ಪದೇ ಹೇಳಿದರೂ ಸಮಸ್ಯೆ ಸರಿಪಡಿಸದಿರುವುದು ನಿರ್ಲಕ್ಷ್ಯದ ಪರಮಾವಧಿ ಎಂದು ಅಸಮಾಧಾನ ಹೊರಹಾಕಿದರು.

ಪ್ರಮುಖ ರಸ್ತೆಯ ಬದಿಯಲ್ಲಿರುವ ಅಂಗಡಿಗಳ ಮುಂದೆಯೇ ಸಾಕಷ್ಟು ಕಸ ಕಾಣಿಸುತ್ತಿದೆ. ಎಲ್ಲ ಅಂಗಡಿಗಳನ್ನು ಶುಚಿಯಾಗಿಟ್ಟುಕೊಳ್ಳುವಂತೆ ಮಾಲೀಕರಿಗೆ ತಿಳಿಸಬೇಕು. ರಸ್ತೆ ಬದಿ ಪುರಸಭೆಯಿಂದಲೇ ಸ್ವಚ್ಛತಾ ಕಾರ್ಯ ಕೈಗೊಳ್ಳಬೇಕು. ಪ್ರತಿ ದಿನ ಕಸ ವಿಲೇವಾರಿ ಮಾಡಬೇಕು. ಎಲ್ಲಾ ವಾರ್ಡ್ ಗಳಲ್ಲಿ ಚರಂಡಿ ಸ್ವಚ್ಛತೆ, ರಸ್ತೆಗಳ ಶುದ್ಧೀಕರಣ ಕಾರ್ಯಗಳನ್ನು ಕೈಗೊಳ್ಳುವಂತೆ ಸೂಚಿಸಿದಲ್ಲದೇ ಸ್ವಚ್ಛತೆಗೆ ಮೂರು ದಿನಗಳ ಗಡುವು ನೀಡಿ, ನಿಗದಿತ ಅವಧಿಯೊಳಗೆ ಕಾರ್ಯ ಪೂರ್ಣಗೊಳಿಸದಿದ್ದರೆ ಕಠಿಣ ಕ್ರಮ ಕೈಗೊಳ್ಳಲಾಗುವುದೆಂದು ಎಚ್ಚರಿಕೆ ನೀಡಿದರು.

ನಂತರ ಜಿಲ್ಲಾಧಿಕಾರಿಗಳು ಮತ್ತು ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಿಗೆ ದೂರವಾಣಿ ಮುಖಾಂತರ ಸಂಪರ್ಕಿಸಿ ಔರಾದ(ಬಿ) ಪಟ್ಟಣದಲ್ಲಿ ಸ್ವಚ್ಛತೆ, ಕುಡಿಯುವ ನೀರು ಸರಬರಾಜು ಹಾಗೂ ಮತ್ತಿತರೆ ಮೂಲಸೌಕರ್ಯಗಳ ಕುರಿತು ಪ್ರತಿದಿನ ಸಾಕಷ್ಟು ದೂರುಗಳು ಬರುತ್ತಿವೆ. ಪುರಸಭೆ ಮುಖ್ಯಾಧಿಕಾರಿಯಿಂದ ಸರಿಯಾಗಿ ಸ್ಪಂದನೆ ಸಿಗುತ್ತಿಲ್ಲವೆಂದು ಜನತೆ ಹೇಳುತ್ತಿದ್ದಾರೆ. ವ್ಯವಸ್ಥೆ ಸರಿಪಡಿಸಿ ಸಾರ್ವಜನಿಕರಿಗೆ ಕುಡಿಯುವ ನೀರು, ರಸ್ತೆ, ಚರಂಡಿ ಸ್ವಚ್ಛತೆ, ಬೀದಿ ದೀಪ ವ್ಯವಸ್ಥೆ ಒಳಗೊಂಡು ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸುವಂತಾಗಲು ಕ್ರಮವಹಿಸುವಂತೆ ತಿಳಿಸಿದರು.

ಬಸ್ ನಿಲ್ದಾಣಕ್ಕೆ ಭೇಟಿ: ಪಟ್ಟಣದ ಬಸ್ ನಿಲ್ದಾಣದಲ್ಲಿ ಸಂಚರಿಸಿ ಸ್ವಚ್ಛತೆಯನ್ನು ವೀಕ್ಷಿಸಿದರು. ಬಸ್ ತಂಗುವ ಸ್ಥಳ ಒಳಗೊಂಡು ನಿಲ್ದಾಣದ ಆವರಣದ ತುಂಬೆಲ್ಲ ಕಸ ಆವರಿಸಿರುವುದುನ್ನು ಕಂಡು ಅಸಮಾಧಾನಗೊಂಡರು. ಸಾಕಷ್ಟು ಪ್ರಯತ್ನಪಟ್ಟು ಭವ್ಯ ನಿಲ್ದಾಣವನ್ನು ನಿರ್ಮಿಸಿದ್ದೇನೆ. ಆದರೆ ತಾವುಗಳು ಸರಿಯಾಗಿ ಇಟ್ಟುಕೊಳ್ಳುತ್ತಿಲ್ಲ. ಎಷ್ಟೇ ಹೇಳಿದರು. ಸಮಸ್ಯೆ ಸರಿಪಡಿಸುತ್ತಿಲ್ಲವೆಂದು ಅಧಿಕಾರಿಗಳ ವಿರುದ್ಧ ಬೇಸರ ಹೊರ ಹಾಕಿದರು. ಸ್ವಚ್ಛತೆಯ ಬಗ್ಗೆ ಪ್ರಯಾಣಿಕರಲ್ಲಿ ಜಾಗೃತಿ ಮೂಡಿಸಬೇಕು. ನಿಲ್ದಾಣದ ಆವರಣದಲ್ಲಿ ಪ್ರತಿ ದಿನ ಸ್ವಚ್ಛತಾ ಕಾರ್ಯ ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದರು.

ಈ ಸಂದರ್ಭದಲ್ಲಿ ತಹಸೀಲ್ದಾರರಾದ ಮಹೇಶ ಪಾಟೀಲ, ಪುರಸಭೆ ಮುಖ್ಯಾಧಿಕಾರಿ ಸ್ವಾಮಿದಾಸ, ಮುಖಂಡರಾದ ಶಿವರಾಜ ಅಲ್ಮಾಜೆ, ಶಿವಾಜಿರಾವ ಪಾಟೀಲ ಮುಂಗನಾಳ, ಕೇರಬಾ ಪವಾರ, ಗುಂಡಪ್ಪ ಮುಧಾಳೆ, ಬಸವರಾಜ ಹಳ್ಳೆ, ವೀರೇಶ ಅಲ್ಮಾಜೆ, ಪ್ರಕಾಶ ಭಂಗಾರೆ, ಸಂದೀಪ ಪಾಟೀಲ, ವಿಲಾಸ ಚವ್ಹಾಣ, ಲಕ್ಷ್ಮಣ ಜಾಧವ, ಪ್ರಶಾಂತ ಚಿದ್ರೆ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ರಾಯಚೂರು ಜಿಲ್ಲಾ ಉತ್ಸವ: ಜಿಲೇಬಿ ಸವಿದು ಸಂಭ್ರಮಿಸಿದ ಜಿಲ್ಲಾ ಉಸ್ತುವಾರಿ ಸಚಿವ ಡಾ. ಶರಣಪ್ರಕಾಶ್ ಪಾಟೀಲ್

## ಬಾಯಲ್ಲಿ ನೀರೂರಿಸುವ ಆಹಾರ ಮೇಳ : ವಿವಿಧ ಬಗೆಯ ತಿನಿಸುಗಳಿಗೆ ಮುಗಿಬಿದ್ದ ಜನ





ರಾಯಚೂರು ಫೆ. 05:ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವದ ಅಂಗವಾಗಿ ಇಲ್ಲಿನ ಕೃಷಿ ವಿಶ್ವವಿಶ್ವವಿದ್ಯಾಲಯ ಆವರಣದಲ್ಲಿ ವಿಶಾಲವಾದ ಪ್ರದೇಶದಲ್ಲಿ ಸ್ಥಾಪಿಸಲಾಗಿರುವ ಆಹಾರ ಮೇಳದ ಮಳಿಗೆಯಲ್ಲಿ ಉತ್ಸವದ ಮೊದಲ ದಿನವೇ ಬೆಳಿಗ್ಗೆಯಿಂದಲೇ ಇಲ್ಲಿನ ತಿಂಡಿ ತಿನಿಸುಗಳಿಗೆ ಜನ ಮುಗಿಬಿದ್ದ ಸವಿಯುವುದು ಕಂಡುಬಂದಿತು.

ಆಹಾರ ಮೇಳವನ್ನು ಉದ್ಘಾಟಿಸಿದ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲರು ಮಳಿಗೆಯಲ್ಲಿ ತೆರೆಯಲಾಗಿದ್ದ ವಿವಿಧ ಬಗೆಯ ತಿಂಡಿ ತಿನಿಸುಗಳ ಮಳಿಗೆಗಳಿಗೆ ಖುದ್ದು ಭೇಟಿ ನೀಡಿ, ಪರಿಶೀಲಿಸಿದರು. ಮಹಿಳಾ ಸ್ವ ಸಹಾಯ ಸಂಘದ ಮಹಿಳೆಯೊಬ್ಬರು ಮಳಿಗೆಯಲ್ಲಿ ಆಗಷ್ಟೇ ತಯಾರಿಸಿದ್ದ ಜಿಲೇಬಿಯನ್ನು ಪಡೆದು, ರುಚಿ ನೋಡಿ, ಖುಷಿ ಪಟ್ಟರು. ಇವರೊಂದಿಗೆ ಮಳಿಗೆಗೆ ಆಗಮಿಸಿದ್ದ ವಿವಿಧ ಗಣ್ಯರು ಕೂಡ ಜಿಲೇಬಿಯ ಸವಿಯನ್ನು ಸವಿದರು. ಬಳಿಕ ಆಹಾರ ಮಳಿಗೆಯಲ್ಲಿಯೇ ವಿಶೇಷವಾಗಿ ತಯಾರಿಸಲಾಗಿದ್ದ ಕೇಕ್ ಅನ್ನು ಕೂಡ ಕತ್ತರಿಸಿ, ಆಹಾರ ಮೇಳದ ಸಂಭ್ರಮವನ್ನು ಇಮ್ಮಡಿಗೊಳಿಸಿದರು.

ಆಹಾರ ಮೇಳಕ್ಕೆ ಸಚಿವರೊಂದಿಗೆ ವಾಲ್ಮೀಕಿ ಅಭಿವೃದ್ಧಿ ನಿಗಮ ಅಧ್ಯಕ್ಷ ಬಸನಗೌಡ ದದ್ದಲ್, ರಾಯಚೂರು ನಗರ ಶಾಸಕ ಡಾ. ಶಿವರಾಜ ಪಾಟೀಲ್, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾದಿಕಾರ ಅಧ್ಯಕ್ಷ ಪಾಮಯ್ಯ ಮುರಾರಿ, ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ರಾಜಶೇಖರ ರಾಮಸ್ವಾಮಿ, ಜಿಲ್ಲಾಧಿಕಾರಿ ನಿತೀಶ್ ಕೆ., ಜಿ.ಪಂ. ಸಿಇಒ ಈಶ್ವರ ಕುಮಾರ್ ಕಾಂದು, ಎಸ್ ಪಿ ಅರುಣಾಂಗ್ಷು ಗಿರಿ, ಕೃಷಿ ವಿವಿ ಕುಲಪತಿ ಡಾ. ಎಂ. ಹನುಮಂತಪ್ಪ, ಮಹಾನಗರಪಾಲಿಕೆ ಆಯುಕ್ತ ಜುಬಿನ್, ಮಹಾಪಾತ್ರ, ಎಪಿಎಂಸಿ ಅಧ್ಯಕ್ಷ ಮಲ್ಲಿಕಾರ್ಜುನ ಗೌಡ, ಉಪಾಧ್ಯಕ್ಷ ಬಶೀರ್ ಅಹ್ಮದ್ ಸೇರಿದಂತೆ ಹಲವು ಗಣ್ಯರು ಈ ವೇಳೆ ಉಪಸ್ಥಿತರಿದ್ದು, ವಿವಿಧ ಬಗೆಯ ಆಹಾರ, ತಿಂಡಿ ತಿನಿಸುಗಳ ಸವಿಯನ್ನು ಸವಿದರು.

ಆಹಾರ ಮೇಳದಲ್ಲಿ ಚಿಕ್ಕಮಗಳೂರು, ಗದಗ, ಮೈಸೂರು, ಬಾಗಲಕೋಟೆ, ಬೆಳಗಾವಿ, ಕಲಬುರ್ಗಿ ಸೇರಿದಂತೆ ಹಲವು ಜಿಲ್ಲೆಗಳಿಂದ ಆಗಮಿಸಿದ್ದ ಹಲವು ಬಗೆಯ ತಿಂಡಿ, ಖಾದ್ಯಗಳ ತಯಾರಕರು, ಮಳಿಗೆಯಲ್ಲಿ ತಮ್ಮ ತಿಂಡಿ ತಿನಿಸುಗಳನ್ನು ಇಲ್ಲಿ ಪರಿಚಯಿಸಿದ್ದಲ್ಲದೆ, ಜನರಿಗೆ ಸವಿಯಲೂ ನೀಡಿದರು. ಉತ್ಸವ ಆರಂಭಗೊಂಡ ಮೊದಲ ದಿನವೇ ಬೆಳಿಗ್ಗೆಯಿಂದಲೇ ಆಹಾರ ಮೇಳಕ್ಕೆ ಸಾಗರೋಪಾದಿ ಹರಿದುಬಂದ ಜನ ವಿವಿಧಬಗೆಯ ತಿನಿಸುಗಳನ್ನು ಸವಿದರು. ರಾಯಚೂರು ಜಿಲ್ಲೆಯೂ ಸೇರಿದಂತೆ ಅಕ್ಕಪಕ್ಕದ ಜಿಲ್ಲೆ, ತಾಲ್ಲೂಕುಗಳ ಜನರು ಕೂಡ ರಾಯಚೂರು ಉತ್ಸವವನ್ನು ಕಣ್ಣಾರೆ ಕಂಡು ಸಂಭ್ರಮಿಸಲು ಆಗಮಿಸುತ್ತಿದ್ದುದು ಕಂಡುಬಂದಿತು. ಹಲವು ಶಾಲೆಗಳ ಮಕ್ಕಳು ಕೂಡ ಉತ್ಸವದ ಸವಿ ಸವಿಯಲು ತಮ್ಮ ಶಾಲಾ ಶಿಕ್ಷಕರುಗಳೊಂದಿಗೆ ಆಹಾರ ಮೇಳಕ್ಕೂ ಭೇಟಿ ನೀಡಿ, ತಮಗಿಷ್ಟವಾದ ತಿಂಡಿ ತಿನಿಸುಗಳನ್ನು ಸವಿದರು.

ಆಹಾರ ಮೇಳದಲ್ಲಿ ಫಾಸ್ಟ್ ಫುಡ್ ತಿನಿಸುಗಳಿಂದ ಮೊದಲುಗೊಂಡು, ವಿವಿಧ ಬಗೆಯ ಹಣ್ಣುಗಳ ಜ್ಯೂಸ್ ಅಂಗಡಿಗಳು, ಮಂಡಾಳು ಒಗ್ಗರಣಿ, ಮಿರ್ಚಿ ಬಜ್ಜಿ, ಬದನೆಕಾಯಿ ಬಜ್ಜಿ, ಪಾಪ್ ಕಾರ್ನ್, ಗೋಬಿ ಮಂಚೂರಿ, ನೂಡಲ್ಸ್, ಆಂಧ್ರಾ ಸ್ವೀಟ್ಸ್, ನಾನಾ ಬಗೆಯ ಹಪ್ಪಳ, ಸಂಡಿಗೆ ಸೇರಿದಂತೆ ನಾಡಿನ ನಾನಾ ಭಾಗದಲ್ಲಿನ ತಿಂಡಿ ತಿನಿಸುಗಳು ಒಂದೇ ಸೂರಿನಡಿ ಜನರಿಗೆ ಲಭ್ಯವಾಗುವಂತೆ ಆಹಾರ ಮೇಳದಲ್ಲಿ ವ್ಯವಸ್ಥೆಗೊಳಿಸಲಾಗಿತ್ತು.

ಆಹಾರ ಮೇಳದ ಮೊದಲ ದಿನವೇ ತಿಂಡಿ ತಿನಿಸುಗಳ ಮಳಿಗೆಗಳಲ್ಲಿ ಭರ್ಜರಿ ಸ್ಪಂದನೆ ದೊರೆತಿದ್ದು, ಒಳ್ಳೆಯ ವ್ಯಾಪಾರವಾಗಿದ್ದು ಕಂಡುಬಂದಿತು. ಉತ್ಸವ ಫೆ. 07 ರವರೆಗೂ ನಡೆಯಲಿದ್ದು, ಆಹಾರ ಮೇಳದಲ್ಲಿ ತಿಂಡಿ ತಿನಿಸುಗಳ ವ್ಯಾಪಾರಸ್ಥರಿಗೆ ಭರ್ಜರಿ ವ್ಯಾಪಾರವಾಗಿ, ಉತ್ತಮ ಲಾಭ ಕಂಡುಕೊಳ್ಳುವ ನಿರೀಕ್ಷೆ ಇದೆ.

# ಬಸವರಾಜ ಈಳಿಗನೂರ ಅವರಿಗೆ ಪಿಎಚ್‌ಡಿ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗದಿಂದ ಬಸವರಾಜ ಈಳಿಗನೂರ ಅವರಿಗೆ ಪಿ.ಎಚ್.ಡಿ ಪದವಿ ಲಭಿಸಿದೆ.

ವಿಶ್ವವಿದ್ಯಾಲಯದ ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಡಾ.ರವಿ ಬಿ ಇವರ ಮಾರ್ಗದರ್ಶನದಲ್ಲಿ "ಎ ಸ್ಟಡಿ ಆನ್ ಇನ್‌ಸ್ಟಿಟ್ಯೂಷನಲ್ ಸಪೋರ್ಟ್ ಫಾರ್ ಸ್ಟಾರ್ಟ್ ಅಪ್ ಇನಿಶಿಯೇಟಿವ್ಸ್ ಇನ್ ಕರ್ನಾಟಕ" ಎಂಬ ವಿಷಯದ ಮೇಲೆ ಮಹಾಪ್ರಬಂಧ ಮಂಡಿಸಿದ ಹಿನ್ನೆಲೆಯಲ್ಲಿ ಪಿ.ಎಚ್.ಡಿ ಪದವಿ ನೀಡಿದೆ ಎಂದು ವಿವಿ ಪ್ರಕಟಣೆ ತಿಳಿಸಿದೆ.

ಇವರು ಪ್ರಸ್ತುತ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ವಾಣಿಜ್ಯಶಾಸ್ತ್ರ ಅಧ್ಯಯನದ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

# ಕಾವಲುಗಾರರನ್ನು ನೇಮಿಸಲು ರಕ್ಷಣಾ ವೇದಿಕೆ ಒತ್ತಾಯ



• **ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು;**

ತಾಲೂಕಿನ ಗಾಂಧಿನಗರದ ಸ್ಟೇಟ್ ಬ್ಯಾಂಕ್ ನಲ್ಲಿ ದಿನಾಂಕ ಜ.30 ರಂದು ರಾತ್ರಿ ಎಸ್.ಬಿ. ಐ. ಬ್ಯಾಂಕ್ ಕಳ್ಳ ತನದ ಯತ್ನ ನಡೆದಿದ್ದು. ಇದರಿಂದ ಗಾಂಧಿನಗರದ ಸುತ್ತಮುತ್ತಲಿನ ಎಸ್. ಬಿ.ಐ. ಬ್ಯಾಂಕಿನ ಗ್ರಾಹಕರು ಭಯ ಭೀತಿ ಎದುರಿಸುತ್ತಿದ್ದಾರೆ. ಹಾಗಾಗಿ ಬ್ಯಾಂಕ್ ಗೆ ಕಾವಲುಗಾರರನ್ನು ನೇಮಿಸಲು ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆ ತಾಲೂಕು ಅಧ್ಯಕ್ಷ ರಾಜ್ ಸಾಬ್ ಎಲ್ಲಾ ಗ್ರಾಹಕರು ಪರವಾಗಿ ಎಸ್. ಬಿ.ಐ.ಬ್ಯಾಂಕ್ ಮ್ಯಾನೇಜರ್ ಗೆ ಮನವಿ ಪತ್ರ ಸಲ್ಲಿಸಿ ಒತ್ತಾಯಿಸಿದರು.

ಸಿಂಧನೂರು ತಾಲೂಕಿನ ಗಾಂಧಿ ನಗರ ದೊಡ್ಡ ವಾಣಿಜ್ಯೋದ್ಯಮ ಸಂಸ್ಥೆಯ ಯಾಗಿದ್ದು. ವ್ಯವಹಾರಿಕ ದೃಷ್ಟಿಯಿಂದ ಸುಮಾರು ವರ್ಷಗಳಿಂದ ಎಸ್ ಬಿ.ಐ ಬ್ಯಾಂಕ್ ಬ್ರಾಂಚ್ ಗಾಂಧಿನಗರದಲ್ಲಿ ಸ್ಥಾಪಿಸಲಾಗಿತ್ತು. ಆದರೆ ಮಾನ್ನೆ ತಾನೇ ಜನವರಿ 30 ರಂದು ರಾತ್ರಿ ಬ್ಯಾಂಕ್ ನಲ್ಲಿ ಕಳ್ಳತನ ನಡೆಸುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಆದರೆ ಅವರು ಪ್ರಯತ್ನ ವಿಫಲವಾಗಿದ್ದು.ಹಾಗಾಗಿ ಗಾಂಧಿನಗರದ ಸುತ್ತಮುತ್ತಲಿನ ಬ್ಯಾಂಕ್ ನಲ್ಲಿ ವ್ಯವಹಾರಿಕ ಹೊಂದಿರುವ ಗ್ರಾಹಕರು ಎಸ್. ಬಿ.ಐ. ಬ್ಯಾಂಕ್ ನಲ್ಲಿ. ಬೆಲೆಬಾಳುವ ಆಭರಣಗಳನ್ನು ಅಡವಿಟ್ಟು. ಮತ್ತು ಲಾಕರ್ ಗಳನ್ನು ಉಪಯೋಗಿಸುತ್ತಿದ್ದು ಈ ಗ್ರಾಹಕರು ಭಯಭೀತರಾಗಿದ್ದಾರೆ. ಬ್ಯಾಂಕಿನ ಭದ್ರತೆಗಾಗಿ ಸಂಬಂಧಿಸಿದ ಮೇಲಧಿಕಾರಿಗಳು ಬ್ಯಾಂಕಿಗೆ ರಾತ್ರಿ ಕಾವಲುಗಾರರನ್ನು ನೇಮಿಸಬೇಕೆಂದು ಎಲ್ಲ ಸುತ್ತಮುತ್ತಲಿನ ಗ್ರಾಮದ ಹಾಗೂ ಗಾಂಧಿನಗರದ ಎಲ್ಲಾ ಸಾರ್ವಜನಿಕರ ಪರವಾಗಿ ಎಸ್. ಬಿ.ಐ. ಬ್ಯಾಂಕ್ ಮ್ಯಾನೇಜರ್ ಗೆ ಕರ್ನಾಟಕ ರಕ್ಷಣಾ ವೇದಿಕೆ ತಾಲೂಕು ಅಧ್ಯಕ್ಷ ರಾಜ್ ಸಾಬ್ ಮನವಿ ಪತ್ರ ಸಲ್ಲಿಸಿ ಒತ್ತಾಯಿಸಿದರು.

# ರಾಷ್ಟ್ರೀಯ ಫ್ಲೋರೋಸಿಸ್ ತಡೆ ನಿಯಂತ್ರಣ ಜಾಗ್ರತೆ ಕಾರ್ಯಕ್ರಮ



• **ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು:**

ಜಿಲ್ಲಾ ಆಡಳಿತ ಮಂಡಳಿ ಜಿಲ್ಲಾ ಪಂಚಾಯತ್ ರಾಯಚೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ತಾಲೂಕ ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಸಿಂಧನೂರು ಪ್ರಾಥಮಿಕ ಆರೋಗ್ಯ ಕೇಂದ್ರ ರಾಗಲಪರ್ವಿ ಇವರ ಸಂಯುಕ್ತ ಆಶ್ರಯದಲ್ಲಿ ಬುದ್ದಿನ್ನಿ ಗ್ರಾಮದಲ್ಲಿ ರಾಷ್ಟ್ರೀಯ ಫ್ಲೋರೋಸಿಸ್ ತಡೆ ಮತ್ತು ನಿಯಂತ್ರಣ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು ಈ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಚಾಲನೆ ಮಾಡಲಾಯಿತು.

ಈ ಕಾರ್ಯಕ್ರಮದಲ್ಲಿ ಫ್ಲೋರೋಸಿಸ್ ಜಾಗೃತಿ ಕಾರ್ಯಕ್ರಮ ಹಾಗೂ ಫ್ಲೋರೋಸಿಸ್ ಉಚಿತ ತಪಾಸಣಾ ಕಾರ್ಯಕ್ರಮವನ್ನು ಹಮ್ಮಿಕೊಂಡು ಅದು ಮತ್ತು ಸಾರ್ವಜನಿಕರಆರೋಗ್ಯವನ್ನು ತಪಾಸಣೆ ಮಾಡಲಾಯಿತು.ಫ್ಲೋರೋಸಿಸ್ ಎಂದರೆ ಇದೊಂದು ದೀರ್ಘಕಾಲಿಕ ಕಾಯಿಲೆಯಾಗಿದ್ದು ಇದು ಚಯಪಚಯ ಕಾಯಿಲೆಯಾಗಿದ್ದು

ಇದು ಅಂತರ ಜಲ ಫ್ಲೋರೇಡ್ ಅಂಶ ಜಾಸ್ತಿ ಇರುವ ನೀರು ಕುಡಿಯುವ ಮೂಲಕ ಬರುವ ಕಾಯಿಲೆಯಾಗಿದೆ ಎಂದು ಡಾ. ಶ್ವೇತಾಂಬರಿ ಆಯುಷ್ ವೈದ್ಯಾಧಿಕಾರಿಗಳು ಮಾತನಾಡಿದರು. ನಂತರ ಗುರುಪ್ರಸಾದ್ ಫ್ಲೋರೋಸಿಸ್ ರಾಯಚೂರು ಇವರು ಮಾತನಾಡಿ ಫ್ಲೋರೋಸಿಸ್ ತಡೆ ಹಾಗೂ ಲಕ್ಷಣಗಳು ನಿಯಂತ್ರಣದ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡಿದರು ನಂತರ ಡಾ. ಅಫ್ರೋಜಾ ಬಾನು ದಂತ ವೈದ್ಯರು ಪ್ರಾಥಮಿಕ ಆರೋಗ್ಯ ಕೇಂದ್ರ ಜವಳಗೆರ ಇವರು ಮಾತನಾಡಿ ಮಕ್ಕಳಲ್ಲಿ ದಂತ ಫ್ಲೋರೋಸಿಸ್ ಬರುವುದು ಹೆಚ್ಚು ಸರ್ವಸಾಮಾನ್ಯ ನೀರು ಕುಡಿಯುವ, ಅನೇಕ ರೀತಿಯ ಪಾನೀಯ ಕುಡಿಯುದು, ಜಂಕ್ ಫುಡ್ ಸೇವನೆ ಮೂಲಕ ಆಹಾರ ಪದ್ಧತಿ ಬದಲಾವಣೆ ಮತ್ತು ಪೇಸ್ಟ್ ಬಳಸುವುದು ಕಡಿಮೆ ಮಾಡಿದಾಗ ಇದನ್ನು ತಡೆಯುವ ಸಾಧ್ಯತೆ ಇರುತ್ತದೆ ಎಂದರು ತದನಂತರ ಗೀತಾ ಹಿರೇಮಠ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು ತಾಲೂಕ ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಸಿಂಧನೂರು ಮಾತನಾಡಿ ಫ್ಲೋರೋಸಿಸ್ ಅಲ್ಲಿ ಮೂರು ತರದ ಕಾಯಿಲೆಗಳು ದಂತ ಫ್ಲೋರೋಸಿಸ್ ಮೂಳೆ ಫ್ಲೋರೋಸಿಸ್ ಬರುವುದು ಇದನ್ನು ತಡೆಯುವುದು ಎ ಅನ್ನಂಗ ಸಿ ಅನ್ನಂಗ ಪೋಷಕಾಂಶಗಳಿರುವ ಆಹಾರವು ಸೇವನೆಯನ್ನು ಮಾಡುವುದು ಸೂಕ್ತ ಚಿಕಿತ್ಸೆ ಪಡೆದುಕೊಳ್ಳುವುದು ಸರಿಯಾದ ಕ್ರಮವಾಗಿದೆ ಎಂದು ಹೇಳಿದರು.ಸ್ಪರ್ಶ್ ಕುಷ್ಟರೊಗ ಜಾಗೃತಿ ಅಭಿಯಾನ, ರಾಯಚೂರು ಉತ್ಸವದ ಕುರಿತು ಹೇಳಲಾಯಿತು,ಈ ಕಾರ್ಯಕ್ರಮದಲ್ಲಿ, ಶಿವಪ್ಪ ಪಂಚಾಯತ್ ಸದಸ್ಯರು, ಗಂಗಾಧರ್ ಎಲ್ ಟಿ ಓ,ರಾಯಚೂರ್, ಸಿ,ಎಚ್,ಒ ಅಧಿಕಾರಿಗಳಾದ ರಾಜಕುಮಾರ ಹಾಗೂ ಜಯ, ಪಕೀರಚಂದ್ ಸೀನಿಯರ್ ಎಚ್ ಐ ಓ, ಶರಣಮ್ಮ ಎಒ, ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿಗಳಾದ ಗಂಗಮ್ಮ ಅಂಬಮ್ಮ ಅಂಗನವಾಡಿ ಕಾರ್ಯಕರ್ತರು ಆಶಾ ಕಾರ್ಯಕರ್ತೆಯರು ಅಂಗನವಾಡಿ ಸಹಾಯಕಿ, ಹಿರಿಯ ನಾಗರಿಕರು ಉಪಸ್ಥಿತರಿದ್ದರು.

# ಕುರಿಗೆ ಪ್ರಾಣ ಸಂಕಟ ತೋಳಗಳಿಗೆ ಚೆಲ್ಲಾಟ

• **ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು:**



ಜಿಲ್ಲೆಯ ಬಹು ಸಂಖ್ಯಾತ ಜನರು ಕಡಿಮೆ ಇಳುವರಿ, ಕಡಿಮೆ ಕೂಲಿ ಹಾಗೂ ಕುಸಿದ ಜೀವನದಿಂದ ಒಂದುಕಡೆಒದ್ದಾಡುತಿದ್ರೆ,ರಾಯಚೂರು ಆಳುವ ವರ್ಗಗಳು ಜಿಲ್ಲಾ ಹಬ್ಬದ ಸಡಗರ ಹಾಗೂ ಸಂಭ್ರಮದಲ್ಲಿ ತೇಲುತ್ತಿವೆ. ಜಿಲ್ಲೆಯ ರೈತರು, ಕಾರ್ಮಿಕರು,ದಲಿತರು ಹಾಗೂ ಇತರೆ ದಮನಿತರ ಜ್ವಲಂತ ಸಮಸ್ಯೆಗಳನ್ನು ಮರೆ ಮಾಚುವ, ಶ್ರೀಮಂತರು, ಭೂಮಾಲೀಕರು, ಭಾರೀ ಗುತ್ತೇದಾರಿ ರಾಜಕಾರಣಿಗಳು ಶಿಕ್ಷಣ ಹಾಗೂ ಆರೋಗ್ಯ ರಂಗದ ಮಾಫಿಯಾಗಳ ಸಡಗರ ಸಂಭ್ರಮ ಮೆರೆಯುವ ರಾಯಚೂರು ಹಬ್ಬಾಚರಣೆಯನ್ನು ನಮ್ಮ ಸಿಪಿಐ(ಎಂಎಲ್)ರೆಡ್ ಸ್ಟಾರ್ ತೀವ್ರವಾಗಿ ವಿರೋಧಿಸುತ್ತದೆ ಎಂದು ತಿಳಿಸಿದರು ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ರಾಜ್ಯ ಸಮಿತಿ ಸಂಚಾಲಕರಾದ ಎಂ ಗಂಗಾಧರ್ ಅವರು ಹೊಟ್ಟೆಗೆ ಇಟ್ಟಿಲ್ಲದವನ ಮನೆಯಲ್ಲಿ ಜುಟ್ಟಕ್ಕೆ ಮಲ್ಲಿಗೆ ಕಟ್ಟುವ ದುರಾಡಳಿತವಾಗಿದೆ ಎಂದು ರೆಡ್ ಸ್ಟಾರ್ ಅಭಿಪ್ರಾಯ ಪ್ರಕಟಿಸಿದೆ. ಜಿಲ್ಲೆಯ ಬಹು ಮುಖ್ಯವಾದ ಆರ್ಥಿಕ ಶಕ್ತಿಯಾದ ರೈತ ಪರಿವರ್ತ ಹಾಗೂ ಕೃಷಿ ಕಾರ್ಮಿಕರ ಪರಿಸ್ಥಿತಿ ಬಗ್ಗೆ ಸಾಮಾನ್ಯ ಅರಿವು ಇದ್ದವರು ಯಾರು ಈ ಹಬ್ಬದಲ್ಲಿ ಭಾಗವಹಿಸಲಾರರು.

ಏಕೆಂದರೆ ಹತ್ತಿ, ಭತ್ತ ಹಾಗೂ ಮೆಣಸಿನಕಾಯಿ ಹಾಗೂ ತೊಗರಿ ಇಳುವರಿ ನೆಲಕಚ್ಚಿದ್ದು. ಬೆಲೆಯೂ ಬಿದ್ದೋಗಿದೆ. ಸರಾಸರಿ 3 ಲಕ್ಷ 70 ಸಾವಿರ ಎಕರೆ ಮುಂಗಾರು ಭತ್ತ ಶೇಕಡ 70%ರಷ್ಟು ಇಳುವರಿ ಕುಸಿದಿದೆ. ಸಿಂಧನೂರು, ಮಾನ್ವಿ ಹಾಗೂ ರಾಯಚೂರು ತಾಲೂಕಿನ ತುಂಗಭದ್ರಾ ಅಚ್ಚುಕಟ್ಟು ಪ್ರದೇಶದಲ್ಲಿ 15 ಲಕ್ಷ ಜನರಿಗೆ ಹಿಂಗಾರು ಬೆಳೆಯೇ ಇಲ್ಲ. ಗೇಟ್ ದುರಸ್ತಿ ನಿಮಿತ್ಯ ಹಿಂಗಾರಿ ನೀರು ನಿಲ್ಲಿಸಲಾಗಿದೆ

ಮುಂಗಾರು ಮಣ್ಣುಪಾಲಾಯಿತು ಹಿಂಗಾರು ಇಲ್ಲವೇ ಇಲ್ಲ. ಅಚ್ಚುಕಟ್ಟು ಪ್ರದೇಶದ ಶೇಕಡ 30 ರಷ್ಟು ಜನ ಗುಳೆ ಹೊರಟಿದ್ದಾರೆ. ಇದರ ಅರಿವು ಹಾಗೂ ಪರಿವು ಇಲ್ಲದೆ ಕಳೆದ ತಿಂಗಳು ಸಿಂಧನೂರಿನಲ್ಲಿ ಅಂಬಾ ಮಹೋತ್ಸವ ಆಚರಿಸಿದರು. ಈಗ ರಾಯಚೂರು ಉತ್ಸವದಲ್ಲಿ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ತೇಲಾಡುತ್ತಿದ್ದಾರೆ ಸಾರ್ವಜನಿಕರು ಸಮಸ್ಯೆಗಳ ಪರಿಹಾರಕ್ಕೆ ಬಾರದ ಶಾಸಕರುಗಳು

**ರಾಯಚೂರು ಉತ್ಸವ : ಮದು**

ಮಕ್ಕಳಿಲ್ಲದ ಮದುವೆ ಹಾಗೆಯೇ ಜಿಲ್ಲೆಯ ಕೃಷಿ ಬಿಕ್ಕಟ್ಟಿನಿಂದ ಕೆಲಸ ಇಲ್ಲದಂತಾಗಿ ಲಕ್ಷ ಲಕ್ಷ ಜನ ಕೃಷಿ ಕಾರ್ಮಿಕರು ಮುಂದಿನ ಆರು ತಿಂಗಳ ಜೀವನದ ಬಗ್ಗೆ ಒಳಗೊಳಗೆ ಕುಡಿಯುತ್ತಿದ್ದಾರೆ. ಮನೆಗೊಬ್ಬರಂತೆ ಮುಂಬೈ, ಗೋವಾ, ಬೆಂಗಳೂರಿಗೆ ಗುಳೆ ಹೊರಟಿದ್ದಾರೆ. ಜಿಲ್ಲೆಯಲ್ಲಿ ಗುತ್ತಿಗೆ ಹಾಗೂ ದಿನಗೂಲಿ ಆಧಾರಿತ ಕಾರ್ಮಿಕ ಹಾಗೂ ಸಣ್ಣ ನೌಕರರಿಗೆ ಸರಾಸರಿ ಆರು ತಿಂಗಳಿಂದ ಸಂಬಳ ಪಾವತಿ ಮಾಡಿಲ್ಲ. ಸಂಬಳ ಕೇಳಿದರೆ ಕೆಲಸವಿಲ್ಲ. ತುಂಗಭದ್ರಾ, ಶಕ್ತಿನಗರ, ಹಟ್ಟಿ ಸೇರಿದಂತೆ ಪೌರ ಸೇವೆ, ಆರೋಗ್ಯ, ಶಿಕ್ಷಣ ಹಾಗೂ ಪಂಚಾಯತ್ ರಾಜ್ಯ ಇಲಾಖೆಗಳಲ್ಲಿ ದುಡಿದ ಕೂಲಿ ಕೊಡಿ ಎಂದು ನಡೆಯುತ್ತಿರುವ ಹೋರಾಟಗಳಿಗೆ ಸರಕಾರ ಸ್ಪಂದಿಸುತ್ತಿಲ್ಲ. ದುಡಿದ ಕೂಲಿ ಕೊಡದ ಜಿಲ್ಲೆಯಲ್ಲಿ ಜಿಲ್ಲಾಣಟಿಜಜಜಿಟಿಜಜತ್ಸವ ಎಂದರೆ ಇದಕ್ಕಿಂತ ನಾಚಿಕೆಗೇಡು ಸಂಗತಿ ಮತ್ತೊಂದಿಲ್ಲ. ಆರೋಪಿಸಿದರು.

**ಎಡದೊರೆ ನಾಡಲ್ಲಿ ಕುಡಿಯಲು ನೀರಿಲ್ಲ ದೊರೆಗಳೇ!**

ಜಿಲ್ಲೆಯಲ್ಲಿ ಅಂತರ್ಜಲ ಖುಷಿ ಇದೆ ಕುಡಿಯುವ ನೀರು ಹಾಗೂ ಕೃಷಿ ನೀರಾವರಿಯ ಎಲ್ಲಾ ಕಾಮಗಾರಿಗಳು ಅವ್ಯವಹಾರಕ್ಕೆ ಬಲಿಯಾಗಿ ಹೋಗಿವೆ. ಜಿಲ್ಲೆಯ 60 ಗ್ರಾಮಗಳು ಕುಡಿಯುವ ನೀರಿನ ವ್ಯವಸ್ಥೆಯಿಂದ ವಂಚಿತವಾಗಿವೆ ಆರ್ ಓ ಪ್ಲಾಂಟ್ ಗಳು 70% ಕೆಟ್ಟು ನಿಂತಿವೆ. ಆರ್ಸೆನಿಕ್ ಎಲ್ಲಾ ಕಡೆ ಅರಡಿಕೊಂಡಿದೆ ಎಡದೊರೆ ನಾಡಿನ ಹಬ್ಬಕ್ಕೆ ಬರುವ ಅರಸರಿಗೆ, ಕಲಾವಿದರಿಗೆ, ಕುಣಿಯುವವರಿಗೆ, ಬಾರಿಸುವವರಿಗೆ, ನಗೆಸುವವರಿಗೆ ನಮ್ಮ ವಿನಂತಿ ಇಷ್ಟೇ : ಎರಡು ನದಿ, ಎರಡು ನಾಲೆ, ಸಾವಿರಕ್ಕೂ ಹೆಚ್ಚು ಕೆರೆಕುಂಟೆಗಳು ಹಾಗೂ ಹತ್ತಕ್ಕೂ ಹೆಚ್ಚು ಏತ ನೀರಾವರಿ ಯೋಜನೆಗಳಿರುವ. ಆದರೆ, ಒಟ್ಟು ನೀರಾವರಿಗೊಳ ಗಾದ ಪ್ರದೇಶ ಕೇವಲ 42% ಆಗಿದೆ. ಶೇಕಡ 38% ರಷ್ಟು ಸರಕಾರಿ ಶಾಖೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ ಅಂಬೊತ್ಸವ ಆಚರಿಸಿದ ಸಿಂಧನೂರಿನಲ್ಲಿ ವಾರಕ್ಕೊಮ್ಮೆ ಕುಡಿಯುವ ನೀರು ಬಿಡಲಾಗುತ್ತದೆ.

# ಶಿಷ್ಟಾಚಾರದನ್ವಯ ಮಹನೀಯರ ಜಯಂತಿ ಅರ್ಥಪೂರ್ಣ ಆಚರಣೆ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಜಿಲ್ಲಾ ಕೇಂದ್ರದಲ್ಲಿ ವಿವಿಧ ಮಹನೀಯರ ಜಯಂತಿ ಕಾರ್ಯಕ್ರಮಗಳನ್ನು ಶಿಷ್ಟಾಚಾರದನ್ವಯ ಅಚ್ಚುಕಟ್ಟಾಗಿ ಆಯೋಜಿಸುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಗುವುದು.

ವಿವಿಧ ಮಹನೀಯರ ಜಯಂತಿ ಕಾರ್ಯಕ್ರಮ ಆಚರಣೆ ಕುರಿತು ನಗರದ ಹಳೆಯ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಅಧಿಕಾರಿಗಳು, ಸಮುದಾಯದ ಮುಖಂಡರೊಂದಿಗೆ ಗುರುವಾರ ಏರ್ಪಡಿಸಿದ್ದ ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು.

ಸಹಾಯಕ ಆಯುಕ್ತ ರಾಜೇಶ್ ಹೆಚ್.ಡಿ ಅವರು ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಜಿಲ್ಲಾ ಕೇಂದ್ರದಲ್ಲಿ ಜಿಲ್ಲಾಡಳಿತದಿಂದ ಫೆ.15 ರಂದು ಸಂತ ಸೇವಾಲಾಲ್ ಜಯಂತಿ, ಫೆ.19 ರಂದು ಛತ್ರಪತಿ ಶಿವಾಜಿ ಜಯಂತಿ ಮತ್ತು ಫೆ.20 ರಂದು ಸಂತ ಕವಿ ಸರ್ವಜ್ಞ ಜಯಂತಿ ಕಾರ್ಯಕ್ರಮಗಳನ್ನು ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ಅಚ್ಚುಕಟ್ಟಾಗಿ ಆಯೋಜಿಸಲು ಬೇಕಾದ ಎಲ್ಲಾ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಅವರು ತಿಳಿಸಿದರು.

ಬ್ಯಾನರ್ ಅಳವಡಿಕೆಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಕಟ್ಟುನಿಟ್ಟಿನ ಸೂಚನೆಗಳಿದ್ದು, ಮಹಾನಗರ ಪಾಲಿಕೆಯಿಂದ ಅನುಮತಿ ಪಡೆಯಲೇ ಬೇಕು. ಡಿಜೆ ಧ್ವನಿವರ್ಧಕ ಬಳಕೆ, ಬೈಕ್ ರ‍್ಯಾಲಿಗೆ ಅವಕಾಶವಿಲ್ಲ. ಶಾಂತಿ–ಸುವ್ಯವಸ್ಥೆಗೆ ಧಕ್ಕೆಯಾಗದಂತೆ ಭಕ್ತಿ–ಭಾವದಿಂದ ಮಹನೀಯರ ಜಯಂತಿ ಆಚರಿಸೋಣ. ಇದಕ್ಕೆ ಎಲ್ಲರೂ ಸಹಕಾರ ನೀಡಬೇಕು ಎಂದರು.

ಶಿಷ್ಟಾಚಾರದಂತೆ ಆಹ್ವಾನ ಪತ್ರಿಕೆ ಮುದ್ರಿಸಿ ಗಣ್ಯರಿಗೆ, ಸಂಘ–ಸಂಸ್ಥೆಗಳಿಗೆ ವಿತರಿಸಿ ಕಾರ್ಯಕ್ರಮಕ್ಕೆ ಆಹ್ವಾನಿಸಬೇಕು. ಮಹನೀಯರ ಆಚಾರ–ವಿಚಾರಗಳನ್ನು ಪರಿಣಿತರಿಂದ ವಿಶೇಷ ಉಪನ್ಯಾಸ ಮೂಲಕ ತಲುಪಿಸಲು ಸಂಪನ್ಮೂಲ ವ್ಯಕ್ತಿಗಳನ್ನು ನಿಯೋಜಿಸಬೇಕು ಎಂದರು.

ಜಯಂತಿ ಕಾರ್ಯಕ್ರಮದ ಅಂಗವಾಗಿ ಮೆರವಣಿಗೆ ನಡೆಯಲಿದ್ದು, ಯಾವುದೇ ರೀತಿಯ ತೊಂದರೆಯಾಗದಂತೆ ನೋಡಿಕೊಳ್ಳಬೇಕು ಎಂದು ಪೊಲೀಸ್ ಅಧಿಕಾರಿಗಳಿಗೆ ನಿರ್ದೇಶನ ನೀಡಿದ ಅವರು, ಮೆರವಣಿಗೆಯಲ್ಲಿ ವಿವಿಧ ಸಾಂಸ್ಕೃತಿಕ ಕಲಾತಂಡಗಳನ್ನು ನಿಯೋಜಿಸಲಾಗುವುದು ಎಂದರು.

ವೇದಿಕೆ ಕಾರ್ಯಕ್ರಮದಲ್ಲಿ ಕುಡಿಯುವ ನೀರಿನ ವ್ಯವಸ್ಥೆ, ಸ್ವಚ್ಛತೆ ಕಾರ್ಯವನ್ನು ನಿರ್ವಹಿಸಬೇಕು ಎಂದು ಪಾಲಿಕೆ ಅಧಿಕಾರಿಗಳಿಗೆ ಸೂಚಿಸಿದರು.

ಜಯಂತಿ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸಿ, ಯಶಸ್ವಿಗೊಳಿಸಬೇಕು ಎಂದರು. ಇದೇ ವೇಳೆ ಸಮಾಜದ ಮುಖಂಡರು ಜಯಂತಿ ಕಾರ್ಯಕ್ರಮ ಯಶಸ್ವಿಗೆ ತಮ್ಮ ಸಲಹೆ–ಸೂಚನೆ ನೀಡಿದರು.

ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ, ಮಹಾನಗರ ಪಾಲಿಕೆ, ಪೊಲೀಸ್ ಅಧಿಕಾರಿಗಳು, ಡಿಡಿಪಿಐ, ಅಧಿಕಾರಿಗಳು ಸೇರಿದಂತೆ ಸಮಾಜದ ಮುಖಂಡರು ಉಪಸ್ಥಿತರಿದ್ದರು.

# ವಾಹನ ಚಾಲಕರು ರಸ್ತೆ ಸುರಕ್ಷತೆಗೆ ಮೊದಲ ಆದ್ಯತೆ ನೀಡಿ: ನ್ಯಾ. ದರಗದ

• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ:**



ವಾಹನಗಳ ವೇಗದ ಮಿತಿ, ಚಾಲನೆಯ ಇತಿಮಿತಿಗಳನ್ನು ಅರ್ಥ ಮಾಡಿಕೊಂಡು ಎಲ್ಲಾ ವಾಹನ ಚಾಲಕರು ರಸ್ತೆ ಸುರಕ್ಷತೆಗೆ ಮೊದಲ ಆದ್ಯತೆ ನೀಡಬೇಕೆಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಕೊಪ್ಪಳ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಮಹಾಂತೇಶ ಎಸ್. ದರಗದ ಹೇಳಿದರು.

ಅವರು ಮಂಗಳವಾರ ಕೊಪ್ಪಳ ನಗರದ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಪೊಲೀಸ್ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಪ್ರಾದೇಶಿಕ ಸಾರಿಗೆ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ ಕೊಪ್ಪಳ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಹಮ್ಮಿಕೊಂಡಿದ್ದ 37ನೇ ರಾಷ್ಟ್ರೀಯ ರಸ್ತೆ ಸುರಕ್ಷಿತಾ ಮಾಸಾಚರಣೆ–2026ರ ಸಮಾರೋಪ ಸಮಾರಂಭ ನೆರವೇರಿಸಿ ಮಾತನಾಡಿದರು.

ಪ್ರತಿಯೊಬ್ಬರು ಸಾರಿಗೆ, ಸಂಚಾರ ನಿಯಮಗಳನ್ನು ಅರಿತುಕೊಂಡು ಅವುಗಳನ್ನು ಅಳವಡಿಸಿಕೊಂಡು, ಕಟ್ಟು ನಿಟ್ಟಾಗಿ ಪಾಲಿಸಿದರೆ ರಸ್ತೆ ಸುರಕ್ಷತೆಯನ್ನು ಪರಿಣಾಮಕಾರಿಗೊಳಿಸಲು ಸಾಧ್ಯವಾಗಿದೆ. ಹಾಗಾಗಿ ವಾಹನ ಸವಾರರು ವೇಗದ ಮಿತಿ ಹಾಗೂ ಚಾಲನೆಯ ಇತಿಮಿತಿಗಳನ್ನು ತಿಳಿದುಕೊಳ್ಳಬೇಕು. ದ್ವಿಚಕ್ರ ವಾಹನ ಚಲಾಯಿಸುವಾಗ ಕಡ್ಡಾಯವಾಗಿ ಹೆಲ್ಮೆಟ್ ಧರಿಸುವುದು ಮತ್ತು ಕಾರು ಚಲಾಯಿಸುವಾಗ ಕಡ್ಡಾಯವಾಗಿ ಸೀಟ್ ಬೆಲ್ಟ್ ಧರಿಸಬೇಕು. ಇದರ ಜೊತೆಗೆ ವಾಹನ ಚಲಾಯಿಸುವಾಗ ಮೊಬೈಲ್ ಬಳಕೆ ಮಾಡದಿರುವುದು ಹಾಗೂ ಇತರೆ ಸುರಕ್ಷತಾ ಕ್ರಮಗಳ ಪಾಲನೆಯೊಂದಿಗೆ ಅನೇಕ ಅಪಘಾತಗಳನ್ನು ತಪ್ಪಿಸಬಹುದು ಎಂದರು.

ಕಾನೂನುಗಳು ಇರುವುದು ನಮ್ಮ ಸುರಕ್ಷತೆಗೆ. ನಾವೆಲ್ಲರೂ ಅವುಗಳನ್ನು ಪಾಲನೆ ಮಾಡಬೇಕು. 18 ವರ್ಷದೊಳಗಿನ ಮಕ್ಕಳಿಗೆ ದ್ವಿಚಕ್ರ ಸೇರಿದಂತೆ ಇತರೆ ಯಾವುದೇ ವಾಹನಗಳ ಚಾಲನೆಗೆ ಕೊಡಬಾರದು. ವಾಹನಗಳ ಮಾರಾಟ ಮಾಡಿದ ತಕ್ಷಣ ಅದನ್ನು ವಾಹನ ಖರೀದಿಸಿದವರ ಹೆಸರಿಗೆ ವರ್ಗಾಯಿಸಬೇಕು. ವಾಹನಗಳ ಸುಸ್ಥಿತಿ ಮತ್ತು ಅವುಗಳ ಮಾಲಿನ್ಯ ತಪಾಸಣೆಯಂತಹ ಕ್ರಮಗಳನ್ನು ಅನುಸರಿಸಬೇಕು. ರಸ್ತೆ ನಿಯಮಗಳನ್ನು ಪಾಲನೆ ಮಾಡುವುದರ ಮೂಲಕ ಅಪಘಾತಗಳನ್ನು ತಡೆಗಟ್ಟಬೇಕೆಂದು ಹೇಳಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಅನುಷ್ಠಾನಾಧಿಕಾರಿ ಡಾ. ರವೀಂದ್ರನಾಥ ಎಂ.ಎಚ್ ಅವರು ಮಾತನಾಡಿ, ವಾಹನ ಚಾಲಕರು ಸಂಚಾರ ನಿಯಮಗಳನ್ನು ಪಾಲಿಸುವುದು ಅತ್ಯವಶ್ಯಕವಾಗಿದೆ. ತೆರಳಬೇಕಾದ ಸ್ಥಳಕ್ಕೆ ನಿಗದಿತ ಅವಧಿಯೊಳಗೆ ತಲುಪಬೇಕೆಂಬ ಕಾರಣಕ್ಕೆ ಅತೀ ವೇಗವಾಗಿ ವಾಹನ ಚಾಲನೆ ಮಾಡಬಾರದು. ವಾಹನಗಳನ್ನು ನಿಧಾನವಾಗಿ ಜಾಗರೂಕತೆಯಿಂದ ಚಾಲನೆ ಮಾಡಬೇಕು. ನಿರ್ದಿಷ್ಟ ಸಮಯಕ್ಕೆ ತಲುಪಲು ಸ್ವಲ್ಪ ಮುಂಚಿತವಾಗಿ ಹೊರಡುವ ಮನೋಭಾವ ರೂಢಿಸಿಕೊಳ್ಳಬೇಕು. ರಸ್ತೆ ಸುರಕ್ಷತೆ ಬಗ್ಗೆ ವಾಹನಗಳ ಸುಸ್ಥಿತಿ, ವಾಹನ ಚಾಲನೆವೇಳೆ ಮದ್ಯ ಪಾನದ ಸೇವನೆ ಮಾಡದಿರುವುದು, ಮೊಬೈಲ್ ಬಳಕೆ ಮಾಡದಿರುವುದು ಮತ್ತು ಸರಿಯಾದ ಕ್ರಮದಲ್ಲಿ ವಾಹನಗಳ ಪಾರ್ಕಿಂಗ್ ಸೇರಿದಂತೆ ಇತರೆ ಸಂಚಾರಿ ನಿಯಗಳ ಬಗ್ಗೆ ಹೆಚ್ಚು ಜಾಗೃತಿ ಮೂಡಿಸಬೇಕು ಎಂದರು.

ಪ್ರಾದೇಶಿಕ ಸಾರಿಗೆ ಅಧಿಕಾರಿ ಪ್ರಭುಸ್ವಾಮಿ ಹಿರೇಮಠ ಅವರು ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿ, ಪ್ರತಿ ವರ್ಷದಂತೆ ಈ ವರ್ಷವು ಸಹ ಕೊಪ್ಪಳ ಜಿಲ್ಲೆಯಾದ್ಯಂತ ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸಾಚರಣೆಯನ್ನು ಹಮ್ಮಿಕೊಂಡು ರಸ್ತೆ ನಿಯಮಗಳ ಪಾಲನೆ ಮತ್ತು ಸುರಕ್ಷಿತ ವಾಹನಗಳ ಚಾಲನೆ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲಾಗಿದೆ. ರಸ್ತೆ ಅಫಘಾತಗಳನ್ನು ಸಾಧ್ಯವಾದಷ್ಟು ಕಡಿಮೆ ಮಾಡುವುದು ಹಾಗೂ ಸುರಕ್ಷಿತ ಚಾಲನೆ ಮೂಲಕ ವಾಹನಗಳ ಮತ್ತು ಅವುಗಳ ದಾಖಲೆಗಳನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳುವಂತೆ ಜನರಿಗೆ ಅರಿವು ಮೂಡಿಸುವುದು ಈ ಮಾಸಾಚರಣೆಯ ಮುಖ್ಯ ಉದ್ದೇಶವಾಗಿದೆ. ರಸ್ತೆ ಸುರಕ್ಷತಾ ನಿಯಮಗಳು ಇರುವುದು ನಮಗಾಗಿ, ಅವುಗಳನ್ನು ನಾವೆಲ್ಲರೂ ಪಾಲನೆ ಮಾಡಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಶಾಲಾ ಶಿಕ್ಷಣ ಇಲಾಖೆಯ ಎಪಿಸಿಒ ದುಂಡಪ್ಪಗೌಡ ಪಾಟೀಲ, ಪ್ರಾದೇಶಿಕ ಸಾರಿಗೆ ಇಲಾಖೆಯ ಹಿರಿಯ ಮೋಟಾರ ವಾಹನ ನಿರೀಕ್ಷಕರಾದ ಜಿ.ಎಂ ಸುರೇಶ್, ಪ್ರಭಾಕರ್ ಹಾಗೂ ವಿನಾಯಕ ನಾಯಕ, ಮೋಟಾರು ವಾಹನ ನಿರೀಕ್ಷಕರಾದ ವಿಜೇಂದ್ರ ಡವಳಗಿ, ಪಿ.ಮಂಜುನಾಥನ & ಆರ್.ಪ್ರದೀಪ್ ಕುಮಾರ್ ಸೇರಿದಂತೆ ಸಾರಿಗೆ ಇಲಾಖೆಯ ಇತರೆ ಅಧಿಕಾರಿ ಮತ್ತು ಸಿಬ್ಬಂದಿಗಳು, ಕೊಪ್ಪಳ ಜಿಲ್ಲೆಯ ಲಾರಿ, ಬಸ್, ಮ್ಯಾಕ್ಸಿ, ಕ್ಯಾಬ್, ಟ್ಯಾಕ್ಸಿ, ಆಟೋಗಳ ಚಾಲಕರು & ಮಾಲಕರ ಸಂಘದ ಪ್ರತಿನಿಧಿಗಳು, ವಾಹನ ತರಬೇತಿ ಶಾಲೆಯ ಮುಖ್ಯಸ್ಥರು, ಸಿಬ್ಬಂದಿ ಹಾಗೂ ವಿವಿಧ ವಾಹನಗಳ ಮಾರಾಟ ಸಂಸ್ಥೆಯ ಮತ್ತು ಇತರೆ ಸಂಸ್ಥೆಗಳ ಪ್ರತಿನಿಧಿಗಳು, ಸಾರ್ವಜನಿಕರು ಮತ್ತಿತರರು ಉಪಸ್ಥಿತರಿದ್ದರು. ಸುರೇಶ ಕುಂಬಾರ ಕಾರ್ಯಕ್ರಮ ನಿರೂಪಿಸಿದರು.

# ರಾಷ್ಟ್ರೀಯ ಲೋಕ ಅದಾಲತ್ ಹಿನ್ನೆಲೆಯಲ್ಲಿ ಪೂರ್ವಭಾವಿ ಸಭೆ

• **ಮಲ್ಲಮ್ಮ ನುಡಿ ವಾರ್ತೆ ಬೀದರ:**

ಮಾರ್ಚ.14 ರಂದು ರಾಷ್ಟ್ರೀಯ ಲೋಕ ಆದಾಲತನ್ನು ರಾಷ್ಟ್ರಾಧ್ಯಾಂತ ಹಮ್ಮಿಕೊಳ್ಳುತ್ತಿದ್ದು, ಈ ಹಿನ್ನೆಲೆಯಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಬೀದರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಜಿಲ್ಲೆಯ ಎಲ್ಲಾ ಇಲಾಖೆಯ ಅಧಿಕಾರಿಗಳೊಂದಿಗೆ 2026ನೇ ಫೆಬ್ರವರಿ. 5, 6, 7, 9, 10, 11, 12 ಹಾಗೂ 13 ರಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಬೀದರನ ಸಭಾಂಗಣದಲ್ಲಿ ರಾಷ್ಟ್ರೀಯ ಲೋಕ ಆದಾಲತನ ಪೂರ್ವಭಾವಿ ಸಭೆಯನ್ನು ಕರೆಯಲಾಗಿರುತ್ತದೆ.

ಆದ್ದರಿಂದ ಸದರಿ ದಿನಾಂಕದಂದು ನಿಗಧಿತ ಸಮಯಕ್ಕೆ ಸಂಬಂಧಿಸಿದ ಇಲಾಖೆಯ ಮುಖ್ಯಸ್ಥರು ಸಭೆಗೆ ತಪ್ಪದೇ ಭಾಗವಹಿಸಿ ಸಲಹೆ ಸೂಚನೆ ನೀಡಿ ಸಹಕರಿಸುವಂತೆ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಪ್ರಕಟಣೆಯ ಮೂಲಕ ಕೋರಿದ್ದಾರೆ.

# ಜೆಎಸ್‌ಡಬ್ಲ್ಯೂನಿಂದ ಗ್ರಾಮೀಣ ಕ್ರೀಡೆಗೆ ಪ್ರೋತ್ಸಾಹ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**



ವಿಜಯನಗರ ಜಿಲ್ಲೆ ಹೊಸಪೇಟೆ ತಾಲೂಕಿನ ಗಾದಿಗನೂರಿನಲ್ಲಿ ಶ್ರೀ ಗುರು ರೇವಣ್ಣ ಸಿದ್ದೇಶ್ವರ ಜಾತ್ರಾಮಹೋತ್ಸವದ ಅಂಗವಾಗಿ, ಗ್ರಾಮೀಣ ಯುವಕರಲ್ಲಿ ಕ್ರೀಡಾ ಮನೋಭಾವ ಬೆಳೆಸುವ ಹಾಗೂ ಆರೋಗ್ಯಕರ ಜೀವನಶೈಲಿಯನ್ನು ಉತ್ತೇಜಿಸುವ ಉದ್ದೇಶದಿಂದ ಕ್ರಿಕೆಟ್ ಪಂದ್ಯಾವಳಿಯನ್ನು ಗಾದಿಗನೂರು ಯೂತ್ ಕ್ಲಬ್ ಸ್ಥಳೀಯ ಸಮುದಾಯಗಳ ಸಹಯೋಗದೊಂದಿಗೆ ಜೆಎಸ್‌ಡಬ್ಲ್ಯೂ ಫೌಂಡೇಶನ್ ಆಯೋಜಿಸಿತ್ತು.

ಈ ಕ್ರಿಕೆಟ್ ಪಂದ್ಯಾವಳಿಯಲ್ಲಿ ಒಟ್ಟು 8 ತಂಡಗಳಿಂದ ಸುಮಾರು 120 ಗ್ರಾಮೀಣ ಯುವಕರು ಭಾಗವಹಿಸಿ ತಮ್ಮ ಕ್ರೀಡಾ ಪ್ರತಿಭೆಯನ್ನು ಪ್ರದರ್ಶಿಸಿದರು. ಫೈನಲ್ ಪಂದ್ಯದಲ್ಲಿ ಕೆಜಿಎಫ್ ಬಾಯ್ಸ್ ಗಾದಿಗನೂರ್ ತಂಡವು ಅತ್ಯುತ್ತಮ ಆಟ ಪ್ರದರ್ಶಿಸಿ ಪ್ರಥಮ ಬಹುಮಾನವನ್ನು ತನ್ನದಾಗಿಸಿಕೊಂಡರೆ, ಜಿಆರ್‌ಸಿ ಬಾಯ್ಸ್ ಗಾದಿಗನೂರ್ ತಂಡವು ದ್ವಿತೀಯ ಬಹುಮಾನಕ್ಕೆ ಪಾತ್ರವಾಯಿತು.

ಪಂದ್ಯಾವಳಿಗೆ ಜೆಎಸ್‌ಡಬ್ಲ್ಯೂ ಫೌಂಡೇಶನ್ ಟ್ರೋಫಿಗಳು, ಕಪ್ಗಳು ಹಾಗೂ ಪದಕಗಳನ್ನು ಒದಗಿಸುವ ಮೂಲಕ ಕ್ರೀಡಾಕೂಟದ ಯಶಸ್ಸಿಗೆ ಮಹತ್ವದ ಕೊಡುಗೆ ನೀಡಿತು. ಇದರಿಂದ ಆಟಗಾರರ ಉತ್ಸಾಹ ಮತ್ತು ಆತ್ಮವಿಶ್ವಾಸ ಇನ್ನಷ್ಟು ಹೆಚ್ಚಾಯಿತು.

ಬಹುಮಾನ ವಿತರಣಾ ಸಮಾರಂಭದಲ್ಲಿ ಗಾದಿಗನೂರ್ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶಂಕ್ರಪ್ಪ ನಿಂಗಮ್ಮ ಹಾಗೂ ಜೆಎಸ್‌ಡಬ್ಲ್ಯೂ ಫೌಂಡೇಶನ್ ಕ್ರೀಡಾ ಅಧಿಕಾರಿ ಮಹಮ್ಮದ್ ರಫೀಕ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ವಿಜೇತ ಹಾಗೂ ರನ್ನಪ್ ತಂಡಗಳಿಗೆ ಟ್ರೋಫಿಗಳು, ಕಪ್ಗಳು ಮತ್ತು ಪದಕಗಳನ್ನು ಹಸ್ತಾಂತರಿಸಿದರು.

ಈ ರೀತಿಯ ಕ್ರೀಡಾ ಉಪಕ್ರಮಗಳು ಗ್ರಾಮೀಣ ಪ್ರದೇಶದ ಯುವಕರಲ್ಲಿ ಕ್ರೀಡೆಗಳತ್ತ ಆಸಕ್ತಿ ಮೂಡಿಸುವುದರ ಜೊತೆಗೆ, ಶಿಸ್ತು, ತಂಡಭಾವನೆ ಹಾಗೂ ಆರೋಗ್ಯಕರ ಜೀವನಶೈಲಿಯನ್ನು ಬೆಳೆಸಲು ಸಹಕಾರಿಯಾಗಿವೆ ಎಂದು ಸ್ಥಳೀಯರು ಅಭಿಪ್ರಾಯ ವ್ಯಕ್ತಪಡಿಸಿದರು.

# ಪಂಚ ಗ್ಯಾರಂಟಿ ಯೋಜನೆಗಳಿಂದ ಜನರ ಕಲ್ಯಾಣ: ಪಿಡಿಓ ನಶ್ರದ್ ಬಾನು

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ರಾಜ್ಯ ಸರ್ಕಾರ ಜಾರಿಗೊಳಿಸಿದ ಪಂಚ ಗ್ಯಾರಂಟಿ ಯೋಜನೆಗಳಿಂದ ಜನರ ಕಲ್ಯಾಣವಾಗುತ್ತಿದೆ ಎಂದು ಶಿಡಗಿನಮೊಳ ಗ್ರಾಮಪಂಚಾಯತ್ ನ ಪಂಚಾಯತ್ ಅಭಿವೃದ್ಧಿ ಅಧಿಕಾರಿ ನಶ್ರದ್ ಬಾನು ಅವರು ಹೇಳಿದರು.

ಬಳ್ಳಾರಿ ತಾಲ್ಲೂಕಿನ ಮೀನಳ್ಳಿ ಗ್ರಾಮದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಕ್ಷೇತ್ರ ಪ್ರಚಾರ ಕಾರ್ಯಕ್ರಮದಡಿ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳು ಸೇರಿದಂತೆ ವಿವಿಧ ಯೋಜನೆಗಳ ಕುರಿತು ಜಾನಪದ ಸಂಗೀತ ಮೂಲಕ ಅರಿವು ಮೂಡಿಸುವ ಕಾರ್ಯಕ್ರಮಕ್ಕೆ ಮಂಗಳವಾರ ಚಾಲನೆ ನೀಡಿ ಅವರು ಮಾತನಾಡಿದರು.

ರಾಜ್ಯ ಸರ್ಕಾರ ಪಂಚ ಗ್ಯಾರಂಟಿಗಳ ಜೊತೆಗೆ ಹಲವಾರು ಅಭಿವೃದ್ಧಿ ಯೋಜನೆ ಹಾಗೂ ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ. ಸಾರ್ವಜನಿಕರು ಅವುಗಳ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಅಕ್ಷಯ ಕಲಾ ಟ್ರಸ್ಟ್ ಹೊಸ ಯರಗುಡಿ ತಂಡವು ರಾಜ್ಯ ಸರ್ಕಾರದ ಯೋಜನೆಗಳನ್ನು ಜಾನಪದ ಸಂಗೀತ ಕಾರ್ಯಕ್ರಮದ ಮೂಲಕ ಅರಿವು ಮೂಡಿಸಿದರು.

ಈ ಸಂದರ್ಭದಲ್ಲಿ ಶಿಡಗಿನಮೊಳ ಗ್ರಾಪಂ ಅಧ್ಯಕ್ಷರಾದ ಸುಜಾತ ತಾಯಣ್ಣ, ಉಪಾಧ್ಯಕ್ಷ ಮಹಾನಂದಿ ತಿಮ್ಮಯ್ಯ, ಅಂಗನವಾಡಿ ಕಾರ್ಯಕರ್ತೆ ವರಲಕ್ಷ್ಮಿ, ಅಕ್ಷಯ ಕಲಾ ಟ್ರಸ್ಟ್ ನ ಅಧ್ಯಕ್ಷ ಹಾಗೂ ಕಲಾವಿದ ಹೆಚ್.ಜಿ.ಸುಂಕಪ್ಪ, ಕಲಾವಿದರಾದ ಸರ್ವಮಂಗಳಮ್ಮ, ಪಾರ್ವತಿ, ದೇವೇಂದ್ರಪ್ಪ, ತಮಟೆ ವಾದಕರಾಗಿ ಸೋಮಶೇಖರ್, ನಾಗಮೂರ್ತಿ ಸೇರಿದಂತೆ ಗ್ರಾಮದ ಸಾರ್ವಜನಿಕರು ಇದ್ದರು.

# ಲಾಡ್ ಸಾರ್ವಜನಿಕ ಕ್ಷಮೆ ಯಾಚಿಸಬೇಕು




• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ :**

ವಿಧಾನಸಭಾ ಸದಸ್ಯರಾದ ಶ್ರೀ ಸಂತೋಷ್ ಲಾಡ್ ಅವರು ವಿಧಾನಸಭಾ ಆವರಣದಲ್ಲಿ ಅಧಿವೇಶನದ ವೇಳೆ ಮಾಧ್ಯಮಗಳ ಮುಂದೆ ಸವಿತಾ ಸಮಾಜಕ್ಕೆ ಸಂಬಂಧಿಸಿದ ನಿಷೇಧಿತ ಜಾತಿ ಪದವನ್ನು ಬಳಸಿರುವುದು ಖಂಡನೀಯ ಎಂದು ಸವಿತಾ ಸಮಾಜದ ಮುಖಂಡರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರಿಗೆ (ಬಳ್ಳಾರಿ ಜಿಲ್ಲಾಧಿಕಾರಿಗಳ ಮುಖಾಂತರ) ಸಲ್ಲಿಸಿದ ಮನವಿಯಲ್ಲಿ, ಕೇಂದ್ರ ಸರ್ಕಾರದ ಬಜೆಟ್ ಕುರಿತು ವ್ಯಂಗ್ಯವಾಗಿ ಮಾತನಾಡುವ ಸಂದರ್ಭದಲ್ಲಿ ಸಮಾಜವನ್ನು ಅವಹೇಳನ ಮಾಡುವ ಪದ ಬಳಕೆ ಮಾಡಿರುವುದು ನಮ್ಮ ಸಮಾಜಕ್ಕೆ ತೀವ್ರ ನೋವುಂಟು ಮಾಡಿದೆ ಎಂದು ತಿಳಿಸಲಾಗಿದೆ. ಶತಶತಮಾನಗಳಿಂದ ಕ್ಷೌರಿಕ ವೃತ್ತಿಯೊಂದಿಗೆ ವಾದ್ಯ, ಬ್ಯಾಂಡ್ ಹಾಗೂ ನಾಟಿ ವೈದ್ಯ ಪದ್ಧತಿಗಳನ್ನು ಅನುಸರಿಸುತ್ತಾ ಎಲ್ಲಾ ಜಾತಿ ಧ ರ್ಮದ ಜನರಿಗೆ ಸೇವೆ ಸಲ್ಲಿಸುತ್ತಾ ಬಂದಿರುವ ಸವಿತಾ ಸಮಾಜ ನಿರಂತರವಾಗಿ ಜಾತಿ ನಿಂದನೆ ಹಾಗೂ ಶೋಷಣೆಗೆ ಒಳಗಾಗುತ್ತಿದೆ. ಜಾತಿ ನಿಂದನಾ ಪದಗಳನ್ನು ನಿಷೇಧಿಸಿ ದಶಮಾನೋತ್ಸವ ಆಚರಿಸುತ್ತಿರುವ ಈ ಕಾಲಘಟ್ಟದಲ್ಲೂ ಇಂತಹ ಘಟನೆಗಳು ಮರುಕಳಿಸುತ್ತಿರುವುದು ದುರಂತಕರ ಸಂಗತಿಯಾಗಿದೆ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಈ ಹಿಂದೆಯೂ ಹಲವಾರು ಜನಪ್ರತಿನಿಧಿಗಳು ಜಾತಿ ನಿಂದನಾ ಪದ ಬಳಸಿದ ಸಂದರ್ಭಗಳಲ್ಲಿ ಸಮಾಜ ಹೋರಾಟ ನಡೆಸಿದ್ದರೂ ಇಂತಹ ಘಟನೆಗಳು ಮತ್ತೆ ನಡೆಯುತ್ತಿರುವುದು ಕಳವಳಕಾರಿಯಾಗಿದೆ. ಇದಕ್ಕೆ ಕಡಿವಾಣ ಹಾಕಲು ಸರ್ಕಾರವೇ ಜವಾಬ್ದಾರಿಯುತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಲಾಗಿದೆ. ಶಾಸಕ ಸಂತೋಷ್ ಲಾಡ್ ಅವರು ತಕ್ಷಣವೇ ಸಾರ್ವಜನಿಕವಾಗಿ ಕ್ಷಮೆಯಾಚಿಸಬೇಕು. ಇಲ್ಲದಿದ್ದರೆ ರಾಜ್ಯವ್ಯಾಪಿ ಉಗ್ರ ಹೋರಾಟ ನಡೆಸುವ ಅನಿವಾರ್ಯ ಪರಿಸ್ಥಿತಿ ಉಂಟಾಗಲಿದೆ ಎಂದು ಎಚ್ಚರಿಕೆ ನೀಡಲಾಗಿದೆ. ಜೊತೆಗೆ, ಜವಾಬ್ದಾರಿಯುತ ಸ್ಥಾನದಲ್ಲಿರುವವರು ಯಾವುದೇ ಸಮಾಜವನ್ನು ಅವಹೇಳನ ಮಾಡಿದರೆ ಕಠಿಣ ಶಿಕ್ಷೆಗೆ ಒಳಪಡುವಂತಹ ಕಾನೂನು ಜಾರಿಗೆ ತರಬೇಕೆಂದು ಸರ್ಕಾರವನ್ನು ಆಗ್ರಹಿಸಲಾಗಿದೆ.

ಈ ಸಂದರ್ಭದಲ್ಲಿ ತಿಪ್ಪಣ್ಣ, ನಾರಾಯಣಸ್ವಾಮಿ, ಶೇಖಣ್ಣ, ವೆಂಕಟೇಶ್, ತಿಪ್ಪೇಸ್ವಾಮಿ, ಉಮೇಶ್, ದೇವಣ್ಣ, ರವಿ, ಕೃಷ್ಣಮೂರ್ತಿ, ಬಾಲಕೃಷ್ಣ, ಅನಿಲ್, ರಾಮು ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಫೆ.13 ರಂದು ಪಿಂಚಣಿ ಅದಾಲತ್

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಕಾರ್ಮಿಕರ ಭವಿಷ್ಯ ನಿಧಿ ಸಂಸ್ಥೆಯ ಬಳ್ಳಾರಿ ಪ್ರಾದೇಶಿಕ ಕಚೇರಿ ವತಿಯಿಂದ ಪಿಂಚಣಿದಾರರ ಕುಂದು ಕೊರತೆ ಆಲಿಸಿ, ಪರಿಹರಿಸಲು ಫೆಬ್ರವರಿ 13 ರಂದು ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 01 ಗಂಟೆಯವರೆಗೆ ನಗರದ ಪ್ರಾದೇಶಿಕ ಕಚೇರಿಯಲ್ಲಿ ಪಿಂಚಣಿ ಅದಾಲತ್ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಪ್ರಾದೇಶಿಕ ಕಚೇರಿಯ ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತ ಕೆ.ವಿ ಪ್ರವೀಣ್ ಅವರು ತಿಳಿಸಿದ್ದಾರೆ.

ಬಳ್ಳಾರಿ, ವಿಜಯನಗರ, ಕೊಪ್ಪಳ, ಚಿತ್ರದುರ್ಗ ಜಿಲ್ಲೆಗಳ ಪಿಂಚಣಿದಾರರು ತಮ್ಮ ಕುಂದುಕೊರತೆಗಳಿದ್ದಲ್ಲಿ ಬಳ್ಳಾರಿ ಪ್ರಾದೇಶಿಕ ಕಚೇರಿಯ ಸಾರ್ವಜನಿಕ ಸಂಪರ್ಕ ಅಧಿಕಾರಿಗೆ ಪತ್ರ ಅಥವಾ ಇ-ಮೇಲ್ ಮೂಲಕ ಪಿ.ಪಿ.ಒ ಸಂಖ್ಯೆ, ವಿಳಾಸ, ದೂರವಾಣಿ, ಮೊಬೈಲ್ ಸಂಖ್ಯೆ ಮತ್ತು ಕುಂದು ಕೊರತೆಯ ಸ್ವರೂಪ ಹಾಗೂ ಇತ್ಯಾದಿಗಳನ್ನು ಅಂಚೆ ಪತ್ರದ ಮೂಲಕ ಫೆಬ್ರವರಿ 10 ರೊಳಗಾಗಿ ತಿಳಿಸಬಹುದು. ಪತ್ರ ಲಕೋಟೆ ಮೇಲೆ ಪಿಂಚಣಿ ಅದಾಲತ್ ಎಂದು ಬರೆಯಬೇಕು.

ಹೆಚ್ಚಿನ ಮಾಹಿತಿಗಾಗಿ ದೂ.08392-268943 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಿ.ಇಡಿ ಫಲಿತಾಂಶ ಒಂದು ದಿನದಲ್ಲಿ ಪ್ರಕಟ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಇಲ್ಲಿಯ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯವು ಬಿ.ಇಡಿ ಪದವಿಯ ಮೌಲ್ಯಮಾಪನ ಮುಗಿದ ಒಂದು ದಿನದಲ್ಲಿ ಪರೀಕ್ಷಾ ಫಲಿತಾಂಶವನ್ನು ಘೋಷಿಸಿ ಐತಿಹಾಸಿಕ ಸಾಧನೆ ಮೆರೆದಿದೆ.

ಕಳೆದ ತಿಂಗಳು ಮುಕ್ತಾಯಗೊಂಡಿದ್ದ ಎರಡನೇ ಮತ್ತು ನಾಲ್ಕನೇ ಸೆಮಿಸ್ಟರ್‌ನ ಬಿ.ಇಡಿ ಪದವಿ ಮೌಲ್ಯಮಾಪನವನ್ನು ಸತತ 10 ದಿನಗಳಲ್ಲಿ ಪೂರೈಸಿ ಫಲಿತಾಂಶವನ್ನು ಯುಯುಸಿಎಂಎಸ್‌ನಲ್ಲಿ ಗುರುವಾರ ಪ್ರಕಟಿಸಿದೆ. ವಿವಿ ಅಧೀನದಲ್ಲಿರುವ 14 ಕಾಲೇಜುಗಳ ಸುಮಾರು 2,500 ವಿದ್ಯಾರ್ಥಿಗಳು ಪರೀಕ್ಷೆ ಎದುರಿಸಿದ್ದರು. ಅವರು ಬರೆದಿದ್ದ 15,000 ಉತ್ತರ ಪತ್ರಿಕೆಗಳನ್ನು ಬಿ.ಇಡಿ ಕೋರ್ಸಿನ 42 ಮೌಲ್ಯಮಾಪಕರು ಎಡೆಬಿಡದೆ ಮೌಲ್ಯಮಾಪನ ನಡೆಸಿದ್ದರು.

ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಂ ಮುನಿರಾಜು ಅವರು ವಿಶ್ವವಿದ್ಯಾಲಯದ ಇತಿಹಾಸದಲ್ಲೇ ಇದೊಂದು ಮೈಲಿಗಲ್ಲಾಗಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಶೀಘ್ರ ಫಲಿತಾಂಶ ಪ್ರಕಟಿಸಲು ಆದ್ಯ ಕ್ರಮಗಳನ್ನು ವಿಶ್ವವಿದ್ಯಾಲಯವು ತೆಗೆದುಕೊಂಡಿದೆ ಎಂದು ತಿಳಿಸಿದ್ದಾರೆ.

ಪರೀಕ್ಷಾಂಗ ಕುಲಸಚಿವ ಪ್ರೊ.ಎನ್ ಎಂ ಸಾಲಿ ಅವರು ಫಲಿತಾಂಶ ಪ್ರಕಟಿಸಲು ಮಾರ್ಗದರ್ಶನ ನೀಡಿರುವ ಕುಲಪತಿಗಳಿಗೆ, ಮೌಲ್ಯಮಾಪನ ಮೇಲ್ವಿಚಾರಕರಿಗೆ, ಮೌಲ್ಯಮಾಪಕರಿಗೆ, ಕಚೇರಿ ಸಿಬ್ಬಂದಿಗೆ ಅಭಿನಂದಿಸಿದ್ದಾರೆ.

ಬಿ.ಇಡಿ ಪದವಿಯ ಪರೀಕ್ಷಾ ಫಲಿತಾಂಶಗಳನ್ನು ತುರ್ತಾಗಿ ಪ್ರಕಟಿಸಲು ಮುತುವರ್ಜಿ ವಹಿಸಿ ನಿಭಾಯಿಸಿದ ವಿವಿಯ ಕುಲಪತಿಗಳಿಗೆ ಮತ್ತು ಪರೀಕ್ಷಾಂಗ ಕುಲಸಚಿವರಿಗೆ ವಿಶ್ವವಿದ್ಯಾಲಯದ ಆಡಳಿತಾಧಿಕಾರಿ ಪ್ರೊ.ತಿಪ್ಪೇರುದ್ರಪ್ಪ ಜೆ., ವಿತ್ತಾಧಿಕಾರಿ ನಾಗರಾಜ ಮತ್ತು ವಿಶ್ವವಿದ್ಯಾಲಯದ ಎಲ್ಲ ನಿಕಾಯಗಳ ಡೀನರು, ವಿಭಾಗಗಳ ಮುಖ್ಯಸ್ಥರು, ಬೋಧಕ-ಬೋಧಕೇತರ ಸಿಬ್ಬಂದಿ ಅಭಿನಂದನೆ ತಿಳಿಸಿದ್ದಾರೆ.

# ರೆಡ್ಡಿಯವರಿಂದ ಬೀದಿ ಬದಿ ವ್ಯಾಪಾರಿಗೆ ನೆರವು




• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ನಗರದ ಬೀದಿ ಬದಿ ವ್ಯಾಪಾರಿ ಚಿರಂಜೀವಿ (ಗಾದಿಲಿಂಗಪ್ಪ) ಅವರ ನೂತನ ಗೂಡಂಗಡಿಯನ್ನು ಮಾಜಿ ಮೇಯರ್, ಪಾಲಿಕೆಯ ಸದಸ್ಯೆ ಎಂ.ರಾಜೇಶ್ವರಿ ಅವರು ಗುರುವಾರ ಬಂಡಿಹಟ್ಟಿಯ ಕಾಲುವೆ ಬಳಿ ಉದ್ಘಾಟಿಸಿದರು.

ಕಾಂಗ್ರೆಸ್ ಕಾರ್ಯಕರ್ತರೂ ಆಗಿರುವ ಚೀರಂಜೀವಿ ಅವರ ಈ ಬೀದಿ ಬದಿ ಗೂಡಂಗಡಿ ಇಡಲು ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿಯವರು 50 ಸಾವಿರ ರೂ.ಗಳ ನೆರವು ನೀಡಿದ್ದಾರೆ ಎಂದು ಅವರು ತಿಳಿಸಿದರು. ತಮ್ಮ ಬೇಡಿಕೆಗೆ ಸ್ಪಂದಿಸಿದ ಶಾಸಕರ ಹಾಗೂ ಮಾಜಿ ಮೇಯರ್ ರಾಜೇಶ್ವರಿ ಅವರಿಗೆ ಚಿರಂಜೀವಿ ಧನ್ಯವಾದ ಸಲ್ಲಿಸಿದ್ದಾರೆ. ಗೂಡಂಗಡಿ ಉದ್ಘಾಟನೆ ಸಂದರ್ಭ ಗಾದಿಲಿಂಗ, ಮಂಜು ಹಾಗೂ ಯುವ ಮುಖಂಡ ಯೋಗಾನಂದ ರೆಡ್ಡಿ ಸೇರಿದಂತೆ ಹಲವರು ಹಾಜರಿದ್ದರು.

# ಗಾಳಿ ಇಲ್ಲ ಮಳೆ ಇಲ್ಲ ಮರ ಬಿತ್ತು



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಜೋರಾದ ಮಳೆ ಗಾಳಿ ಇಲ್ಲದಿದ್ದರೂ ನಗರದ ಹಳೇ ತಹಶಿಲ್ದಾರರ ಕಚೇರಿ ಆವರಣದೊಳಗಿದ್ದ ಮರವೊಂದು ಇಂದು ಅಕಸ್ಮಿಕವಾಗಿ ಬಿದ್ದಿತು. ಇದರಿಂದ ಯಾವುದೇ ಹಾನಿಯಾಗಿಲ್ಲ.

ಅಲ್ಲಿಯೇ ಅನೇಕ ಜನ ಟೀ ಕುಡಿಯುತ್ತಿದ್ದರು. ಅನತಿದೂರದಲ್ಲಿನ ಮರ ಬೀಳುತ್ತಿದ್ದುದನ್ನು ಕಂಡು ಬೆರಗಾದರು. ಆದರೆ ಯಾರಿಗೂ ತೊಂದರೆಯಾಗಲಿಲ್ಲ. ಮರ ಬಿದ್ದ ರಭಸಕ್ಕೆ ವಿದ್ಯುತ್ ಕಂಬದ ವೈರ್ ಗಳು ಕಿತ್ತು ಕೊಂಡು ಹೋದವು

ಘಟನೆ ಬಳಿಕ ಸಾರ್ವಜನಿಕರಲ್ಲಿ ಕೆಲಕಾಲ ಆತಂಕ ಉಂಟಾಯಿತು. ಮಾಹಿತಿ ತಿಳಿದ ತಕ್ಷಣ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಮರವನ್ನು ತೆರವು ಗೊಳಿಸುವ ಕಾರ್ಯ ನಡೆಸಿದರು ವಾಹನ ಸಂಚಾರಕ್ಕೆ ಅಲ್ಪ ಕಾಲ ಅಡಚಣೆ ಉಂಟಾಗಿತ್ತು.

# ಶಿಕ್ಷಣವೇ ಮಹಿಳೆಯರ ಶಕ್ತಿ ಯಶಸ್ವಿ ಬದುಕಿಗೆ ಶಿಕ್ಷಣವೇ ಮಾರ್ಗದರ್ಶಿ: ಚೌಧರಿ

• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ:**



ಅರಿವೇ ಬದುಕು, ಅಜ್ಞಾನವೇ ಸಾವು ಎಂಬ ಮಾತಿನಂತೆ ಶಿಕ್ಷಣದಿಂದ ಮಾತ್ರ ನಮಗೆ ಪ್ರಪಂಚ ಜ್ಞಾನ ಬೆಳೆಯಲು ಸಾಧ್ಯ. ಶಿಕ್ಷಣವನ್ನು ಶಕ್ತಿಯಾಗಿಸಿಕೊಂಡು ಪರಿಶ್ರಮದಿಂದ ಯಶಸ್ವಿಯಾಗಬಹುದು. ಮಹಿಳೆಯರು ಸುಶಿಕ್ಷಿತರಾಗಲೇಬೇಕು ಎಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾದ ಡಾ.ನಾಗಲಕ್ಷ್ಮೀ ಚೌಧರಿ ಅವರು ವಿದ್ಯಾರ್ಥಿನಿಯರಿಗೆ ತಿಳಿಸಿದರು.

ಗುರುವಾರದಂದು ಜಿಲ್ಲಾಡಳಿತ ಭವನದ ಆಡಿಟೋರಿಯಂ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪೊಲೀಸ್ ಇಲಾಖೆ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೊಪ್ಪಳ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ಆಯೋಗದ ಅಧ್ಯಕ್ಷರು ಹಾಗೂ ಜಿಲ್ಲೆಯ ಕಾಲೇಜು ವಿದ್ಯಾರ್ಥಿನಿಯರೊಂದಿಗಿನ ಸಂವಾದ ಕಾರ್ಯಕ್ರಮವನ್ನು ಉದ್ದೇಶಿಸಿ ಅವರು ಮಾತನಾಡಿದರು.

ಶಿಕ್ಷಣ ನಮಗೆ ಜ್ಞಾನವನ್ನು ನೀಡುತ್ತದೆ. ಪ್ರಪಂಚದ ಆಗುಹೋಗುಗಳನ್ನು ಪರಿಚಯಿಸುತ್ತದೆ. ನಮ್ಮ ಹಕ್ಕುಗಳು, ಕರ್ತವ್ಯ, ಜವಾಬ್ದಾರಿಯ ಬಗ್ಗೆ ತಿಳಿಸುತ್ತದೆ. ಭವಿಷ್ಯಕ್ಕೆ ಮಾರ್ಗದರ್ಶಿಯಾಗಿರುತ್ತದೆ. ಆದ್ದರಿಂದ ಪ್ರತಿಯೊಬ್ಬ ಮಹಿಳೆಯರೂ ಕಡ್ಡಾಯವಾಗಿ ಶಿಕ್ಷಣವನ್ನು ಪಡೆಯಲೇಬೇಕು. ಶಿಕ್ಷಣವನ್ನು ಶಕ್ತಿಯಾಗಿ ಬಳಸಿಕೊಳ್ಳಬೇಕು. ಓದುವ ವಯಸ್ಸಿನಲ್ಲಿ ಅನಗತ್ಯ ಆಕರ್ಷಣೆ, ಆಮಿಷಕ್ಕೆ ಒಳಗಾಗದೇ ಶಿಕ್ಷಣಕ್ಕೆ ಮಾತ್ರ ಆದ್ಯತೆ ನೀಡಿ, ಪರಿಶ್ರಮದಿಂದ ಬದುಕಲ್ಲಿ ಯಶಸ್ವಿಯಾಗಬೇಕು. ಯಶಸ್ಸಿಗೆ ಯಾವುದೇ ಅಡ್ಡದಾರಿಗಳಿಲ್ಲ. ನಮ್ಮ ಶ್ರಮ ಮತ್ತು ಶ್ರದ್ಧೆಯೇ ಯಶಸ್ಸಿನ ಮೂಲಮಂತ್ರ ಎಂದು ಅವರು ವಿದ್ಯಾರ್ಥಿನಿಯರಿಗೆ ತಿಳಿಸಿದರು.

ಪ್ರಸ್ತುತ ದಿನಗಳಲ್ಲಿ ಚಿಕ್ಕಮಕ್ಕಳಿಂದ ವೃದ್ಧರವರೆಗೂ ಅತ್ಯಂತ ಆಕರ್ಷಿತ ಮಾಧ್ಯಮವೆಂದರೆ ಇನ್‌ಸ್ಟಾಗ್ರಾಂ, ಫೇಸ್‌ಬುಕ್, ವಾಟ್ಸಪ್ ನಂತಹ ಸಾಮಾಜಿಕ ಮಾಧ್ಯಮಗಳು ಹಾಗೂ ರೀಲ್ಸ್‌ಗಳು. ಮಹಿಳೆಯರು ಭಾವನಾತ್ಮಕ ಜೀವಿಗಳಾದ್ದರಿಂದ ವಂಚಕರು ಇಂತಹ ಸಾಮಾಜಿಕ ಮಾಧ್ಯಮಗಳನ್ನು ದಾಳವಾಗಿಸಿಕೊಂಡು ಅಮಾಯಕ ಹುಡುಗಿಯರನ್ನು, ಮಹಿಳೆಯರನ್ನು ತಮ್ಮ ಬಲೆಗೆ ಬೀಳಿಸಿಕೊಂಡು, ನಂಬಿಸಿ, ಮೋಸ ಮಾಡುತ್ತಾರೆ. ಕೆಲ ಸಂದರ್ಭಗಳಲ್ಲಿ ಬ್ಲಾಕ್‌ಮೇಲ್ ಮಾಡಿ, ಹುಡುಗಿಯರನ್ನು ತಮ್ಮ ಇಷ್ಟದಂತೆ ಬಳಸಿಕೊಳ್ಳುತ್ತಾರೆ. ಇದರಿಂದ ಮೋಸ ಹೋದ ಹುಡುಗಿಯರು, ಮಹಿಳೆಯರು ಬೇಸತ್ತು ಜೀವವನ್ನೇ ಕಳೆದುಕೊಳ್ಳುತ್ತಾರೆ. ಆದ್ದರಿಂದ ಪ್ರತಿಯೊಬ್ಬರೂ ಸಾಮಾಜಿಕ ಮಾಧ್ಯಮಗಳನ್ನು ಬಳಸುವಾಗ ಅತ್ಯಂತ ಎಚ್ಚರಿಕೆ ವಹಿಸಬೇಕು. ಅಪರಿಚಿತ ವ್ಯಕ್ತಿಯಿಂದ ಬರುವ ಸ್ನೇಹದ ಪ್ರಸ್ತಾಪಗಳನ್ನು ಒಪ್ಪಿಕೊಳ್ಳಬಾರದು, ಅಪರಿಚಿತರೊಂದಿಗೆ ಅನಗತ್ಯ ಸಂಪರ್ಕ ಬೆಳೆಸಬಾರದು. ಇಂದಿನ ಇಂಟರ್‌ನೆಟ್, ಸಾಮಾಜಿಕ ಮಾಧ್ಯಮಗಳ ಶಕ್ತಿಯನ್ನು ನಿಮ್ಮ ಶಿಕ್ಷಣಕ್ಕೆ, ಭವಿಷ್ಯಕ್ಕೆ ಪೂರಕವಾಗುವಂತೆ ಸಕಾರಾತ್ಮಕವಾಗಿ ಬಳಸಿಕೊಳ್ಳಿ. ಒಂದು ವೇಳೆ ಸೈಬರ್ ವಂಚನೆಗೆ ಒಳಗಾದಲ್ಲಿ ಸೈಬರ್ ಸಹಾಯವಾಣಿ ಸಂಖ್ಯೆ 1930 ಗೆ ಸಂಪರ್ಕಿಸಿ, ದೂರು ದಾಖಲಿಸಿ, ಸಮಸ್ಯೆಗೆ ಪರಿಹಾರ ಕಂಡುಕೊಳ್ಳಿ, ಮಕ್ಕಳ ಸಹಾಯವಾಣಿ 1098 ಗೆ ಅಥವಾ ಪೊಲೀಸ್ ಇಲಾಖೆ ಸಹಾಯವಾಣಿ ಸಂಖ್ಯೆ 112 ಗೆ ಕರೆ ಮಾಡಿ ಸಹಾಯ ಪಡೆದುಕೊಳ್ಳಬಹುದು ಎಂದು ವಿದ್ಯಾರ್ಥಿನಿಯರಿಗೆ ಮಾಹಿತಿ ನೀಡಿದರು. ಸಂವಿಧಾನ ನಮಗೆ ಹಕ್ಕುಗಳನ್ನು ನೀಡಿದೆ. ಆದರೆ ಅವುಗಳನ್ನು ಬಳಸಿಕೊಳ್ಳುವ ಜ್ಞಾನ ನಮಗಿಲ್ಲ. ಆದ್ದರಿಂದ ಪ್ರತಿಯೊಬ್ಬರೂ ಸಂವಿಧಾನವನ್ನು ಅರಿತುಕೊಳ್ಳಬೇಕು. ಅಗತ್ಯ ಮೂಲಸೌಕರ್ಯಗಳನ್ನು ಪಡೆಯುವುದು ಪ್ರತಿಯೊಬ್ಬರ ಹಕ್ಕು. ಆದ್ದರಿಂದ ನಿಮ್ಮ ಹಕ್ಕುಗಳಿಗಾಗಿ ಹೋರಾಡಿ. ಅನ್ಯಾಯವಾದಾಗ ಪ್ರತಿಭಟಿಸುವ ಧೈರ್ಯ ಬೆಳೆಸಿಕೊಳ್ಳಿ.

# ಆರ್.ಬಿ.ವೈ.ಎಂ ಕಾಲೇಜ್ ನಲ್ಲಿ ರಸ್ತೆ ಸುರಕ್ಷತಾ ಬೂಟ್ಕ್ಯಾಂಪ್ ಕಾರ್ಯಕ್ರಮ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**



ನಗರದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ರಾವ್ ಬಹದ್ದೂರ್ ವೈ ಮಹಾಬಲೇಶ್ವರಪ್ಪ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಕೃತಕ ಬುದ್ಧಿಮತ್ತೆ ಮತ್ತು ಯಂತ್ರಕಲಿಕೆ (ಆರ್ಟಿಫಿಷಿಯಲ್ ಇಂಟೆಲಿಜೆಂಸ್ ಅಂಡ್ ಮೆಷಿನ್ ಲರ್ನಿಂಗ್) ವಿಭಾಗವು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಲ್ಲಿ ಸುರಕ್ಷಿತ ರಸ್ತೆ ಅಭ್ಯಾಸಗಳು ಮತ್ತು ಜವಾಬ್ದಾರಿಯುತ ಸವಾರಿ ಅಭ್ಯಾಸಗಳ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ರಸ್ತೆ ಸುರಕ್ಷತಾ ಬೂಟ್ಕ್ಯಾಂಪ್ ಅನ್ನು ಯಶಸ್ವಿಯಾಗಿ ನಡೆಸಲಾಯಿತು.


ಸಂಚಾರ ನಿಯಮಗಳು, ಅಪಘಾತ ತಡೆಗಟ್ಟುವಿಕೆ ಮತ್ತು ಅಜಾಗರೂಕ ಚಾಲನೆಯ ಕಾನೂನು ಪರಿಣಾಮಗಳ ಕುರಿತು ಪೊಲೀಸ್ ವರಿಷ್ಠಾಧಿಕಾರಿ ಡಾ. ಸುಮನ್ ಡಿ. ಪನ್ನೇಕರ್ ಮಾತನಾಡಿ, ರಸ್ತೆ ಅಪಘಾತಗಳನ್ನು ಕಡಿಮೆ ಮಾಡುವಲ್ಲಿ ಹೆಲ್ಮೆಟ್ ಬಳಕೆ ಮತ್ತು ಸಂಚಾರ ನಿಯಮಗಳ ಅನುಸರಣೆಯ ನಿರ್ಣಾಯಕ ಪಾತ್ರವನ್ನು ಸೂಪರಿಂಟೆಂಡೆಂಟ್ ಒತ್ತಿ ಹೇಳಿದರು. "ನಾನು ಅಧಿಕಾರಿಯಾಗಿ ಅಧಿಕಾರ ವಹಿಸಿಕೊಂಡ ಎರಡು ತಿಂಗಳಿನಿಂದ, ಈ ಬಳ್ಳಾರಿ ನಗರದಲ್ಲಿ ಬಹಳಷ್ಟು ಉಲ್ಲಂಘನೆಗಳನ್ನು ನೋಡಿದ್ದೇನೆ. ಅವಕಾಶ ನೀಡಿದರೆ ಪ್ರತಿಯೊಬ್ಬ ಪ್ರಯಾಣಿಕ ಅಥವಾ ವಾಹನ ಸವಾರರು ಸಂಚಾರ ನಿಯಮಗಳನ್ನು ಉಲ್ಲಂಘಿಸಲು ಪ್ರಯತ್ನಿಸುತ್ತಾರೆ. ಸಂಚಾರ ನಿಯಮಗಳನ್ನು ಪಾಲಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ, ನಡೆದುಕೊಂಡು ಹೋಗುವ ಪಾದಚಾರಿಗಳು ಸಹ ಸಂಚಾರ ನಿಯಮಗಳನ್ನು ಪಾಲಿಸಬೇಕು ಎಂದರು.

ಕಾಲೇಜಿನ ಪ್ರಾಂಶುಪಾಲರಾದ ಡಾ. ರಾಜಶೇಖರ್ ಷಣ್ಮುಗಂ ಅವರು ಈ ಸಂದರ್ಭದಲ್ಲಿ ಮಾತನಾಡುತ್ತಾ, "ವಿದ್ಯಾರ್ಥಿಗಳು ಮತ್ತು ಅವರ ಪೋಷಕರು ಮತ್ತು ಹಿತೈಷಿಗಳಿಗೆ ಇದು ತುಂಬಾ ಒಳ್ಳೆಯ ಕಾರ್ಯಕ್ರಮವಾಗಿದೆ. ಸಂಚಾರ ನಿಯಮಗಳನ್ನು ಪಾಲಿಸುವ ಪ್ರಾಮುಖ್ಯತೆ ಮತ್ತು ಜೀವನದ ಪ್ರತಿಯೊಂದು ಭಾಗದಲ್ಲೂ ಶಿಸ್ತನ್ನು ಕಾಪಾಡಿಕೊಳ್ಳುವುದು ಹೇಗೆ? ಇಲ್ಲದಿದ್ದರೆ, ಇದು ಶಿಕ್ಷೆ ಅಥವಾ ವರ್ಷಗಳಲ್ಲಿ ನಿಮ್ಮ ಪೋಷಕರು ಮತ್ತು ಸಂಬಂಧಿಕರಿಗೆ ಮಾನಸಿಕ ಶಿಕ್ಷೆಯಾಗುವುದು. ಎಲ್ಲಾ ವಿದ್ಯಾರ್ಥಿಗಳು ಸುರಕ್ಷಿತ ಮತ್ತು ಆರೋಗ್ಯಕರ ಜೀವನವನ್ನು ನಡೆಸಲಿ ಎಂದು ನಾನು ಬಯಸುತ್ತೇನೆ." ಎಂದರು.

ಕೃತಕ ಬುದ್ಧಿಮತ್ತೆ ಮತ್ತು ಯಂತ್ರ ಕಲಿಕೆ ವಿಭಾಗದ ಮುಖ್ಯಸ್ಥೆ ಡಾ. ಸಾಯಿ ಮಾಧವಿ ಡಿ., ಬೂಟುಕ್ಯಾಂಪ್.ನ ಶೈಕ್ಷಣಿಕ ಅಂಶಗಳನ್ನು ಸಂಯೋಜಿಸಿದರು ಮತ್ತು ಅಂತಹ ಉಪಕ್ರಮಗಳು ತರಗತಿಯ ಕಲಿಕೆ ಮತ್ತು ನೈಜ ಜಗತ್ತಿನ ಸಾಮಾಜಿಕ ಜವಾಬ್ದಾರಿಯ ನಡುವಿನ ಅಂತರವನ್ನು ಹೇಗೆ ಕಡಿಮೆ ಮಾಡುತ್ತದೆ ಎಂಬುದನ್ನು ವಿವರಿಸಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಅಧ್ಯಕ್ಷರಾದ ಜಾನೆಕುಂಟೆ ಬಸವರಾಜ್, ಹೆಲ್ಮೆಟ್ ಪ್ರಾಯೋಜಕ ಪ್ರತಿನಿಧಿಗಳಾದ ಕರ್ನಾಟಕದ ಆವಾಸ್ ಫೈನಾನ್ಷಿಯರ್ಸ್ ಲಿಮಿಟೆಡ್ನ ರಾಜ್ಯ ಮುಖ್ಯಸ್ಥರಾದ ಶ್ರೀ ಶಶಿಧರ್, ಸುನಿಲ್ ಕುಮಾರ್ ಪಿ, ಶಾಖೆಯ ಮುಖ್ಯಸ್ಥರು, ಆವಾಸ್ ಫೈನಾನ್ಷಿಯರ್ಸ್ ಲಿಮಿಟೆಡ್, ಬಳ್ಳಾರಿ, ಕೃಷ್ಣ ಮೂರ್ತಿ ಜಿ, ಬಿ.ಎಸ್.ಎಂ, ಆವಾಸ್ ಫೈನಾನ್ಷಿಯರ್ಸ್ ಲಿಮಿಟೆಡ್, ತ್ರಿಗುಣ-ದಿ ಸೈನ್ಸ್ ಆಫ್ ಲಿವಿಂಗ್.ನ ಕಾರ್ಯಕ್ರಮ ವ್ಯವಸ್ಥಾಪಕಿ ಶ್ರೀಮತಿ ಅನುಷ್ಕಾ ದಾಸ್ ಮತ್ತು ತ್ರಿಗುಣದ ಸಹಾಯಕ ವ್ಯವಸ್ಥಾಪಕರು ಅತುಲ್ ಕೃಷ್ಣ, ವಿಭಾಗದ ಅಧ್ಯಾಪಕ ಸದಸ್ಯರಾದ ಪ್ರೊ. ಗಂಗಾಧರ್ ಜಿ.ಎಚ್., ಡಾ. ಕುಸಮ್ಮನವರ್ ಬಸವರಾಜ್, ಡಾ. ಶಿಲ್ಪಾ ಪಾಟೀಲ್, ಪ್ರೊ. ಸುಮನಾ ಸಿ.ಎಂ., ಪ್ರೊ. ಇ.ಎನ್.ವಿ. ರಾಜೇಶ್ ಮತ್ತು ಪ್ರೊ. ನಾಜ್ನೀನ್ ಅವರು ಸಕ್ರಿಯವಾಗಿ ಭಾಗವಹಿಸಿದ್ದರು.

# ಪೂಜ್ಯರ ಆಶೀರ್ವಾದ ಪಡೆದ ಸೂರ್ಯನಾರಾಯಣ ರೆಡ್ಡಿ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಕಾಂಗ್ರೆಸ್ ಪಕ್ಷದ ಹಿರಿಯ ಪ್ರಮುಖ ನಾಯಕರು, ಮಾಜಿ ಶಾಸಕ ನಾರಾ ಸೂರ್ಯನಾರಾಯಣ ರೆಡ್ಡಿ ಅವರು ಶ್ರೀ ಶ್ರೀ ಶ್ರೀ ಪ.ಪೂಜ್ಯ ತ್ರೀಕಾಲ ಜ್ಞಾನಿ ದಾಸೋಹ ರತ್ನ ಶ್ರೀ ಗುರು ನೀಲಕಂಠಾರ್ಯ ಮಹಾಸ್ವಾಮಿಗಳು

ಸುಕ್ಷೇತ್ರ.ಓ. ಗುಡದೂರ ಮಠ ಶ್ರೀ ಪೂಜ್ಯರ ಆಶೀರ್ವಾದವನ್ನು ಪಡೆದರು.

# ದೊರೆಯುವ ಅವಕಾಶ ಬಳಸಿಕೊಂಡು ಬೆಳೆಯಬೇಕು



• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:

ಜೀವನದಲ್ಲಿ ದೊರೆಯುವ ಒಳ್ಳೆಯ ಅವಕಾಶಗಳನ್ನು ಬಳಸಿಕೊಂಡು ಎತ್ತರಕ್ಕೆ ಬೆಳೆಯಬೇಕು ಎಂದು ಪದವಿಪೂರ್ವ ಶಿಕ್ಷಣ ಇಲಾಖೆಯ ವಿಶ್ರಾಂತ ಉಪನಿರ್ದೇಶಕ ರಮೇಶ ದಡ್ಡಿ ಹೇಳಿದರು.

ತಾಲೂಕಿನ ಮುಗಳೊಳ್ಳಿ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಗುರುವಾರ ಜರುಗಿದ ಕ್ರೀಡಾ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಸಮಾರೋಪ, ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭ ಮುಖ್ಯ ಅತಿಥಿಗಳಾಗಿ ಮಾತನಾಡಿದರು.

ವಿದ್ಯಾರ್ಥಿಗಳು ಜೀವನವನ್ನು ಪ್ರೀತಿಸಬೇಕು. ಈಚಿನ ದಿನಗಳಲ್ಲಿ ಆನ್ ಲೈನ್ ಗೇಮ್ ಆಡಿ ಯುವ ಸಮೂಹ ಜೀವ ಕಳೆದುಕೊಳ್ಳುತ್ತಿರುವ ಸಂಗತಿಗಳು ಸಮಾಜವನ್ನು ತಲ್ಲಣಗೊಳಿಸುತ್ತಿವೆ. ಇದನ್ನು ಪ್ರತಿಯೊಬ್ಬ ವಿದ್ಯಾರ್ಥಿ ಅರಿತು ನಡೆಯಬೇಕು. ಸಮಾಜ ಒಪ್ಪಿತ ಸಂಸ್ಕೃತಿಯನ್ನು ಬದುಕಿನಲ್ಲಿ ಅಳವಡಿಸಿಕೊಂಡು ತಂದೆ– ತಾಯಿ ಹಾಗೂ ವಿದ್ಯೆ ಕಲಿಸಿದ ಗುರುಗಳಿಗೆ ಆನಂದ ತರುವಂತಾಗಬೇಕು ಎಂದು ದಡ್ಡಿ ಹೇಳಿದರು.

ಕಾಲೇಜು ಅಭಿವೃದ್ಧಿ ಹಾಗೂ ಶಾಲಾ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಲಕ್ಷ್ಮಣ ಸುನಗದ ಮಾತನಾಡಿ, ಶಿಕ್ಷಕರ ಮಾರ್ಗದರ್ಶನದಲ್ಲಿ ಜ್ಞಾನ ಸಂಪಾದಿಸಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆದು ಕೀರ್ತಿ ತರಬೇಕೆಂದು ಹೇಳಿದರು.

ಪ್ರಾಚಾರ್ಯ ಎಸ್.ಎಸ್.ಬಿರಾದಾರ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಎಚ್.ಆರ್.ಹಡಪದ, ಬಿ.ಎಸ್.ಭಜನ್ನವರ, ಹಂಪಣ್ಣ ಅಂಗಡಿ, ಸಂಗಣ್ಣ ಕಲಾದಗಿ, ಸಾಹೇಬಗೌಡ ನಾಯ್ಕರ, ಮಂಜುನಾಥ ದೇವಣಗಾಂವಿ, ಬಸಪ್ಪ ತಳವಾರ, ಮಲ್ಲಯ್ಯ ಗಣಾಚಾರಿ, ರೇಣುಕಾ ಕಾಜಗಾರ, ಶಾಂತವ್ವ ಸೀಮಿಕೇರಿ, ಬ್ರಹ್ಮಲಿಂಗ ತಳವಾರ ಅತಿಥಿಗಳಾಗಿದ್ದರು.

2025ರ ದ್ವಿತೀಯ ಪಿಯುಸಿಯಲ್ಲಿ ಕಾಲೇಜಿಗೆ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಗಳಿಸಿದ ವಿದ್ಯಾರ್ಥಿಗಳಿಗೆ ಹಂಪಣ್ಣ ಅಂಗಡಿ ನಗದು ಬಹುಮಾನ ಹಾಗೂ ಪ್ರಶಸ್ತಿ ಪತ್ರ ವಿತರಿಸಿದರು. ಇನ್ನೋರ್ವ ದಾನಿ ದ್ವಿತೀಯ ಪಿಯುಸಿಯ ಎಲ್ಲ 28 ವಿದ್ಯಾರ್ಥಿಗಳಿಗೆ ಕ್ಲಪ್ ಪ್ಯಾಡ್, ಪೆನ್ನು ಹಾಗೂ ಲೇಖನ ಸಾಮಾಗ್ರಿಗಳನ್ನು ನೀಡಿದರು. ಸಂಗೀತಾ ಹೆಳವರಗೆ ಆದರ್ಶ ವಿದ್ಯಾರ್ಥಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಸರಸ್ವತಿ ಹಾಗೂ ತಂಡದವರು ಪ್ರಾರ್ಥಿಸಿದರು. ಜಿ.ಎಚ್.ಬಡಿಗೇರ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿವಶಂಕರ ಮುತ್ತಗಿ ಮಾತನಾಡಿದರು. ಸಿ.ಆರ್.ಕೋಲಕಾರ, ಎಸ್.ಪಿ.ಹಿರೇಮಠ ನಿರೂಪಿಸಿದರು. ಎಸ್.ಡಿ.ಪಾಟೀಲ ವಂದಿಸಿದರು.

# ಅಂಗನವಾಡಿ ಮಂಜೂರಿಗೆ ಆಗ್ರಹೆ



• ಮಲ್ಲಮ್ಮ ನುಡಿ ವಾರ್ತೆ ಮುದಗಲ್ಲ:

ಪಟ್ಟಣ ಸಮೀಪದ ಮೀಸೆ ಖೀರೇಪ್ಪನ ತಾಂಡಕ್ಕೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸೂಪರ್ವೈಸರ್ ಹೇಮಾ ದೇವನಾಳ ಭೇಟಿನೀಡಿ ಪರಿಶೀಲಿಸಿದರು.

ಕೆಡಿಪಿ ಸದಸ್ಯ ದೇವಪ್ಪ ರಾಠೋಡ ಸದರಿ ತಾಂಡಾದಲ್ಲಿ ಬಹುದಿನಗಳ ಬೇಡಿಕೆಯಾಗಿದ್ದ ಅಂಗನವಾಡಿ ಕೇಂದ್ರ ಸ್ಥಾಪನೆ ಕುರಿತು ಸಾಕಷ್ಟು ಬಾರಿ ತಾಪಂ, ಕೆಡಿಪಿ ಸಭೆಗಳಲ್ಲಿ ಪ್ರಸ್ತಾಪಿಸಿದರು. ಅಂಗನವಾಡಿ ಕೇಂದ್ರ ಮಂಜೂರು ಮಾಡುತ್ತಿಲ್ಲ, ಇಲ್ಲಿನ ಮಕ್ಕಳು, ಗರ್ಭಿಣಿಯರು, ಬಾಣಂತಿ ಮಹಿಳೆಯರು ಸಾಕಷ್ಟು ತೊಂದರೆ ಅನುಭವಿಸುತ್ತಿದ್ದಾರೆ. ಆಶಾ ಕಾರ್ಯಕರ್ತೆಯೂ ಸಹ ಇಲ್ಲದೇ ಹೆರಿಗೆ ಸಮಯದಲ್ಲಿ ಸಾಕಷ್ಟು ತೊಂದರೆ ಆಗಿದೆ, ಕಬ್ಬಿಣಾಂಶದ ಮಾತ್ರೆಗಳು, ಅಪೌಷ್ಠಿಕ ಮಕ್ಕಳಿಗೆ ಆಹಾರಸಿಗುತ್ತಿಲ್ಲ, ಇಲಾಖೆಯ ಯಾವುದೇ ಸೌಕರ್ಯ ದೊರೆಯುತ್ತಿಲ್ಲ ದೂರದ ಅಂಗನವಾಡಿ ಕೇಂದ್ರಗಳಿಗೆ ಮಕ್ಕಳು ತೆರಳಬೇಕಾಗಿದೆ ಎಂದರು. ನಂತರ ಅಂಗನವಾಡಿ ಮೇಲ್ವಿಚಾರಕಿ ಹೇಮಾ ಮಾತನಾಡಿ, ಇಲ್ಲಿನ ಜನಸಂಖ್ಯೆ, ಕಿಶೋರಿಯರ ಸಂಖ್ಯೆ , ಮಕ್ಕಳ ಸಂಖ್ಯೆ ಪರಿಶೀಲಿಸಿ ಮಿಸೆ ಖಿರೇಪ್ಪನ ತಾಂಡಕ್ಕೆ ಅಂಗನವಾಡಿ ಕೇಂದ್ರ ಮಂಜೂರು ಮಾಡಬೇಕೆಂದು ವರದಿ ನೀಡುತ್ತೇವೆ ಎಂದರು ಇಲ್ಲಿನ ಮಹಿಳೆಯರು ಸಹ ಅಂಗನವಾಡಿ ಕೇಂದ್ರ ಮಂಜೂರು ಮಾಡುವಂತೆ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ತಾಂಡಾದ ವೀರೇಶ್ ರಾಥೋಡ್, ಭೀಮೇಶಪ್ಪ, ದೇವಮ್ಮ, ರಾಮಪ್ಪನತಾಂಡಾದ ಅಂಗನವಾಡಿ ಶಿಕ್ಷಕಿ ಸೇರಿದಂತೆ ತಾಂಡಾದ ಮಹಿಳೆಯರು ಇದ್ದರು.

# ಮಕ್ಕಳ ಪುಸ್ತಕ ಚಂದಿರ ಪ್ರಶಸ್ತಿಗಾಗಿ ಅರ್ಜಿ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:

ಕರ್ನಾಟಕ ಬಾಲವಿಕಾಸ ಅಕಾಡೆಮಿಯು 2024 ಮತ್ತು 2025ನೇ ಸಾಲಿಗೆ ಮಕ್ಕಳ ಕ್ಷೇತ್ರದಲ್ಲಿ ರಚಿಸಲ್ಪಟ್ಟ ಆಯ್ದ ಉತ್ತಮ ಪುಸ್ತಕಗಳಿಗೆ ಮಕ್ಕಳ ಪುಸ್ತಕ ಚಂದಿರ ಪ್ರಶಸ್ತಿ ನೀಡುವ ಸಲುವಾಗಿ ಪುಸ್ತಕಗಳನ್ನು ಆಹ್ವಾನಿಸಲಾಗಿದೆ.

2024 ಮತ್ತು 2025ನೇ ಸಾಲಿನ ಅವಧಿಯಲ್ಲಿ ಪ್ರಕಟಗೊಂಡ ಸ್ವರಚಿತ ಕವನ ಸಂಕಲನ, ಕಥಾ ಸಂಕಲನ, ನಾಟಕ (ಪಠ್ಯಾಧಾರಿತ ಬಿಟ್ಟು) ಮಕ್ಕಳ ಕಾದಂಬರಿ, ವೈಜ್ಞಾನಿಕ ಲೇಖನಗಳ ಸಂಕಲನ, ಅನುವಾದಿತ ಕೃತಿ ಹಾಗೂ ಮಕ್ಕಳ ಸಾಹಿತ್ಯ ವಿಮರ್ಶಾ ಕೃತಿ ಸೇರಿ ಏಳು ಪ್ರಕಾರದ ಮಕ್ಕಳ ಸಾಹಿತ್ಯದ ಕೃತಿಗಳನ್ನು ಪ್ರಶಸ್ತಿಗಾಗಿ ಪರಿಗಣಿಸಲಾಗುತ್ತದೆ. ಪ್ರಶಸ್ತಿಗಾಗಿ ಪರಿಗಣಿಸಲು, ಮೌಲ್ಯಮಾಪನ ಮಾಡಲು ಪ್ರತಿಯೊಂದು ಕೃತಿಯ 4 ಪ್ರತಿಗಳನ್ನು ಹಾಗೂ ಸ್ವವಿವರಗಳನ್ನೊಳಗೊಂಡ ಮನವಿಯನ್ನು ಫೆಬ್ರವರಿ 20 ರೊಳಗಾಗಿ ಅಕಾಡೆಮಿಯ ಕೇಂದ್ರ ಕಚೇರಿಗೆ ಸಲ್ಲಿಸುವಂತೆ ಪ್ರಕಟಣೆ ತಿಳಿಸಿದೆ.

ಹೆಚ್ಚಿನ ಮಾಹಿತಿಗಾಗಿ ಯೋಜನಾಧಿಕಾರಿಗಳು, ಚಂದ್ರಿಕಾಲೇ ಔಟ್ ಹಿಂಭಾಗ ಕೆ.ಎಚ್.ಬಿ ಕಾಲೋನಿ, ಲಕಮನಹಳ್ಳಿ ಧಾರವಾಡ–580004, ದೂಸಂ.0836–2465490, ಮೊಸಂ.8050392209, 7204396275, 9448981944 ಇವರಿಂದ ಪಡೆದುಕೊಳ್ಳಬಹುದಾಗಿದೆ.

# ಅನುದಾನ ಸಮರ್ಪಕ ಬಳಕೆಗೆ ಸಿಇಓ ಸೂಚನೆ



• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:

ಜಿಲ್ಲಾ ಪಂಚಾಯತ ಲಿಂಕ್ ಡಾಕ್ಯೂಮೆಂಟ್ ಅನುದಾನದಡಿಯಲ್ಲಿ ಕೈಗೊಂಡಿರುವ ಕಾಮಗಾರಿಗಳು ನಿಗದಿತ ಕಾಲಾವಧಿಯಲ್ಲಿ ಗುಣಮಟ್ಟದೊಂದಿಗೆ ಪೂರ್ಣಗೊಳಿಸುವಂತೆ ಜಿ.ಪಂ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾ ಪಂಚಾಯತ ನೂತನ ಸಭಾಭವನದಲ್ಲಿ ಗುರುವಾರ ಜಿ.ಪಂ ಲಿಂಕ್ ಡಾಕ್ಯೂಮೆಂಟರ್ ಅನುದಾನಗಳ ಅನುಷ್ಠಾನ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಅನುದಾನ ಬಳಕೆಯಲ್ಲಿ ಪಾರದರ್ಶಕತೆ ಕಾಪಾಡಬೇಕು. ದುರಸ್ಥಿ ಕಾಮಗಾರಿಗಳಲ್ಲಿ ಗುಣಮಟ್ಟ ಕಾಣುತ್ತಿಲ್ಲ. ಪದೇ ಪದೇ ದುರಸ್ಥಿ ಕಾರ್ಯ ಮಾಡಲಾಗುತ್ತಿದೆ. ಈ ಬಗ್ಗೆ ಜಿಲ್ಲಾ ಮಟ್ಟದ ಅಧಿಕಾರಿಗಳು ದುರಸ್ಥಿ ಕಾರ್ಯದ ಬಗ್ಗೆ ಪರಿಶೀಲನೆ ನಡೆಸುವ ಅಗತ್ಯವಿದೆ ಎಂದು ತಿಳಿಸಿದರು. ಕ್ರೀಯಾ ಯೋಜನೆ ಪ್ರಕಾರ ಕಾಮಗಾರಿಗೆ ಅನುಮತಿ ನೀಡಲಾಗಿರುತ್ತದೆ. ಅನುಮತಿ ನೀಡಿದರು ಟೆ–ಂಡರ್ ಕರೆದು ಕಾರ್ಯಾದೇಶ ಕೊಡುವಲ್ಲಿ ಬಹಳ ವಿಳಂಬ ದೋರಣೆ ಅನುಸರಿಸುತ್ತಿದ್ದೀರಿ. ಈ ನಿಮ್ಮ ವರ್ತನೆಯಿಂದ ನಿಗದಿತ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳ್ಳದೇ ಇರುವದರಿಂದ ನೀವು ಕೈಗೊಂಡಿರುವ ಕ್ರೀಯಾ ಯೋಜನೆಕ್ಕಿಂತ ಹೆಚ್ಚಿಗೆ ಡ್ಯಾಮೇಜ್ ಆಗಿರುತ್ತದೆ. ಇದನ್ನು ಜಿಲ್ಲಾ ಮಟ್ಟದ ಅಧಿಕಾರಿಗಳು ಅರಿತುಕೊಂಡು ಸರಿಯಾಗಿ ಕೆಲಸ ನಿರ್ವಹಿಸಬೇಕು. ಇಲ್ಲವಾದಲ್ಲಿ ನಿರ್ದಾಕ್ಷಿಣ್ಯವಾಗಿ ಕ್ರಮಕೈಗೊಳ್ಳಲು ಮುಂದಾಗುವುದಾಗಿ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಆರೋಗ್ಯ, ಶಿಕ್ಷಣ, ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಬಿಡುಗಡೆ–ಯಾದ ಅನುದಾನದ ಸಮರ್ಪಕ ಬಳಕೆಯ ಬಗ್ಗೆ ವಿವರವಾಗಿ ಚರ್ಚೆ ನಡೆಸಿದರು. ಮುಖ್ಯವಾಗಿ ಶಾಲೆ, ಆಸ್ಪತ್ರೆ ಹಾಗೂ ವಿವಿಧ ವಸತಿ ನಿಲಯ ಹಾಗೂ ಅವುಗಳ ಸುತ್ತಮುತ್ತಲೂ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಸ್ವಚ್ಛತೆಗೆ ಆಯಾ ವ್ಯಾಪ್ತಿಯ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಅಗತ್ಯ ಸಹಕಾರ ನೀಡಲು ಸೂಚಿಸುವಂತೆ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ತಿಳಿಸಿದರು.

# ಜ್ಞಾನ ಸಂಪಾದನೆಯಿಂದ ವ್ಯಕ್ತಿತ್ವ ವಿಕಸನ



• ಮಲ್ಲಮ್ಮ ನುಡಿ ವಾರ್ತೆ. ಬಾಗಲಕೋಟೆ:

ಜ್ಞಾನ ಸಂಪಾದನೆಗೆ ಶ್ರಮಿಸಿದಷ್ಟು ವ್ಯಕ್ತಿತ್ವ ವಿಕಸನಗೊಳ್ಳುತ್ತದೆ ಎಂದು ಚಿಕ್ಕಾಲಗುಂಡಿ ಸರ್ಕಾರಿ ಪಿಯು ಕಾಲೇಜಿನ ರಾಜ್ಯಶಾಸ್ತ್ರದ ಉಪನ್ಯಾಸಕ ವೈ.ಎಸ್.ರೂಗಿ ಹೇಳಿದರು.

ತಾಲ್ಲೂಕಿನ ಕಲಾದಗಿಯ ಗುರುಲಿಂಗೇಶ್ವರ ಸ್ವತಂತ್ರ ಪದವಿ ಪೂರ್ವ ಮಹಾವಿದ್ಯಾಲಯದ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಬಿಳ್ಕೊಡುಗೆ ಮತ್ತು ಪ್ರಶಸ್ತಿ ಪುರಸ್ಕಾರ ಸಮಾರಂಭದಲ್ಲಿ ಮಾತನಾಡಿದ ಅವರು, ಪಿಯು ಶಿಕ್ಷಣ ಜೀವನದ ಅತ್ಯಮೂಲ್ಯ ಘಟ್ಟವಾಗಿದೆ. ಬದುಕಿಗೆ ತಿರುವ ಕೊಡುವ ಈ ಹಂತದಲ್ಲಿ ಸಾಧಿಸುವ ಗುರಿಯೊಂದಿಗೆ ಶ್ರಮ ವಹಿಸಬೇಕು, ಆಗ ಮಾತ್ರ ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದರು. ಕಾಲೇಜಿನ ಪ್ರಾಚಾರ್ಯ ಶಂಕರ ನಿಂಬರಗಿ ಮಾತನಾಡಿ, ಪರೀಕ್ಷೆ ಎಂದರೆ ಯುದ್ಧವಲ್ಲ, ಆತಂಕ ಬೇಡ, ಆತ್ಮವಿಶ್ವಾಸವಿದ್ದರೆ ಯಾವುದೇ ಪರೀಕ್ಷೆಯನ್ನು ಸುಲಭವಾಗಿ ಎದುರಿಸಬಹುದು ಎಂದರು. ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಿತು.

ವಿಶ್ರಾಂತ ಶಿಕ್ಷಕ ಎಸ್.ಎನ್. ಹೂಗಾರ, ವೆಂಕಟೇಶ್ ಯರನಾಳ ಹಾಗೂ ಕಾಲೇಜಿನ ಉಪನ್ಯಾಸಕರು ಇದ್ದರು. ಕಾರ್ಯಕ್ರಮವನ್ನು ರಕ್ಷಿತಾ ಬಂಗಲಿ, ಅಶ್ವಿನಿ ನಾಗೂಗೋಳ ನಿರೂಪಿಸಿದರು. ನಂದಿನಿ ಡೊಳ್ಳಿ ಸ್ವಾಗತಿಸಿದರು. ಅಂಕಿತಾ ಮ್ಯಾದರ ವಂದಿಸಿದರು.

# ಲಕ್ಷ್ಮೀದೇವಿ ಪಲ್ಲಕ್ಕಿ ಮೆರವಣಿಗೆ



• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:

ತಾಲ್ಲೂಕಿನ ಕಲಾದಗಿ ಸಮೀಪದ ಅಂಕಲಗಿ ಗ್ರಾಮದ ಲಕ್ಷ್ಮಿ ದೇವಿ ಜಾತ್ರಾ ಮಹೋತ್ಸವ ಬುಧವಾರ ಸಂಭ್ರಮದಿಂದ ಜರುಗಿತು.

ಬೆಳಗ್ಗೆಯಿಂದಲೇ ಲಕ್ಷ್ಮಿ ದೇವಿಗೆ ವಿಶೇಷ ಪೂಜೆ, ಅಭಿಷೇಕ ಮತ್ತು ಕುಂಕುಮಾರ್ಚನೆ ವಿಶೇಷ ಪೂಜಾ ವಿಧಿ ವಿಧಾನಗಳು ಜರುಗಿದವು.

ನಂತರ ಲಕ್ಷ್ಮಿದೇವಿಯ ಪಲ್ಲಕ್ಕಿ ಉತ್ಸವದ ಮೆರವಣಿಗೆಯು ದೇವಸ್ಥಾನದಿಂದ ಆರಂಭಗೊಂಡು, ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಪುನಃ ದೇವಸ್ಥಾನಕ್ಕೆ ಬಂದು ತಲುಪಿತು.

ಪಲ್ಲಕ್ಕಿ ಉತ್ಸವದ ಮೆರವಣಿಗೆಯುದ್ದಕ್ಕೂ ಭಂಡಾರ ಎರಚಿ ಲಕ್ಷ್ಮಿದೇವಿಗೆ ಜೈಕಾರ ಹಾಕುತ್ತಾ ಭಂಡಾರದಲ್ಲಿ ಮಿಂದ್ದೆದರು. ಮಧ್ಯಾಹ್ನ ಅನ್ನ ಸಂತರ್ಪಣೆ ಕಾರ್ಯಕ್ರಮ ನಡೆಯಿತು.

# ಯಲಗೂರೇಶ ಕಾರ್ತಿಕೋತ್ಸವ : ಇಂದಿನಿಂದ ಪಾದಯಾತ್ರೆ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:

ವಿಜಯಪುರ ಜಿಲ್ಲೆಯ ಏಳೂರು ಒಡೆಯ ಶ್ರೀ ಯಲಗೂರೇಶ ಕಾರ್ತಿಕೋತ್ಸವದ ನಿಮಿತ್ತ ಫೆ. 6 ರಿಂದ ಜಿಲ್ಲೆಯ ಹುನಗುಂದ ನಗರದಿಂದ ಪಾದಯಾತ್ರೆ ಹೊರಡಲಿದೆ.

ಕಳೆದ 55 ವರ್ಷಗಳಿಂದ ನಗರದ ಬ್ರಾಹ್ಮಣ ಸಮಾಜ ಪ್ರತಿ ವರ್ಷವೂ ಪಾದಯಾತ್ರೆ ಹೊರಡುತ್ತಿದ್ದು, ಇದು 56 ನೆಯ ವರ್ಷದ ಪಾದಯಾತ್ರೆಯಾಗಿದೆ ಎಂದು ನ್ಯಾಯವಾದಿ ಮಾಧವ ದೇಶಪಾಂಡೆ ತಿಳಿಸಿದರು. ಬುಧವಾರ ಹುನಗುಂದ ರಾಘವೇಂದ್ರ ಮಠದಲ್ಲಿ ಪಾದಯಾತ್ರೆ ಕುರಿತು ಮಾಹಿತಿ ನೀಡಿದ ಅವರು, ಪಾದಯಾತ್ರೆ ದಿನಾಂಕ 6 ಪಾದಯಾತ್ರೆ ಹೊರಟು 7ರಂದು ನಡೆಯುವ ಯಲಗೂರೇಶನ ಕಾರ್ತಿಕೋತ್ಸವದಲ್ಲಿ ಪಾಲ್ಗೊಳ್ಳಲಿದೆ.

ದಿ.6 ಸಾಯಂಕಾಲ 6 ಗಂಟೆಗೆ ಹುನಗುಂದ ನಗರದ ಮುದಿಮಾರುತಿ ದೇವಸ್ಥಾನದಿಂದ ಪಾದಯಾತ್ರೆ ಪ್ರಾರಂಭವಾಗುತ್ತದೆ. ತಾಪಂ ಇಓ ಮರಳೀಧರ ದೇಶಪಾಂಡೆ ಮತ್ತು ಸಮಾಜದ ಹಿರಿಯರು ಹಾಗೂ ಮಹಿಳೆಯರು ಚಾಲನೆ ನೀಡುವರು. ಪಾದಯಾತ್ರೆಯಲ್ಲಿ ಪಾಲ್ಗೊಳ್ಳುವವರು ಸರಿಯಾದ ಸಮಯಕ್ಕೆ ಬರಬೇಕು ಎಂದು ಬ್ರಾಹ್ಮಣ ಸಮಾಜದ ಅಧ್ಯಕ್ಷ ವಾದಿರಾಜ ಗುಡ್ಡದ ತಿಳಿಸಿದರು.

ಮುದಿಮಾರುತಿ ದೇವಸ್ಥಾನದಿಂದ ಪಾದಯಾತ್ರೆ ಪ್ರಾರಂಭವಾಗಿ ರಾಷ್ಟ್ರೀಯ ಹೆದ್ದಾರಿ 50ರ ಮೂಲಕ ತಿಮ್ಮಾಪೂರ ಕ್ರಾಸ್, ಕೂಡಲಸಂಗಮ ಕ್ರಾಸ್ ಪೆಟ್ರೋಲ್ ಬಂಕ್, ದೇವಲಾಪೂರ ಕ್ರಾಸ್, ನಾಗರಾಳ ಟೋಲ್ ಗೇಟ್ ಮಾರ್ಗವಾಗಿ ಬೆಳಿಗ್ಗೆ 4ಕ್ಕೆ ಯಲಗೂರೇಶ ದೇವಸ್ಥಾನ ತಲುಪುವದು.

# ವಿದ್ಯುತ್ ವ್ಯತ್ತಾಯ

• ಮಲ್ಲಮ್ಮ ನುಡಿ ವಾರ್ತೆ ಬೀದರ:

ಬೀದರ ವೃತ್ತ ವ್ಯಾಪ್ತಿಯಲ್ಲಿ ಬರುವ ಬೀದರ ಉಪ–ವಿಭಾಗದ 110/33/11 ಕೆ.ವಿ. ಸಬ್–ಸ್ಟೇಷನ್ ಕಮಠಾಣ ವಿದ್ಯುತ್ ವಿತರಣಾ ಕೇಂದ್ರದಿಂದ 33ಕೆವಿ ಮನ್ನಾಎಖೇಳ್ಳಿ, 33ಕೆವಿ ಕಮಠಾಣ ಮತ್ತು 33ಕೆವಿ ಜಿಜಿಪಿಎಲ್ ವಿದ್ಯುತ್ ವಿತರಣಾ ಕೇಂದ್ರಕ್ಕೆ ಹಾದು ಹೋಗುವ ಲೈನಗಳ ಮತ್ತು 11ಕೆವಿ ಕಾಲೇಜು, 11ಕೆವಿ ಕಮಠಾಣ ಎನ್‌ಜೆವಾಯ್, 11ಕೆವಿ ಬಾವಗಿ ಎನ್‌ಜೆವಾಯ್, 11ಕೆವಿ ಕಂಗನಕೋಟ ಐಪಿ, 11ಕೆವಿ ಮಿರ್ಜಾಪೂರ ಎನ್‌ಜೆವಾಯ್, 11ಕೆವಿ ಬೆಳ್ಳೂರಾ ಐಪಿ ಫೀಡರಗಳ ಮೇಲೆ ತ್ರೈಮಾಸಿಕ ನಿರ್ವಹಣೆ ಕೈಗೊಳ್ಳುತ್ತಿರುವುದರಿಂದ ಸದರಿ ಫೀಡರಗಳ ವ್ಯಾಪ್ತಿಗೆ ಬರುವ ಕಮಠಾಣ, ಬಾವಗಿ, ಕಂಗನಕೋಟ, ಮಿರ್ಜಾಪೂರ, ಬೆಳ್ಳೂರಾ ಮತ್ತು ಸುತ್ತಲಿನ ಗ್ರಾಮಗಳಿಗೆ ದಿನಾಂಕ:06–02–2026 ರಂದು ಬೆಳಗ್ಗೆ 9:00 ಗಂಟೆಯಿಂದ ಮಧ್ಯಾಹ್ನ 2:00 ಗಂಟೆಯವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

ಕಾರಣ ಎಲ್ಲಾ ವಿದ್ಯುತ್ ಗ್ರಾಹಕರಲ್ಲಿ ಜೆಸ್ಕಾಂ ಇಲಾಖೆಯೊಂದಿಗೆ ಸಹಕರಿಸಲು ಬೀದರ ಕಾರ್ಯ ಮತ್ತು ಪಾಲನೆ ವೃತ್ತದ ಅಧೀಕ್ಷಕ ಇಂಜಿನಿಯರ (ವಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# 9 ರಂದು ಜಿ.ಪಂ ಮಾಸಿಕ ಕೆಡಿಪಿ ಸಭೆ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:

ಜಿಲ್ಲಾ ಪಂಚಾಯತ ಆಡಳಿತಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಫೆಬ್ರವರಿ 9 ರಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಪಂಚಾಯತ ನೂತನ ಸಭಾಭವನದಲ್ಲಿ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆ ಜರುಗಲಿದೆ ಎಂದು ಜಿ.ಪಂ ಸಿಇಓ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವೃತ್ತಿ ತರಬೇತಿ ವಿದ್ಯಾರ್ಥಿಗಳಿಗೆ ಇನ್‌ಕ್ಯೂಬೇಷನ್ ತರಬೇತಿ

ಬಾಗಲಕೋಟೆ : ಫೆಬ್ರವರಿ 05 (ಕರ್ನಾಟಕ ವಾರ್ತೆ) : ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯು ಪ್ರಸಕ್ತ ಸಾಲಿಗೆ ರ್ಯಾಂಪ್ ಯೋಜನೆಯಡಿ ಫೆಬ್ರವರಿ 12 ರಂದು ಬೀಳೂರು ಗುರುಬಸವ ಮಹಾಸ್ವಾಮಿಜಿ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ ಮುಧೋಳದಲ್ಲಿ, ಫೆಬ್ರವರಿ 13 ರಂದು ಸಿ.ವಿ.ಚರಂತಿಮಠ ರೂರಲ್ ಪಾಲಿಟೆಕ್ನಿಕ್ ಕಾಲೇಜು ಹುನಗುಂದದಲ್ಲಿ ಕೆ.ಎಸ್.ಎಂ.ಸಿ ಮತ್ತು ಎ ಬೆಂಗಳೂರು ಸಹಯೋಗದಲ್ಲಿ ಡಿಪ್ಲೋಮಾ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಇನ್‌ಕ್ಯೂಬೇಷನ್ ವಿಷಯ ಕುರಿತು ಒಂದು ದಿನದ ಅರಿವು ಮೂಡಿಸುವ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ.

ಆಸಕ್ತ ವಿದ್ಯಾರ್ಥಿಗಳು ಲಿಂಕ್ ಮೂಲಕ ಫೆಬ್ರವರಿ 11 ರಂದು ಸಂಜೆ 5 ಗಂಟೆಯೊಳಗಾಗಿ ನೋಂದಾಯಿಸಿಕೊಳ್ಳುವಂತೆ ಜಂಟಿ ಕೈಗಾರಿಕಾ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ದೂಸಂ.08354–200294, 6361385459 ಗೆ ಸಂಪರ್ಕಿಸಬಹುದಾಗಿದೆ.

# ಫೆ.8 ರಂದು ಫೈನಲ್ ಪಂದ್ಯ ಬಂಜಾರ ಟೈಗರ್ಸ್ ವಿರುದ್ಧ ರೈಸಿಂಗ್ ಸ್ಟಾರ್

• ಮಲ್ಲಮ್ಮ ನುಡಿ ವಾರ್ತೆ ಕುಕನೂರು:

ಪಟ್ಟಣದ ಗುದ್ನೇಶ್ವರ ಜಾತ್ರಾ ಪ್ರಯುಕ್ತವಾಗಿ "ಗುದ್ನೇಶ್ವರ ಟ್ರೋಫಿ" ಎಂಬ ಹೆಸರಿನಲ್ಲಿ ಕುಕನೂರು ತಾಲೂಕು ಪ್ರೀಮಿಯರ್ ಲೀಗ್ ಆಯೋಜನೆ ಮಾಡಲಾಗಿತ್ತು, ಇದರ ಫೈನಲ್ ಪಂದ್ಯವು ಇದೇ ಫೆಬ್ರವರಿ 8 ರಂದು (ಭಾನುವಾರದಂದು) ನಡೆಯಲಿದೆ ಎಂದು ಆಯೋಜಕ ಚಂದ್ರಕಾಂತ್ ಗುಡಿಮನಿ ತಿಳಿಸಿದ್ದಾರೆ.

ಇಂದು ಪಟ್ಟಣದ ಪ್ರವಾಸಿ ಮಂದಿರದಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಇವರು, 'ಈ ಟೂರ್ನಿಯಲ್ಲಿ ಒಟ್ಟು 12 ತಂಡಗಳು ಭಾಗವಹಿಸಿದ್ದು, ಸರಿ ಸುಮಾರು 70 ಪಂದ್ಯಗಳನ್ನು ಆಡಿಸಲಾಗಿದೆ. ಇದರಲ್ಲಿ ಪ್ರಮುಖವಾಗಿ ಬಂಜಾರ ಟೈಗರ್ಸ್ ಕಕ್ಕಿಹಳ್ಳಿ ತಾಂಡಾ ಹಾಗೂ ರೈಸಿಂಗ್ ಸ್ಟಾರ್ ಚಿಕ್ಕಬಿಡನಾಳ ತಂಡಗಳು ಫೈನಲ್ ನಲ್ಲಿ ಮುಖಾಮುಖಿ ಆಗಲಿವೆ' ಎಂದರು.

ಈ ಟೂರ್ನಿಯ ಪ್ರಥಮ ಬಹುಮಾನ 2 ಲಕ್ಷ ರೂ. ಹಾಗೂ ಒಂದು ಟ್ರೋಫಿ, ಎರಡನೆಯ ಬಹುಮಾನ ನಗದು 1 ಲಕ್ಷ ರೂ. ಹಾಗೂ ಒಂದು ಟ್ರೋಫಿ, ಮೂರನೇ ಬಹುಮಾನ 50 ಸಾವಿರ ಹಾಗೂ ಒಂದು ಟ್ರೋಪಿ ನೀಡಲಾಗುವುದು ಎಂದರು.

ಈ ಸಂದರ್ಭದಲ್ಲಿ ಟೂರ್ನಿಯ ಆಯೋಜಕರಾದ ಈರಣ್ಣ ಶಿರೂರು, ರಸೂಲ್ ಬನ್ನಿಕಟ್ಟಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.



# ಯಾವುದೇ ಮಗು ಜಂತುನಿವಾರಕ ಮಾತ್ರೆಯಿಂದ ವಂಚಿತರಾಗದಿರಲಿ: ಸಿಇಓ ವರ್ಣಿತ್ ನೇಗಿ



• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ:

ರಾಷ್ಟ್ರೀಯ ಜಂತುಹುಳು ನಿವಾರಣಾ ಕಾರ್ಯಕ್ರಮದಡಿ ಯಾವುದೇ ಮಗು ಜಂತುನಿವಾರಕ ಮಾತ್ರೆಯಿಂದ ವಂಚಿತವಾಗದಂತೆ ನೋಡಿಕೊಳ್ಳಬೇಕೆಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವರ್ಣಿತ್ ನೇಗಿ ಹೇಳಿದರು.

ಅವರು ಇತ್ತೀಚೆಗೆ ಜಿಲ್ಲಾ ಪಂಚಾಯತ್ ಸ್ಥಾಯಿ ಸಮಿತಿ ಕೊಠಡಿಯಲ್ಲಿ ರಾಷ್ಟ್ರೀಯ ಜಂತುಹುಳು ನಿವಾರಣಾ ಕಾರ್ಯಕ್ರಮದ ಕುರಿತು ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಹಮ್ಮಿಕೊಂಡಿದ್ದ ಜಿಲ್ಲಾಮಟ್ಟದ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕೊಪ್ಪಳ ಇವರ ಸಂಯುಕ್ತಾಶ್ರಯದಲ್ಲಿ ಫೆಬ್ರುವರಿ 10 ರಂದು ನಡೆಯುವ ರಾಷ್ಟ್ರೀಯ ಜಂತುಹುಳು ನಿವಾರಣಾ ಕಾರ್ಯಕ್ರಮವನ್ನು ಸಮರ್ಪಕವಾಗಿ ಅನುಷ್ಠಾನ ಮಾಡಲು ಸಂಬಂಧಿಸಿದ ವಿವಿಧ ಇಲಾಖೆಗಳ ಅಧಿಕಾರಿಗಳು ಸಮನ್ವಯ ಸಾಧಿಸಿ ಅಗತ್ಯ ಕ್ರಮಕೈಗೊಳ್ಳಬೇಕು. ಜಂತುನಿವಾರಕ ಮಾತ್ರೆಯಿಂದ ಯಾವುದೇ ಮಗು ವಂಚಿತವಾಗದಂತೆ ಕ್ರಮವಹಿಸುವುದರ ಜೊತೆಗೆ ಅರ್ಹರಿರುವ ಎಲ್ಲಾ ಮಕ್ಕಳಿಗೆ ಕಡ್ಡಾಯವಾಗಿ ಈ ಮಾತ್ರೆ ನೀಡುವಂತಾಗಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಂತು ರಹಿತ ಮಗು ದೇಶದ ಸಂಪತ್ತು, ಮಕ್ಕಳ ಆರೋಗ್ಯ ಕಾಪಾಡುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಹಾಗಾಗಿ ಈ ಕಾರ್ಯಕ್ರಮದ ಬಗ್ಗೆ ಹೆಚ್ಚು ಪ್ರಚಾರ ನಡೆಸಿ, ಆರೋಗ್ಯವಂತ ಸಮಾಜ ನಿರ್ಮಾಣ ಮಾಡಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಹೇಳಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಟಿ.ಲಿಂಗರಾಜು ಅವರು ಮಾತನಾಡಿ, ಈ ಕಾರ್ಯಕ್ರಮದ ಉದ್ದೇಶ ಮಕ್ಕಳಲ್ಲಿ ಮತ್ತು ಹದಿ–ಹರೆಯದವರಲ್ಲಿ ಕಂಡಬರುವ ಜಂತುಬಾದೆ, ಅಪೌಷ್ಠಿಕತೆ ಮತ್ತು ರಕ್ತಹೀನತೆ ತಡೆಗಟ್ಟುವುದು ಹಾಗೂ ಮಾನಸಿಕ ಮತ್ತು ದೈಹಿಕವಾಗಿ ಸದೃಢವಾಗಿ ಬೆಳವಣಿಗೆ ಹೊಂದಲು ಪ್ರತಿ 6 ತಿಂಗಳಿಗೊಮ್ಮೆ ಈ ಜಂತುನಿವಾರಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತದೆ ಎಂದರು.

ಜಿಲ್ಲಾ ಆರ್.ಸಿ.ಹೆಚ್ ಹಾಗೂ ಕುಟುಂಬ ಕಲ್ಯಾಣ ಅಧಿಕಾರಿ ಡಾ. ಪ್ರಕಾಶ ವಿ. ಅವರು ಮಾತನಾಡಿ, ಜಿಲ್ಲೆಯಲ್ಲಿ ಫೆಬ್ರವರಿ 10 ರಂದು "ರಾಷ್ಟ್ರೀಯ ಜಂತುಹುಳು ನಿವಾರಣಾ ಕಾರ್ಯಕ್ರಮದ"ವನ್ನು ಆಯೋಜಿಸಲಾಗಿದ್ದು, 1 ರಿಂದ 19 ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ಜಂತುನಿವಾರಕ ಅಲ್ಬೆಂಡಾಜೋಲ್ ಮಾತ್ರೆಯನ್ನು ಅಂಗನವಾಡಿ ಕೇಂದ್ರದ ಮಕ್ಕಳಿಗೆ, ಶಾಲೆ, ಕಾಲೇಜು (ಸರಕಾರಿ, ಖಾಸಗಿ)ಗಳ ವಿದ್ಯಾರ್ಥಿಗಳಿಗೆ ಮಾತ್ರೆಯನ್ನು ನೀಡಲಾಗುತ್ತಿದೆ. ಈ ದಿನಾಂಕದಂದು ಗೈರು ಹಾಜರಾದ ಮಕ್ಕಳಿಗೆ ಫೆ.16ರಂದು ಮಾತ್ರೆಗಳನ್ನು ನೀಡಲಾಗುತ್ತದೆ. ಶಾಲೆಯಿಂದ ಹೊರಗುಳಿದ ಮಕ್ಕಳಿಗೂ ಸಹ ಈ ಮಾತ್ರೆಯನ್ನು ಅಂಗನವಾಡಿ ಕೇಂದ್ರಗಳಲ್ಲಿ ನೀಡಲಾಗುತ್ತದೆ. 1 ರಿಂದ 2 ವರ್ಷದ ಮಕ್ಕಳಿಗೆ ಅರ್ಧಮಾತ್ರೆ (200ಎಂಜಿ) 2 ಎರಡು ವರ್ಷ ಮೇಲ್ಪಟ್ಟ ಮಕ್ಕಳಿಗೆ ಪೂರ್ತಿಮಾತ್ರೆ (400ಎಂಜಿ) ನೀಡಬೇಕಿರುತ್ತದೆ. ಸಣ್ಣ ಮಕ್ಕಳಿಗೆ ಮಾತ್ರೆಯನ್ನು ನೀರಿನಲ್ಲಿ ಕರಗಿಸಿ ನಿದಾನವಾಗಿ ಕುಡಿಸಬೇಕು. ಈ ಕಾರ್ಯಕ್ರಮ ಕುರಿತು, ವಿವಿಧ ಸಮುದಾಯ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರಗಳ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುವ ಆರೋಗ್ಯ ಕಾರ್ಯಕರ್ತೆಯರಿಗೆ, ಆಶಾ ಕಾರ್ಯಕರ್ತೆಯರಿಗೆ, ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ ಶಾಲಾ ಶಿಕ್ಷಕರಿಗೆ ಆರೋಗ್ಯ ಕೇಂದ್ರದ ಹಂತದಲ್ಲಿ ತರಬೇತಿ ನೀಡಲಾಗುತ್ತದೆ ಎಂದು ಸಭೆಯಲ್ಲಿ ವಿವರಿಸಿದರು. ಸಭೆಯಲ್ಲಿ ಆರೋಗ್ಯ ಜಿಲ್ಲಾ ಅನುಷ್ಠಾನಾಧಿಕಾರಿ ಡಾ. ರವೀಂದ್ರನಾಥ್ ಎಂ.ಹೆಚ್., ಜಿಲ್ಲಾ ಸರ್ವೇಕ್ಷಣಾಧಿಕಾರಿ ಹಾಗೂ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ. ನಂದಕುಮಾರ, ಜಿಲ್ಲಾ ಕ್ಷಯರೋಗ ಹಾಗೂ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ. ಶಶಿಧರ, ಜಿಲ್ಲಾ ಅಸಾಂಕ್ರಾಮಿಕ ರೋಗಗಳ ನಿಯಂತ್ರಣಾಧಿಕಾರಿ ಡಾ. ಪ್ರಕಾಶ ಹೆಚ್., ಜಿಲ್ಲಾ ಯೋಜನಾ ಅಭಿವೃದ್ಧಿ ಅಧಿಕಾರಿ ಡಾ. ಕುಮಾರಸ್ವಾಮಿ ಗೋನಾಳ ಸೇರಿದಂತೆ ಎಲ್ಲಾ ತಾಲೂಕಾ ಆರೋಗ್ಯಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು, ವೈದ್ಯಾಧಿಕಾರಿಗಳು, ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿಗಳು, ಆರೋಗ್ಯ ಶಿಕ್ಷಣಾಧಿಕಾರಿಗಳು ಹಾಗೂ ಇತರೆ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಕಲಿಕೇರಿಯವರ ಅನುಭವದ ಅಪೂರ್ವ ರಸಧಾರೆ..!

• ಡಾ.ಎಂ.ಮಹ್ಮದ್ ಬಾಷಗೂಳ್ಯಂ

ಕೆಂಭಾವಿಯ ಅನುಭಾವದ ಆಕರದಂತೆ ನಡೆದಾಡುತ್ತಲೇ ಸಾಹಿತ್ಯಾಸಕ್ತರನ್ನು ಚುಂಬಕ ಶಕ್ತಿಯಂತೆ ಸೆಳೆಯುವ ವೀರಣ್ಣ ಕಲಕೇರಿ ನಮ್ಮ ನಡುವಿನ ಪ್ರತಿಭಾವಂತ ಲೇಖಕ. ಹಿರಿಯ ವರದಿಗಾರರಾಗಿ ಜನರಿಗೆ ಚಿರಪರಿರಪರಿತರಾಗಿದ್ದರೂ, ಅಸ್ತಿತ್ವದ ಅನ್ವೇಷ್ಣೆಯ ಮೂಲಕ ವೈಚಾರಿಕ ವರ್ಗಕ್ಕೆ ತೀರ ಹತ್ತಿರವಾಗಿದ್ದಾರೆ. ಅವರ ಬರಹಗಳಲ್ಲಿ ಜನಪರ, ಜೀವಪರ, ಸಂವೇದನಾ ಶೀಲತೆ ಎದ್ದು ಕಾಣುತ್ತದೆ. ಇಲ್ಲಿ ಅವರ ಮೌಲಿಕ ವಿಚಾರಧಾರೆಗಳ ಲೇಖನಗಳು ಕಿರಿದರಲ್ಲಿ ಹಿರಿಯ ಅರ್ಥ ಹಾಗೂ ಆದರ್ಶ ಬಿತ್ತಿವೆ. ಎಲ್ಲವೂ ಮನುಕುಲದ ಒಳಿತಿಗಾಗಿಯೆ ಇರುವ ಅಸ್ತಿತ್ವದ ಅನ್ವೇಷಣೆ ವೀರಣ್ಣ ಕಲಿಕೇರಿಯವರ ಅನುಭವದ ಅಪೂರ್ವ ರಸಧಾರೆ..!

ಜೀವನಾಭವ ಒಂದು ವರ ಹಾಗೆಯೇ ಶಾಪ ಕೂಡ. ಇಲ್ಲಿ ವೀರಣ್ಣ ಅವರ ಎಲ್ಲಾ ಲೇಖನಗಳು ಜೀವನಾನುಭವ ಪರದ ರೂಪದಲ್ಲಿ ಕಾರ್ಯನಿರ್ವಹಿಸಿರುವುದು ಸ್ಮರಣೀಯ. ಸತ್ಯ, ನ್ಯಾಯ, ದಯೆ, ದಾಸೋಹ, ಕಾಯಕ, ಸಮಾನತೆ, ಸಮಾಜಮುಖಿ ಮೌಲ್ಯ, ಪರಸ್ಪರ ಸಂವನಕ್ಕೆ ಬೇಕಾದ ಸಹಿಷ್ಣು ಭಾವ ಎರಕಹೊಯ್ದಿದೆ. ಜಂಜಡ ಬದುಕಿನ ಮೌಲ್ಯಗಳಿಂದ ತುಂಬಿದ ಚಿತ್‌ರೂಪ ಇಲ್ಲಿ ವೇದ್ಯ. ಸಮಾಜದ ಕಟ್ಟಕಡೆಯ ಮನುಷ್ಯನಿಗೂ ಅರಿವು ಮತ್ತು ಪ್ರಜ್ಞೆ ಸದಾ ಸಂವಹನ




**ಅಸ್ತಿತ್ವದ ಅನ್ವೇಷಣೆ**
**ಕೃತಿ–ವಿಮರ್ಶೆ**



ಶಿಲ್ಪವಾಗಿ ಕಾರ್ಯನಿರ್ವಹಿಸಬೇಕೆನ್ನುವುದು ಬಸವಣ್ಣನವರ ಆಶಯವಾಗಿತ್ತು. ವೀರಣ್ಣನ ಇಲ್ಲಿ ಬಹುತೇಕ ಚಿಂತನಾಲಹರಿ ಅದೇ ದಿಶೆಯಲ್ಲಿ ಹರಿದಿರುವುದಕ್ಕೆ ನಿರ್ದಶನ ಅನೇಕ. ಟಿ.ಎಸ್. ಎಲಿಯಟ್‌ನ tradition and individual talent ವಾದವನ್ನು ಪರೋಕ್ಷ ನೆಲೆಯಲ್ಲಿ ಅಭೇದ್ಯ ಸ್ವರೂಪಕ್ಕೆ ಭಟ್ಟಿ ಇಳಿಸಿದಂತೆ ಕಾಣುವ ಲೇಖನಗಳ ಸಾಲುಗಳು ಆಚಾರ, ಸಂಪ್ರದಾಯ ನೆಲೆಯಲ್ಲಿ ಕಾಣಲು ಯತ್ನಿಸಿರುವುದು ಲೇಖಕನ ಪ್ರತಿಭಾ ಸಂಪನ್ನತೆಗೆ ಸಾಣೆ ಹಿಡಿದಿವೆ.

ನಡೆದಾಡುವ ದೇವರು ಖ್ಯಾತಿಯ ಪೂಜ್ಯ ಶ್ರೀ ಸಿದ್ದೇಶ್ವರ ಶ್ರೀಗಳ ಜೀವಪರ ವೈಚಾರಿಕತೆ, ಡಾ. ಹಾ.ಮಾ.ನಾಯಕರ ಅಂಕಣ ಬರಹಗಳಂತೆ ಮುಂದುವರಿದ ಅಮೂರ್ತ ಭಾವಗಳಿಗೆ ಇಲ್ಲಿನ ಅನೇಕ ಲೇಖನಗಳು ಪೂರಕವಾಗಿ ಸ್ಪಂದಿಸಿವೆ.



ಸದ್ವಿಚಾರ ಪರಂಪರೆ, ಸದಾಚಾರಗಳ ನೆಲೆ ಹಾಗೂ ಸಂಪ್ರದಾಯದ ಶ್ರೀಮಂತಿಕೆಯ ಪುನರ್ ಪ್ರತಿಷ್ಠಾಪನೆಗೆ ಒತ್ತಾಸೆಯಾಗಿ ಮಿಡಿಯುವ ಅಮಿತೋತ್ಸಾಹದ ಚೈತನ್ಯ ಹಲವಾರು ಆಶೋತ್ತರಗಳಿಗೆ ವೀರಣ್ಣನ ಬರಗಹಗಳು ನೀರೆರಿದವೆ. ಚಿಂತನೆ, ತಾತ್ವಿಕ ಭಾವಗಳಿಗೆ ಜ್ಞಾನದ ಬೆಳಕಿನ ಮೂಲಕ ಜೀವತುಂಬಲು ಬೇಕಾಗುವ ವಸ್ತು ನಿರೂಪಣೆ, ವಿನೂತನ ಶೈಲಿಯ ತಾಂತ್ರಿಕ ವಿಧಾನ, ಸಹೃದಯನಿಗೆ ತೀರಾ ಹತ್ತಿರವಾಗಲು ಅಗತ್ಯವಾದ ಸಂವನ ಭಾಷೆ ಹೃದಯಂಗಮವಾಗಿ ಅಭಿವ್ಯಕ್ತಿಗೊಂಡಿರುವುದು ಅಸ್ತಿತ್ವದ ಅನ್ವೇಷಣೆಯ ವೈಶಿಷ್ಟಗಳಲ್ಲಿ ಒಂದು.

ದಾಖಲಾಗಿರುವ ಪ್ರತಿಯೊಂದು ಲೇಖನದಲ್ಲೂ ಭಾವ ಶುದ್ಧಿಗೆ ಬೇಕಾದ ಪರಿಕರ ಕಾಣಬಹುದು. ಗಮನಿಸಬೇಕಾದ ಮತ್ತೊಂದು ಅಮೂರ್ತ ವಿಚಾರವೆಂದರೆ, ಅರಿವಿನ ಬರದಿಂದ ನೆಮ್ಮದಿ ದೂರ, ಜ್ಞಾನ ಜನಮನಕ್ಕೆ ಹಿತವಾಗಿರಲಿ, ಬದುಕಿನ ನಿಜ ಸೌಂದರ್ಯ, ವಾದಗಳಿಂದ ಸಮಯದ ಸದುಪಯೋಗವಾಗಲಿ, ಅಹಂ ತೊರೆದು ಸಂಬಂಧಗಳಿಗೆ ಇಂಬು ನೀಡೋಣ.. ಮುಂತಾದ ಲೇಖನಗಳಲ್ಲಿಯೂ ಕಂಡು ಬರುವ ಸಂಭವನೀಯತೆ–Probability ನಮ್ಮದೇ ಎನ್ನುವಂತೆ ಭಾಸವಾಗುತ್ತದೆ. ಮಿತ್ರಸಂಹಿತಾ, ಕಾಂತಾಕುಶಲೋಪಚಾರ ಮಾದರಿಗಳಂತೆ ವೇದ್ಯವಾಗುತ್ತದೆ.

ಭಕ್ತಿ, ಭಕ್ತ, ಧರ್ಮ, ಅರಿವು ಅರಳಿಸೋಣ, ಮನದ ಮೂಲ ಕಾಪಾಡಿಕೊಳ್ಳೋಣ, ಮೌಲ್ಯ ಮರೆಯಾಗಿ ಸತ್ಯ ಸರಿದು ನೋಡುತ್ತಿದೆ ಲೇಖನಗಳಲ್ಲೂ ನಿತ್ಯ ಬದುಕಿನಲ್ಲಿ ಬಂದು ಹೋಗುವ ಅರಿವು, ಸ್ನೇಹ, ಸ್ವಾರ್ಥ, ಸಾಧನೆ, ಜ್ಞಾನ, ಅಹಂ, ದ್ರೋಹ, ಪ್ರೇರಣೆ, ಸತ್ಯ, ವಾದ–ಸಂವಾದ, ಪ್ರಬುದ್ಧತೆ, ಭಕ್ತಿ, ವಿವೇಕ, ಸರಳತೆ ಹಾಸುಹೊಕ್ಕಾಗಿದೆ. ಅದರಾಚೆ ಮಿಡಿಯುವ ಕಲ್ಪನೆಗಳಿಗೆ ಬರಹದ ಶಿಲ್ಪದ ಮೆರಗು ಕಾಣಲು ಅಡ್ಡಿ ಇಲ್ಲ. ದೈನಂದಿ ಜೀವನಕ್ಕೆ ಮಾರ್ಗವಾಗಿರುವ ನುಡಿಗಟ್ಟು, ಗಾದೆ, ವಚನಗಳ ಬಳಕೆ ಗಮನ ಸೆಳೆಯುತ್ತದೆ. ಭಾಷಿಕ ನೆಲೆಯಲ್ಲಿ ಪ್ರಾದೇಶಿಕ ಸೊಗಡು ಆಸ್ವಾದಿಸಲು ಸಾಕಷ್ಟು ಅವಕಾಶವಿದೆ.


ವಾಸ್ತವದ ಸವಿಯನ್ನು ಅನುಭವಿಸೋಣ, ನಿರಾಳತೆಗೆ ಹತ್ತಿರವಾಗೋಣ, ಸಂಶಯ ಸ್ವಪರ ಸ್ವಾಸ್ಥ್ಯ ಹಾಳುಗೆಡದಂತಿರಲಿ, ಸರಳತೆಗಿಂತ ಮಿಗಿಲಾದ ಶ್ರೇಷ್ಠತೆ ಬೇರೇನಿದೆ, ಮೂಲ ಮನದ ಪ್ರಾಪ್ತಿಗಾಗಿ ಹಂಬಲಿಸಿ. ಸಾರ್ವತ್ರಿಕ ಸಂತೃಪ್ತಿಗೆ ಸದ್ಭಾವಗಳು ಅರಳಲಿ, ಹಿರಿದಾದ ಪ್ರಯತ್ನದಿಂದ ಹಿರಿತನ.. ಮುಂತಾದ ಲೇಖನಗಳಲ್ಲಿ ಜೀವನಾನುಭವ ಹದವಾಗಿ ಬೆರೆತಿದೆ. ಪ್ರತಿಯೊಂದು ಲೇಖನಕ್ಕೆ ಆಕರವಾಗಿರುವ ಚಿಂತನೆಗೆ ಸಾಣೆ ಹಿಡಿದಿದೆ. ಪ್ರಸಿದ್ಧ ಲೇಖಕ ಅಲೆನ್ ರಾಡ್‌ವೆ ಅವರ ಅರ್ಥಮೀಮಾಮಂಸೆಯ -hermenutic dilemma ಪ್ರಭಾವವನ್ನು ಸಾಧ್ಯಶ್ಯವಾಗಿ, ಸಾಂಕೇತಿಕವಾಗಿ ಇಲ್ಲಿ ಯಥೇಚ್ಛವಾಗಿ ಕಾಣಬಹುದು. ಇಲ್ಲಿ ದಾಖಲಿಸಿರುವ ಇಂತಹ ಅನೇಕ ಅಂಶಗಳ ಪರ–ವಿರೋಧವನ್ನು ವಾದಕ್ಕೆ ಅನುಗುಣವಾಗಿ ಜಾರಿಯಲ್ಲಿರಿಸಿದರೂ, ತರ್ಕದಿಂದ ಮತ್ತಿನ್ನೇನೊ ಹೊಸ ಹೊಳಹು ಬೆಳಕಿಗೆ ಬರಲಿದೆ. ಇದರಿಂದಾಗಿ ಅಸ್ತಿತ್ವದ ಅನ್ವೇಷಣೆ ಒಂದು ಉತ್ತಮ ಕೃತಿ. ದೇಶ ವಿದೇಶಗಳಿಂದ ಬರುವ ಬೇಡಿಕೆ ಇದರ ಮೌಲಿಕತೆಯನ್ನು ಸಾರುತ್ತದೆ. ಅತಿ ಹೆಚ್ಚು ಪ್ರತಿ ಮಾರಾಟವಾಗಿರುವುದು ಅದರ ಜಮಪ್ರಿಯತೆಗೆ ಸಾಕ್ಷಿ ಕೂಡ.

## ಹುಟ್ಟುಹಬ್ಬ: ಅರ್ಥಪೂರ್ಣ ಆಚರಣೆ



**ಬೆಂಗಳೂರು:** ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ ಸಿ ವೇಣುಗೋಪಾಲ್ ರವರ ಹುಟ್ಟುಹಬ್ಬವನ್ನು ಬಸವೇಶ್ವರ ನಗರದ ಬಾಂಧವ್ಯ ಮಕ್ಕಳ ಸೇವಾಶ್ರಮ ಹಾಗೂ ಮಹಾಲಕ್ಷ್ಮೀ ಹಿರಿಯ ನಾಗರಿಕರ ಯೋಗ ಕ್ಷೇಮದಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಅಧ್ಯಕ್ಷರು ಹಾಗೂ ಕೆಪಿಸಿಸಿ ಉಪಾಧ್ಯಕ್ಷ ಎಸ್ ಇ ಸುಧೀಂದ್ರರವರು ಕಾಂಗ್ರೆಸ್ ಮುಖಂಡ ಸುಧಾಕರ್, ರೇಖಾ ಸುಧಾಕರ್, ನಾಗಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದಂತಹ ಸುಧೀಂದ್ರ, ಮಹಾಲಕ್ಮೀ ಲೇಔಟ್ ಬ್ಲಾಕ್ ಅಧ್ಯಕ್ಷ ಮಂಜೇಶ್, ಕಾಮಾಕ್ಷಿಪಾಳ್ಯ ಕಾಂಗ್ರೆಸ್ ಮುಖಂಡ ಕರೆಕಲ್ ರಮೇಶ್, ಸುರೇಶ್ ಸುನಿಲ್, ಮಹೇಶ್, ಮಂಜು, ಲಕ್ಷ್ಮಿಕಾಂತ್ ಹಾಗೂ ಇನ್ನೂ ಮುಂತಾದ ಮುಖಂಡರು ಪಾಲ್ಗೊಂಡಿದ್ದರು.



ಬಸವಕಲ್ಯಾಣದಲ್ಲಿ ಪತ್ರಿಕೆಯನ್ನು ಅವಲೋಕಿಸಿದ ಸಂಪಾದಕ ರಮೇಶ್ ರೆಡ್ಡಿ. ಪತ್ರಿಕಾ ಆಡಳಿತ ಮಂಡಳಿಯ ಡಾ.ಮಾಣಿಕ್ ರೆಡ್ಡಿ ಇತರರು ಇದ್ದರು.





ಹುಮನಾಬಾದ್: ವಿಶ್ವ ಶಾಂತಿಗಾಗಿ ಥಾಯ್ಲೆಂಡ್ ಬಿಕ್ಕು ಸಂಘದಿಂದ ಕಲಬುರಗಿ ನಗರದಿಂದ ತೆಲಂಗಾಣದ ನಾಗಾರ್ಜುನ ಸಾಗರದ ಬುದ್ಧವನಂ ವರೆಗೆ ಹಮ್ಮಿಕೊಂಡಿರುವ ಬೌದ್ಧ ಧರ್ಮದ 3ನೇ ಧಮ್ಮಯಾತ್ರೆಗೆ ನಗರದ ಹೋರ ವಲಯದ ಲಾಲಧರಿ ಹತ್ತಿರ ಗುರುವಾಮಾಜಿ ಸಚಿವ ರಾಜಶೇಖರ ಪಾಟೀಲ್ ಸ್ವಾಗತಿಸಿದರು. ಮಾಜಿ ಎಂಎಲ್ಸಿ ಅರವಿಂದಕುಮಾರ ಅರಳಿ, ಜಿಪಂ. ಮಾಜಿ ಉಪಾಧ್ಯಕ್ಷ ಲಕ್ಷ್ಮಣರಾವ ಬುಳ್ಳಾ, ಧರ್ಮರಾಯ ಘಾಂಗ್ರೆ, ಶಾಂತಕುಮಾರ ಅರಳಿ, ರವಿಚಂದ್ರನ್ ಸಂಗಮ್, ಲೋಕೇಶ, ಉಮೇಶ, ವೈಜಿನಾಥ ಸೇರಿ ಅನೇಕರಿದ್ದರು.

## ಮೈಕ್ರೋ ಡ್ರಾಮಾ ಸೀರೀಸ್‌ಗಳ ಆಕರ್ಷಣೆ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

'ಚಿತ್ರಮಂದಿರಗಳ, ಟಿವಿಗಳ ಹಾರಿಜಾಂಟಲ್ ಪರದೆಯಲ್ಲಿ ಚಿತ್ರ ನೋಡುವ ಕಾಲ ಬದಲಾಗಿದ್ದು, ಈಗ ಮೊಬೈಲ್ ನಲ್ಲಿ ನೋಡುವ ವರ್ಟಿಕಲ್ ಕಂ–ಟೆಂಟ್ ಗೆ ಬೇಡಿಕೆ ಹೆಚ್ಚಾಗಿದೆ. ಈ ವಿಭಾಗದಲ್ಲಿ ಚೀನಾ ಮುಂಚೂಣಿಯಲ್ಲಿದ್ದು, ಅನಂತರದ ಸ್ಥಾನದಲ್ಲಿ ಅಮೆರಿಕಾ ಇದೆ. ಭಾರತದಲ್ಲಿ ಈಗಾಗಲೇ ಮೈಕ್ರೋ ಡ್ರಾಮಾ ಸೀರೀಸ್‌ಗಳು ಜನರನ್ನು ಆಕರ್ಷಿಸುತ್ತಿದ್ದು, ಈ ವಿಭಾಗವು ಭವಿಷ್ಯದ ಮಾಧ್ಯಮವಾಗಲಿದೆ ಎಂಬ ಅಭಿಪ್ರಾಯವು 'ವರ್ಟಿಕಲ್ ಫಿಲ್ಮ್ ಮೇಕಿಂಗ್ ಗೋಷ್ಠಿಯಲ್ಲಿ ವ್ಯಕ್ತವಾಗಿದೆ.

ಈ ಕುರಿತಾಗಿ ಮಾತನಾಡಿದ ಜೀ ಟಿವಿ ಸಮೂಹದಲ್ಲಿ ಮೈಕ್ರೋ ಸೀರೀಸ್ ವಿಭಾಗದಲ್ಲಿ ಕೆಲಸ ಮಾಡುತ್ತಿರುವ ವರ್ಷ ಅವರು, 'ವರ್ಟಿಕಲ್ ಫಿಲ್ಮ್ ಮೇಕಿಂಗ್ ವಿಭಾಗದಲ್ಲಿ ಚೀನಾ ಜಾಗತಿಕವಾಗಿ ಮುಂಚೂಣಿಯಲ್ಲಿದೆ. ಈಗಾಗಲೇ ಚೀನಾದಲ್ಲಿ 40 ಸಾವಿರಕ್ಕೂ ಹೆಚ್ಚು



ಮೈಕ್ರೋ ಡ್ರಾಮಾಗಳು ಬಿಡುಗಡೆಯಾಗಿದ್ದು, ಮೈಕ್ರೋ ಡ್ರಾಮಾಗಳ ಆದಾಯವು ಚಿತ್ರಮಂದಿರಗಳ ಗಳಿಕೆಯನ್ನು ಮೀರಿಸುತ್ತಿದೆ. ಅಮೆರಿಕಾದಲ್ಲಿ ಕಳೆದ ಎರಡೂವರೆ ವರ್ಷಗಳಿಂದ ಈ ಟ್ರೆಂಡ್ ಬೆಳೆಯುತ್ತಿದ್ದರೆ, ಭಾರತ ಈಗ ಪ್ರಬಲವಾಗಿ ಬೆಳೆಯುತ್ತಿದೆ. ಜೀ ಮತ್ತು ಕುಕು ನಂತಹ ಸಂಸ್ಥೆಗಳು ಈ ನಿಟ್ಟಿನಲ್ಲಿ ಹೆಜ್ಜೆ ಇಟ್ಟಿದ್ದು, 2026–27ರ ವೇಳೆಗೆ ದೊಡ್ಡ ಸಂಸ್ಥೆಗಳು ಈ ವಿಭಾಗಕ್ಕೆ ಲಗ್ಗೆ ಇಡಲಿವೆ. ಮೈಕ್ರೋ ಡ್ರಾಮಾದಲ್ಲಿ ಮೌನವಿಲ್ಲ, ನಿರಾಳತೆ ಇಲ್ಲ, ನಿಧಾನವಿಲ್ಲ. ಇಲ್ಲಿ ಸದ್ದುಗದ್ದಲವಿದೆ, ವೇಗವಿದೆ ಎಂದರು.

## ಮಕ್ಕಳಲ್ಲಿ ಶಿಕ್ಷಣದ ಜತೆಗೆ ಸಂಸ್ಕಾರ ಬೆಳೆಸಿ

• ಪರಶುರಾಮ ಕರಣಂ, ಭಾಲ್ಕಿ

ಮಕ್ಕಳನ್ನು ಬಾಲ್ಯದಿಂದಲೇ ಶಿಕ್ಷಣದ ಜತೆಗೆ ಉತ್ತಮ ಸಂಸ್ಕಾರ ಬೆಳೆಸಿ ದೇಶದ ಉತ್ತಮ ನಾಗರಿಕರನ್ನಾಗಿಸುವ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ ಎಂದು ಬಸವಕಲ್ಯಾಣ ಅನುಭವಮಂಟಪದ ಅಧ್ಯಕ್ಷ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಹೇಳಿದರು.

ಪಟ್ಟಣದ ಲೆಕ್ಚರ್ ಕಾಲೋನಿಯ ಖಡಕೇಶ್ವರ ಪ್ರೌಢಶಾಲೆಯಲ್ಲಿ ಗುರುವಾರ ಆಯೋಜಿಸಿದ್ದ ಅಂತರ ಶಾಲಾಮಟ್ಟದ ರಸಪ್ರಶ್ನೆ ಸ್ಪರ್ಧೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ದೇಶದ ಭವಿಷ್ಯ ಆಗಿರುವ ಮಕ್ಕಳಲ್ಲಿ ಅದ್ಭುತ ಶಕ್ತಿ ಅಡಗಿರುತ್ತದೆ ಅದನ್ನು ಗುರುತಿಸುವ ಕೆಲಸ ಆಗಬೇಕು ಎಂದರು. ವಿದ್ಯಾರ್ಥಿಗಳು ಶರೀರ, ಮನಸ್ಸು ಮತ್ತು ಆತ್ಮವನ್ನು ಶುದ್ಧವಾಗಿರಿಸಿಕೊಂಡರೆ ಬದುಕು ಸುಂದರವಾಗಿ ರೂಪಗೊಳ್ಳಲು ಸಾಧ್ಯವಾಗುತ್ತದೆ. ಓದಿನ ಜತೆಗೆ ಒಂದಿಷ್ಟು ಸಮಯ ಪೂಜೆ, ಜಪ, ಧ್ಯಾನಕ್ಕೆ ಮೀಸಲಿಡಿರುವುದರಿಂದ ದೈವಿ ಶಕ್ತಿ ಹೆಚ್ಚಿಸುತ್ತದೆ.



ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳು ದಡ್ಡರಾಗಿರುವುದಿಲ್ಲ. ಶಿಕ್ಷಕರಾದವರೂ ಅವರಲ್ಲಿನ ಪ್ರತಿಭೆಯನ್ನು ಪತ್ತೆ ಹಚ್ಚುವ ಕೆಲಸ ಮಾಡಬೇಕು ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿದ ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಜಿ.ಹಳ್ಳದ ಮಾತನಾಡಿ, ಎಸ್ಸೆಸ್ಸೆಲ್ಸಿ ಫಲಿತಾಂಶ ಸುಧಾರಣೆಗೆ ರಸಪ್ರಶ್ನೆ ಸ್ಪರ್ಧೆ ಅತ್ಯಂತ ಸಹಕಾರಿಯಾಗಿದೆ. ವಿದ್ಯಾರ್ಥಿಗಳು ಸ್ಮಾರ್ಟ್‌ವರ್ಕ್ ಮೂಲಕ ಕಲಿಕೆಯ ಮಟ್ಟವನ್ನು ಹೆಚ್ಚಿಸಿ ಕೊಳ್ಳಬೇಕು ಎಂದರು.


## ಪ್ಯಾಕೇಜಿಂಗ್ ಅಭಿವೃದ್ಧಿಪಡಿಸಲು ಅಮೆಜಾನ್, ಐಐಟಿ ರೂರ್ಕಿ ಸಹಭಾಗಿತ್ವ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಕೃಷಿತ್ಯಾಜ್ಯದಿಂದ ನವೀನ ಪ್ಯಾಕೇಜಿಂಗ್ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸಲು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ) ರೂರ್ಕಿ ಜೊತೆಗೆ ಸಹಭಾಗಿತ್ವ ಮಾಡಿಕೊಂಡಿರುವುದಾಗಿ ಅಮೆಜಾನ್ ಇಂಡಿಯಾ ಇಂದು ಘೋಷಿಸಿದೆ.

ಈ ಯೋಜನೆಯು ಮರರಹಿತ ಕಾಗದ ತಂತ್ರಜ್ಞಾನವನ್ನು ರೂಪಿಸುವ ಗುರಿಯನ್ನು ಹೊಂದಿದ್ದು, ಇದು ಕೃಷಿ ತ್ಯಾಜ್ಯವನ್ನು ಸುಡುವುದನ್ನು ತಪ್ಪಿಸುವುದಲ್ಲದೆ, ಹೊಸ ಮರದ ತಿರುಳಿನ ಅಗತ್ಯತೆಯ ಒತ್ತಡವನ್ನು ಕಡಿಮೆ ಮಾಡುತ್ತದೆ. ಹಗುರವಾದರೂ ಬಲಿಷ್ಠವಾಗಿರುವ ಈ ಪ್ಯಾಕೇಜಿಂಗ್ ಸಾಮಾಗ್ರಿಗಳು ಸಾಂಪ್ರದಾಯಿಕ ಮರದ ತಿರುಳಿನ ಕಾಗದ ಅಥವಾ ಪ್ಲಾಸ್ಟಿಕ್ ಚೀಲಗಳಿಗೆ ಪರ್ಯಾಯವಾಗಿ ಬಳಕೆಯಾಗಲಿದ್ದು, ಮರುಬಳಕೆ ಮಾಡಬಹುದಾದ ಮತ್ತು ಮನೆಯಲ್ಲೇ ಗೊಬ್ಬರವಾಗಬಲ್ಲ ಆಯ್ಕೆಗಳನ್ನು ಒದಗಿಸುತ್ತವೆ.

ಈ ಸಂಶೋಧನೆಯು ಗೋಧಿ ಹುಲ್ಲು ಮತ್ತು ಕಬ್ಬಿನ ಸಿಪ್ಪೆಯಂತಹ ಬೆಳೆಗಳ ಉಳಿಕೆಗಳನ್ನು ಉತ್ತಮ



ಗುಣಮಟ್ಟದ ತಿರುಳನ್ನಾಗಿ ಪರಿವರ್ತಿಸುವತ್ತ ಗಮನ ಹರಿಸಲಿದೆ. ಈ ಮೂಲಕ ತಯಾರಿಸಿದ ಪೇಪರ್ ಮೇಲರ್ ಗಳು ಸಾಮಾನ್ಯ ಪ್ಯಾಕೇಜಿಂಗ್ ಗೆ ಸಮನಾದ ಸಾಮರ್ಥ್ಯವನ್ನು ಹೊಂದಿರುತ್ತವೆ. ಇದು ಕೃಷಿ ತ್ಯಾಜ್ಯವನ್ನು ಮೌಲ್ಯಯುತ ಪ್ಯಾಕೇಜಿಂಗ್ ವಸ್ತುವನ್ನಾಗಿ ಮಾಡುವ ಮೂಲಕ ಭಾರತದಲ್ಲಿ ಬೆಳೆಗಳ ಕಳೆಯನ್ನು ಸುಡುವ ಸಮಸ್ಯೆಯನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಅಲ್ಲದೆ, ಇದು ಆಮದು ಮಾಡಿಕೊಳ್ಳುವ ಮರದ ತಿರುಳಿನ




ಮೇಲಿನ ಅವಲಂಬನೆಯನ್ನು ತಗ್ಗಿಸುತ್ತದೆ ಮತ್ತು ಕೃಷಿ ತ್ಯಾಜ್ಯಕ್ಕೆ ಮಾರುಕಟ್ಟೆ ಒದಗಿಸುವ ಮೂಲಕ ರೈತರಿಗೆ ಹೆಚ್ಚುವರಿ ಆದಾಯವನ್ನು ತಂದುಕೊಡಲಿದೆ.

ಐಐಟಿ ರೂರ್ಕಿಯ ಪೇಪರ್ ಮತ್ತು ಪ್ಯಾ–ಕೇಜಿಂಗ್ ಟೆಕ್ನಾಲಜಿ ವಿಭಾಗದೊಂದಿಗಿನ ಈ ಸಹಭಾಗಿತ್ವವು, ಮುಂದಿನ 15 ತಿಂಗಳ ಅವಧಿಯಲ್ಲಿ ಪ್ರಯೋಗಾಲಯ ಮಟ್ಟದ ಅಭಿವೃದ್ಧಿ ಮತ್ತು ಪರೀಕ್ಷೆಯೊಂದಿಗೆ ಪ್ರಾರಂಭವಾಗಲಿದೆ. ಈ ಪರೀಕ್ಷೆಗಳು ಯಶಸ್ವಿಯಾದಲ್ಲಿ, ಮುಂದಿನ ವರ್ಷದ ಮಧ್ಯಭಾಗ ಅಥವಾ ಅಂತ್ಯದ ವೇಳೆಗೆ ಕೈಗಾರಿಕಾ ಮಟ್ಟದ ಪ್ರಯೋಗಗಳು, ಪ್ರಕ್ರಿಯೆ ದೃಢೀಕರಣ ಮತ್ತು ವಾಣಿಜ್ಯ ಉತ್ಪಾದನೆಗೆ ಅಮೆಜಾನ್ ಮುಂದಾಗಲಿದೆ.

ಈ ಕುರಿತು ಅಮೆಜಾನ್ ಇಂಡಿಯಾದ ಆಪರೇಷನ್ಸ್ ವಿಭಾಗದ ಉಪಾಧ್ಯಕ್ಷರಾದ ಅಭಿನವ್ ಸಿಂಗ್ ಮಾತನಾಡಿ, "ಅಮೆಜಾನ್ ನಲ್ಲಿ ನಾವು ಭಾರತದ ಅತ್ಯಂತ ವೇಗದ, ಸುರಕ್ಷಿತ ಮತ್ತು ವಿಶ್ವಾಸಾರ್ಹ ಕಾರ್ಯಾಚರಣಾ ಜಾಲವನ್ನು ನಿರ್ಮಿಸುತ್ತಿದ್ದೇವೆ ಮತ್ತು ನಿರ್ವಹಿಸುತ್ತಿದ್ದೇವೆ. ಇದನ್ನು ಮತ್ತಷ್ಟು ಸುಸ್ಥಿರವಾಗಿಸಲು ನಾವು ಬದ್ಧರಾಗಿದ್ದೇವೆ. ಈ ಪ್ರಯತ್ನದ ಭಾಗವಾಗಿ, ಬೆಳೆಗಳ ಉಳಿಕೆಗಳಿಂದ ನವೀನ ಪ್ಯಾಕೇಜಿಂಗ್ ಅಭಿವೃದ್ಧಿಪಡಿಸಲು ನಾವು ಐಐಟಿ ರೂರ್ಕಿ ಜೊತೆ ಕೈಜೋಡಿಸುತ್ತಿದ್ದೇವೆ. ಭಾರತವು ವಾರ್ಷಿಕವಾಗಿ ಸುಮಾರು 500 ಮಿಲಿಯನ್ ಟನ್ ಕೃಷಿ ತ್ಯಾಜ್ಯವನ್ನು ಉತ್ಪಾದಿಸುತ್ತದೆ. ಇದನ್ನು ಪ್ಯಾಕೇಜಿಂಗ್ ರೂಪದಲ್ಲಿ ಮರುಬಳಕೆ ಮಾಡುವ ಮೂಲಕ, ನಾವು ಸಾಂಪ್ರದಾಯಿಕ ಸಾಮಾಗ್ರಿಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವುದಲ್ಲದೆ, ಸರ್ಕ್ಯುಲರ್ ಎಕಾನಮಿಗೆ ಬೆಂಬಲ ನೀಡಬಹುದು" ಎಂದು ಹೇಳಿದರು.

## ಟಿಬಿ ನಿಯಂತ್ರಣಕ್ಕೆ ಪಿಡಿಓಗಳಿಗೆ ತರಬೇತಿ ಕಾರ್ಯಕ್ರಮ

• ಮಲ್ಲಮ್ಮ ನುಡಿ ವಾರ್ತೆ ಚಿತ್ತಾಪುರ

ಗ್ರಾಮ ಮಟ್ಟದಲ್ಲಿ ಟಿಬಿ ಕ್ಷಯರೋಗ ಮುಕ್ತ ಗ್ರಾಮ ಮಾಡಬೇಕಾದರೆ ಸ್ಥಳೀಯ ಗ್ರಾಮ ಪಂಚಾಯಿತಿ ಪಿಡಿಓ, ಅಧ್ಯಕ್ಷರು, ಸದಸ್ಯರು, ಇತರ ದಾನಿಗಳು ಸೇರಿ ಕ್ಷಯರೋಗ ಹೊಂದಿದ ರೋಗಿಗಳನ್ನು ದತ್ತು ಪಡೆದುಕೊಂಡು, ಅವರಿಗೆ 6 ತಿಂಗಳ ವರೆಗೆ ಪೌಷ್ಟಿಕ ಆಹಾರ ಒದಗಿಸುವ ಜವಾಬ್ದಾರಿ ತೆಗೆದುಕೊಳ್ಳಬೇಕು ಎಂದು ಚಿತ್ತಾಪುರ ಸಾರ್ವಜನಿಕ ಆಸ್ಪತ್ರೆ ತಾಲ್ಲೂಕು ವೈದ್ಯಾಧಿಕಾರಿ ಡಾ.ವೀರನಾಥ ಹೇಳಿದರು.

ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ತಂಬಾಕು ನಿಯಂತ್ರಣ ಕೋಶ ಸಂಯುಕ್ತಾಶ್ರಯದಲ್ಲಿ ಪರಿಣಾಮಕಾರಿ ಅನುಷ್ಠಾನ ಸಾಮರ್ಥ್ಯಾಭಿವೃದ್ಧಿ ಮತ್ತು ಮೇಲ್ವಿಚಾರಣೆ ಕುರಿತು ಪಟ್ಟಣದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಹಮ್ಮಿಕೊಂಡ ತರಬೇತಿ ಕಾರ್ಯಕ್ರಮದಲ್ಲಿ ಅಧಿಕಾರಿಗಳಿಗೆ ಅವರು ಮಾಹಿತಿ ನೀಡಿದರು.

ಕ್ಷಯರೋಗ ಹೊಂದಿರುವ ರೋಗಿಗೆ ರೋಗ ನಿಯಂತ್ರಣಕ್ಕಾಗಿ ಸರಕಾರದಿಂದ ಪ್ರತಿ ತಿಂಗಳು 1000 ರೂಪಾಯಿ ನೀಡಲಾಗುತ್ತಿದೆ. ಆದರೂ ರೋಗಿಯು ಸರಿಯಾದ ಪೌಷ್ಟಿಕ ಆಹಾರದ ಕ್ರಮ ಅನುಸರಿಸದ ಪರಿಣಾಮ ರೋಗ ನಿಯಂತ್ರಣಕ್ಕೆ ಬರುತ್ತಿಲ್ಲ. ಆದ್ದರಿಂದ ಗ್ರಾಮ ಮಟ್ಟದಲ್ಲೇ ಕ್ಷಯ ರೋಗಿಗಳನ್ನು ದತ್ತು ಪಡೆದುಕೊಂಡು, ಅವರಿಗೆ




ಬೇಕಾದ ಪೌಷ್ಟಿಕ ಆಹಾರವನ್ನು ನೀಡಿ, ಟಿಬಿ ಮುಕ್ತ ಗ್ರಾಮ ಮಾಡುವುದು ಕಡ್ಡಾಯವಾಗಿದೆ ಎಂದು ಸರಕಾರ ಆದೇಶ ಹೊರಡಿಸಿದ ಪರಿಣಾಮ ಟಿಬಿ ಮುಕ್ತ ಗ್ರಾಮ ಮಾಡುವುದು ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯಾಗಿದೆ.

ರಂಭದಲ್ಲಿ ಚಿತ್ತಾಪುರ ತಾಲೂಕಿನ ಭೀಮನಳ್ಳಿ, ಸನ್ನತಿ, ದಂಡೋತಿ, ಕಮರವಾಡಿ, ಕಡಬೂರು ಗ್ರಾಮಗಳಲ್ಲಿ ಟಿಬಿ ಮುಕ್ತ ಗ್ರಾಮ ಪಂಚಾಯಿತಿ ಘೋಷಣೆ ಮಾಡಬೇಕಾಗಿದೆ. ಇದರಿಂದ ಸ್ಥಳೀಯ ಗ್ರಾಮ ಪಂಚಾಯಿತಿ ಕ್ಷಯರೋಗ ತಡೆಗಟ್ಟುವ ಅಭಿಯಾನದಲ್ಲಿ ಕೈಜೋಡಿಸಬೇಕು ಎಂದು ತಾಲ್ಲೂಕು ವೈದ್ಯಾಧಿಕಾರಿ ಹೇಳಿದರು.

ಕ್ಷಯ ರೋಗ ಮುಕ್ತ ಗ್ರಾಮದ ಪ್ರಮುಖ ಅಂಶಗಳು: ವಯಸ್ಕರಿಗೆ ಃಅಉ ಲಸಿಕೆ: 16 ಜಿಲ್ಲೆಗಳಲ್ಲಿ ವಯಸ್ಕರಿಗೆ ಬಿಸಿಜಿ ಲಸಿಕೆ ನೀಡುವ ಬೃಹತ್ ಅಭಿಯಾನಕ್ಕೆ ಚಾಲನೆ ನೀಡಲಾಗಿದೆ, ಇದು ರೋಗ ತಡೆಗಟ್ಟುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ಕ್ಷಯ ರೋಗದ (ಖಿಃ) ಸಾಮಾನ್ಯ ನಿಯಂತ್ರಕ ಕ್ರಮಗಳಲ್ಲಿ ರೋಗಿಗಳಿಗೆ 6–12 ತಿಂಗಳ ಕಾಲ ನಿರಂತರ ಔಷಧಿ ನೀಡಿಕೆ (ಆಔಖಿಖ), ಕೆಮ್ಮುವಾಗ ಬಾಯಿ ಮುಚ್ಚಿಕೊಳ್ಳುವುದು, ಉತ್ತಮ ವಾತಾಯನ (ಗಿಜಟಿ–ಣುಟಚಿಣುಂಟಿ), ಮತ್ತು ಬಾಲ್ಯದಲ್ಲಿ ಬಿ.ಸಿ.ಜಿ (ಃಅಉ) ಲಸಿಕೆ ಪಡೆಯುವುದು ಮುಖ್ಯ. ಸೋಂಕಿತರೊಂದಿಗೆ ನಿಕಟ ಸಂಪರ್ಕ ಕಡಿಮೆ ಮಾಡುವುದು, ಪೌಷ್ಟಿಕ ಆಹಾರ, ಮತ್ತು ರೋಗಲಕ್ಷಣಗಳಿದ್ದಲ್ಲಿ ಶೀಘ್ರ ಪರೀಕ್ಷೆ ಮಾಡಿಸಿಕೊಳ್ಳುವುದು ರೋಗ ಹರಡುವುದನ್ನು ತಡೆಗಟ್ಟ ಬಹುದಾಗಿದೆ ಎಂದು ಟಿಬಿ ಬಗ್ಗೆ ಪಿಡಿಓ ಅಧಿಕಾರಿಗಳಿಗೆ ತರಬೇತಿ ನೀಡಲಾಯಿತು.

**ಕ್ಷಯ ರೋಗಿಗಳ ಆಹಾರ ಪದ್ದತಿ:** ಅಪೌಷ್ಟಿಕತೆಯಿಂದ ಬಳಲುವ ಜನರಲ್ಲಿ ಟಿಬಿ ಸೋಂಕು ಕಾಣಿಸಿಕೊಳ್ಳುತ್ತದೆ. ಸರಿಯಾದ ಪೌಷ್ಟಿಕಾಂಶದ ಕೊರತೆ ಉಂಟಾದಾಗ ಕ್ಷಯ ರೋಗದ ಬ್ಯಾಕ್ಟೀರಿಯಾಗಳು ದೇಹವನ್ನು ಅಧಿಕ ಪ್ರಮಾಣದಲ್ಲಿ ಬಾಧಿಸುತ್ತವೆ. ಹಾಗಾಗಿ ಅಂತಹ ಸಮಯದಲ್ಲಿ ಆರೋಗ್ಯವನ್ನು ಸುಧಾರಿಸುವಂತಹ ಜೀವಸತ್ವ, ಖನಿಜಾಂಶಗಳು ಮತ್ತು ಪೋಷಕಾಂಶಗಳನ್ನು ಹೊಂದಿರುವ ಆಹಾರಗಳನ್ನು ಸೇವಿಸಬೇಕು. ಕಬ್ಬಿಣಾಂಶ, ವಿಟಮಿನ್ ಬಿ, ಹೆಚ್ಚಿಸುವಂತಹ ಹಸಿರು ತರಕಾರಿ, ಸೊಪ್ಪು, ಸಿರಿಧಾನ್ಯಗಳ ಆಹಾರ, ಕ್ಯಾ–ರೆಟ್, ಚೆರ್ರಿ, ಟೊಮ್ಯಾಟೋ ಹಾಗೂ ವಿಟಮಿನ್ ಸಿ ಭರಿತವಾದ ಹಣ್ಣು ಮತ್ತು ತರಕಾರಿಗಳನ್ನು ಹೆಚ್ಚು ಸೇವಿಸಬೇಕು. ಎಂದು ತಾಲ್ಲೂಕು ಕ್ಷಯ–ರೋಗ ಹಿರಿಯ ಮೇಲ್ವಿಚಾರಕ ಉದಯಕುಮಾರ್ ಭಾಗೋಡಿ ಮಾಹಿತಿ ನೀಡಿದರು.

ಇಓ ಮಹ್ಮದ್ ಅಕ್ರಮಪಾಶಾ, ಮನರೇಗಾ ಸಹಾಯಕ ನಿರ್ದೇಶಕ ಪಂಡಿತ್ ಸಿಂದೆ, ಶ್ರೀಮಂತ ಸಂಗವಿ, ಮನರೇಗಾ ಜಿಲ್ಲಾ ತಾಂತ್ರಿಕ ಸಿಬ್ಬಂದಿ ರಾಜು ವಂಟಿ, ಗಣೇಶ, ತಾಲ್ಲೂಕು ಕ್ಷಯರೋಗ ಹಿರಿಯ ಮೇಲ್ವಿಚಾರಕ ಉದಯಕುಮಾರ್ ಭಾಗೋಡಿ, ಶ್ರೀಕಾಂತ್ ಇದ್ದರು.

**ತಾಲೂಕಿನಲ್ಲಿ ಕ್ಷಯರೋಗ ನಿಯಂತ್ರಣ–ಕ್ಕಾಗಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಟಿಬಿ ಸೋಂಕಿತರನ್ನು ದತ್ತು ಪಡೆದುಕೊಂಡು, ಅವರ ಆರೋಗ್ಯ ಸುಧಾರಣೆ, ಮತ್ತು ಕ್ಷಯರೋಗ ತಡೆಗಟ್ಟಲು ಮುತುವರ್ಜಿವಹಿಸಿ ಅಗತ್ಯ ಕ್ರಮ ಜರುಗಿಸಲು ಪಂಚಾಯಿತಿ ಪಿಡಿಓ ಗಳಿಗೆ ಆದೇಶ ನೀಡಲಾಗುವುದು.**

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927
(RNINO:KARKAN/2011/48371)